# ವಿಶ್ವವಾಣಿ ಸಮರ್ಪಣ್

ಪ್ರಾರ್ಥಿಸುವ ಹೃದಯಗಳಿಗೆ ಪ್ರೀತಿಯ ಪತ್ರಿಕೆ

ರೂ. 10/– | ಸಂಪುಟ 25 – ಸಂಚಿಕೆ 06 | ಜೂನ್ ’24




## ಯೇಸು ಕ್ರಿಸ್ತನು ಸರ್ವರಿಗೂ ಕರ್ತನಾಗಿದ್ದಾನೆಂಬದೇ ಸತ್ಯವೇದವು

ಅಪೊ. 10:34

ಜೂನ್ '24

ವಿಶ್ವವಾಣಿ ಸಮರ್ಪಣ್
ಪ್ರಾರ್ಥಿಸುವ ಹೃದಯಗಳಿಗೆ ಪ್ರೀತಿಯ ಪತ್ರಿಕೆ

This mission journal from Vishwa Vani is being published in Tamil, Malayalam, Odia, Telugu, Kannada, Marathi, Gujarati, Hindi, Bengali, English, Kokborok, Soura and Nepali languages. Yearly Subscription: Rs. 100/-

**ಪ್ರಕಾಶಕರ ಕಾರ್ಯಾಲಯ :**
1-10-28/247, ಆನಂದಪುರಂ, ಕುಶಾಯಗುಡ,
ಇಸಿಐಎಲ್ ಪೋಸ್ಟ್, ಹೈದರಾಬಾದ್ - 500 062.
ದೂ: 040-27125557, ಫ್ಯಾಕ್ಸ್: 27126004,
ಈ–ಮೇಲ್: samarpan@vishwavani.org

**ರಾಜ್ಯ ಕಾರ್ಯಾಲಯ :**
24/2, ವಿಶ್ವವಾಣಿ, ಬೋರ್ ಬ್ಯಾಂಕ್ ರಸ್ತೆ,
ಬೆನ್ಸನ್ ಟೌನ್, ಬೆಂಗಳೂರು – 560 046.
ದೂರವಾಣಿ : 080-23333509.
ಈ–ಮೇಲ್: vishwavaninet@vishwavani.org

## ವಿಭಾಗಗಳು

02 ಆಲೋಚಿಸುವ ಅಂಶಗಳು
03 ಕಾರ್ಯ ನಿರ್ದೇಶಕರಿಂದ
07 ವಿಶೇಷ ಅಂಕಣ
11 ಪ್ರಾರ್ಥನೆ
14 ಸೂಕ್ಷ್ಮ ವಿಚಾರಗಳು
18 ನೆಟ್‌ವರ್ಕ್ ಥೀಮ್‌ರ್ಮಣ್ಣರಿಂದ
21 ಕರ್ನಾಟಕ ರಾಜ್ಯ ಸಂಯೋಜಕರಿಂದ
34 ಕ್ಷೇತ್ರ ಸಮಾಚಾರ
34 ಪ್ರಸ್ತುತ ಸುದ್ದಿ




## ಎಮಿಲ್ ಅಣ್ಣನವರ ಆಲೋಚಿಸುವ ಅಂಶಗಳು...

- ಯಾಕೆ ಪ್ರತಿಯೊಬ್ಬರಿಗೂ ಸುವಾರ್ತೆಯು ಅವಶ್ಯಕವಾಗಿದೆ? ಎಲ್ಲರೂ ಪಾಪವಾಡಿ ದೇವರ ಮಹಿಮೆಯಿಂದ ದೂರವಾಗಿದ್ದಾರೆ. ಯಾಕೆ ಪ್ರತಿಯೊಬ್ಬರಿಗೂ ರಕ್ಷಕನು ಅವಶ್ಯವಾಗಿದ್ದಾನೆ? ಯಾಕಂದರೆ ಪಾಪದ ಸಂಬಳವು ಮರಣವಾಗಿದೆ.
- ಸೈತಾನನು ಕೇವಲ ನನಗೆ ಹಾಗೂ ಕೇವಲ ನಿಮಗೆ ಎಂದು ಹೇಳುವನು. ಆದರೆ ಯೇಸು ನಿಮಗೆ – ನಿಮಗೇ ಎಂದು ಹೇಳುವನು.
- ನಮ್ಮ ಕೈಗಳಲ್ಲಿ ಅದನ್ನು ಬಿಗಿಯಾಗಿ ಹಿಡಿದುಕೊಂಡಾಗ ನಾವು ಮೌನವಾಗಿರುತ್ತೇವೆ. ನಮ್ಮ ಕೈಗಳನ್ನು ಚಾಚಿ ಇತರರಿಗೆ ಅದನ್ನು ಕೊಡುವಾಗ ಆಗ ಅದು ಸುವಾರ್ತೆಯಾಗುತ್ತದೆ.
- ನಿಮ್ಮ ದೇಹಗಳಿಗೆ ಕಚ್ಚುವ ಕ್ರಿಮಿಕೀಟಗಳನ್ನು ನೀವು ಹಿಡಿದು ಹೊಡೆಯಬಹುದು. ಆದರೆ ನಿಮ್ಮ ಹೃದಯವನ್ನು ಕಚ್ಚುವ ವಿಷವನ್ನು ಅದು ಹೇಗೆ ನೀವು ಹಿಡಿದು ಹೊಡೆಯುವಿರಿ?
- ಸರ್ಪವು ದೇಹವನ್ನು ಕಚ್ಚುತ್ತದೆ. ಆದರೆ ಘಟಸರ್ಪವು ಆತ್ಮವನ್ನು ಕಚ್ಚುತ್ತದೆ.
- ಸರ್ಪ ಕಚ್ಚಿದರೆ ನಮಗೆ ವೈದ್ಯನು ಬೇಕಾಗುವನು. ಆದರೆ ಘಟಸರ್ಪ ಕಚ್ಚಿದರೆ ನಮಗೆ ಪರಲೋಕದ ವೈದ್ಯನು ಬೇಕಾಗುವನು.
- ಎಲ್ಲರಿಗೂ ಸುವಾರ್ತೆಯು, ಎಲ್ಲರೂ ಇದನ್ನು ಸಾರಲು ಸಾಧ್ಯವಿಲ್ಲ. ಆದರೆ ಯೇಸುವನ್ನು ನೋಡುವವರೆಲ್ಲರೂ ಸಾರುವರು. ಇಬ್ಭಾಗವಾಗುವವರು ಸಮಸ್ಯೆಗೆ ಒಳಗಾಗುವರು.
- ಒಂದಾಗಿ ಕೆಲಸ ಮಾಡುವವರು ಸಂತೋಷಪಡುವರು. ಧರ್ಮವು ಏನು ಹೇಳುವದು?
  ಎಲ್ಲವೂ ಎಲ್ಲರಿಗೂ
  ಸತ್ಯವೇದವು ಏನು ಹೇಳುವದು?
  ಒಬ್ಬನು ಎಲ್ಲರಿಗೂ.

# ಕಾರ್ಯನಿರ್ದೇಶಕರ ಪತ್ರ

ಎಲ್ಲರಿಗೂ ಒಳ್ಳೆಯದನ್ನು ಮತ್ತು ಎಲ್ಲರನ್ನೂ ದುಷ್ಟಶಕ್ತಿಗಳ ಬಂಧನಗಳಿಂದ ಬಿಡುಗಡೆ ಮಾಡುವ ನಮ್ಮ ಕರ್ತನಾದ ಯೇಸು ಕ್ರಿಸ್ತನ ಸರಿಸಾಟಿಯಿಲ್ಲದ ನಾಮದಲ್ಲಿ ಶುಭವಂದನೆಗಳು.

**ದೇವರು ನಿಷ್ಪಕ್ಷಪಾತಿ:** ಯೇಸು ಕ್ರಿಸ್ತನೇ ಕರ್ತನು ಮತ್ತು ಆತನನ್ನು ನಂಬುವ ಎಲ್ಲರೂ ಪಾಪಗಳ ಕ್ಷಮೆಯನ್ನು ಮತ್ತು ನಿತ್ಯಜೀವವನ್ನು ಪಡೆದುಕೊಳ್ಳುತ್ತಾರೆ ಎಂದು ಅವರ ಭಾಷೆಯಲ್ಲಿ ಇತರರಿಗೆ ಸಾಕ್ಷಿಯಾಗಬೇಕೆಂಬುದನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಆಜ್ಞಾಪಿಸಲ್ಪಟ್ಟಿದೆ. ಜನರನ್ನು ಕರ್ತನಾದ ಯೇಸು ಕ್ರಿಸ್ತನ ಶಿಷ್ಯರನ್ನಾಗಿ ಮಾಡಲು ನಾವು ನಿಯೋಜಿಸಲ್ಪಟ್ಟಿದ್ದೇವೆ! ಯೇಸುವಿನ ಹೆಸರಿನ ಕುರಿತು ಒಮ್ಮೆಯಾದರೂ ಕೇಳದೆ ಇರುವ ಗ್ರಾಮಗಳಿಗೆ ಸುವಾರ್ತೆಯನ್ನು ಸಾರುವ ಮೂಲಕ ಮತ್ತು ಭಾರತೀಯ ವಿಶ್ವಾಸಿಗಳ ಪ್ರಾರ್ಥನೆ ಮತ್ತು ಬೆಂಬಲದ ಮೂಲಕ ಭಾರತೀಯರ ಹೃದಯಗಳ ಮತ್ತು ಮನೆಗಳನ್ನು ಯೇಸುವಿನ ನಮ್ಮ ಮೊದಲ–ತಲೆಮಾರಿನ ವಿಶ್ವಾಸಿಗಳು ತಮ್ಮ ಹೃದಯಗಳ ಬದಲಾವಣೆಯ ಕುರಿತು ಜಗತ್ತಿಗೆ ಸಾಕ್ಷಿಗಳಾಗಿದ್ದಾರೆ ಮತ್ತು ಅವರ ಧರ್ಮದ ಕಾರ್ಯಗಳ ಮೂಲಕ ಅಲ್ಲ. ಅಲ್ಲದೇ ಅವರು ಪ್ರಾರ್ಥಿಸುತ್ತಾರೆ ಮತ್ತು ಸತ್ಯವೇದವನ್ನು ಪ್ರತಿದಿನ ಓದುತ್ತಾರೆ. ಎಲ್. ಇ. ಜಿ ಕೇಂದ್ರಗಳ ಮೂಲಕ ಅವರು ತಮ್ಮ ನಂಬಿಕೆಯಲ್ಲಿ ಬಲವನ್ನು ಹೊಂದುತ್ತಾರೆ!

ನಮ್ಮ ಪ್ರಾರ್ಥನೆ ಮತ್ತು ಪ್ರಯಾಸವೇನೆಂದರೆ ನಂಬಿಕೆಯ ಅರಿಕೆಯ ಸೇವೆಗಳು ಮತ್ತು ಪ್ರದೇಶದಲ್ಲಿ ದೇವಾಲಯಗಳ ಸಮರ್ಪಣೆಯು ನಿಯಮಿತವಾದ ಕಾರ್ಯಕ್ರಮವಾಗಿರಬೇಕು ಮತ್ತು ಇದಕ್ಕಾಗಿ ನಿಮ್ಮ ಅಮೂಲ್ಯವಾದ ಪಾಲ್ಗೊಳ್ಳುವಿಕೆ ಮುಂದುವರಿಯಬೇಕು!

**ಈ ಹಟ್ಟಿಗೆ ಸೇರದ ಕುರಿಗಳು:** ಹಟ್ಟಿ ಎಂಬ ಪದವು ಯೆಹೂದಿ ಜನರಾಗಿರುವ ಇಸ್ರಾಯೇಲ್ಯರನ್ನು ಸೂಚಿಸುತ್ತದೆ ಎಂಬುದು ಯೆಹೆಜ್ಕೇಲನು 34:14,15 ಮತ್ತು ವಿಮೋಚನಕಾಂಡ 19:5,6 ಹೇಳುತ್ತದೆ. ಅದು ಇತರ ನಂಬಿಕೆಗಳ ಜನರನ್ನು ಸಹ ಉಲ್ಲೇಖಿಸಬಹುದು ಎಂಬುದನ್ನು ನಾವು ಯೆಶಾಯ 49:6 ಮತ್ತು ಲೂಕ 2:30ರಲ್ಲಿ ಓದುತ್ತೇವೆ. ದೇವರು ಯೆಹೂದ್ಯರಿಗೆ ಮಾತ್ರ ದೇವರಾಗಿದ್ದಾನೋ? ಅನ್ಯಜನಗಳಿಗೆ ಸಹ ದೇವರಲ್ಲವೇ?. ಹೌದು, ಅನ್ಯಜನಗಳಿಗೆ ಸಹ, ಎಂಬುದಾಗಿ ರೋಮಾಪುರದವರಿಗೆ 3:29 ಹೇಳುತ್ತದೆ. ಅಲ್ಲದೇ ಗಲಾತ್ಯದವರಿಗೆ 3:28ರಲ್ಲಿ ಮತ್ತು ಎಫೆಸದವರಿಗೆ 2:11–22ರಲ್ಲಿ ನಾವೆಲ್ಲರೂ ಕ್ರಿಸ್ತನಲ್ಲಿ ಒಂದೇ ಎಂಬುದನ್ನು ಓದುತ್ತೇವೆ.

ಆದಿಕಾಂಡ 12:3ರಲ್ಲಿ ಹೇಳುವಂತೆ ದೇವರು ಅಬ್ರಹಾಮನಿಗೆ ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು ಎಂದು ವಾಗ್ದಾನ ಮಾಡಿದನು. ರೋಮಾಪುರದವರಿಗೆ 1:16ರ ಪ್ರಕಾರ ಸುವಾರ್ತೆಯು ಮೊದಲು ಯೆಹೂದ್ಯರಿಗೆ (ಮತ್ತಾ. 10:5–7; ಮತ್ತಾ. 15:24), ಪ್ರಕಟಿಸಲಾಗಿದ್ದರೂ ಸಹ, ಸುವಾರ್ತೆಯು ಮೊದಲು ಯೆಹೂದ್ಯರಿಗೆ ಮತ್ತು ಆನಂತರ ಅನ್ಯಜನಗಳಿಗೆ ರಕ್ಷಣೆಯನ್ನು ತರುತ್ತದೆ. ಯೇಸು ಅನ್ಯಜನರ ಮಧ್ಯದಲ್ಲಿ ಬೆಳಗುವ ಬೆಳಕು ಮತ್ತು ಇಸ್ರಾಯೇಲ್ಯರಿಗೆ ಮಹಿಮೆಯು ಆಗಿದ್ದಾನೆ! ಯೋಹಾನ 11:51–52 ಯೇಸು ಆ ಜನಕ್ಕೋಸ್ಕರ ಮಾತ್ರವಲ್ಲದೆ ಚದರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವುದಕ್ಕೆ ಸಹ ಸಾಯುವದಕ್ಕಿದ್ದನು ಎಂಬುದನ್ನು ಬಹಿರಂಗಪಡಿಸುತ್ತದೆ. ಆದದರಿಂದ, ಮಂದೆಗೆ ಸೇರದ ಕುರಿಗಳಿಗಾಗಿ ನಾವು ಪ್ರಾರ್ಥಿಸಬೇಕು ಮತ್ತು ಕೆಲಸ ಮಾಡಬೇಕು.

**ನನ್ನ ಬಳಿಗೆ ಬರುವವರನ್ನು ನಾನು ಕೈಬಿಡುವುದೇ ಇಲ್ಲ:** ಪ್ರಿಯರೇ, ಪ್ರತಿಯೊಬ್ಬರೂ ದೇವರ ರಾಜ್ಯದ ಭಾಗವಾಗಿರಬಹುದು. ಯೇಸುವಿನ ಕೊನೆಯ ಆಜ್ಞೆಗೆ ವಿಧೇಯರಾಗುವ ಮೂಲಕ ನಾವು ಹಟ್ಟಿಯಲ್ಲಿಲ್ಲದ ಕುರಿಗಳನ್ನು ತರಬಹುದು. ಹಟ್ಟಿಯಲ್ಲಿ ಇನ್ನೂ ಸ್ಥಳವಿರುವುದರಿಂದ ದೇವರ ಮನೆಯನ್ನು ತುಂಬಲು ನಾವು ಜನರನ್ನು ಆಮಂತ್ರಿಸುವುನ್ನು ಮುಂದುವರೆಸುತ್ತೇವೆ (ಲೂಕ 14:23). ಒಳಗೆ ಪ್ರವೇಶಿಸಲು ಸಿದ್ಧವಿರುವ ಎಲ್ಲರಿಗೂ ವಿಶ್ರಾಂತಿ, ಸಮಾಧಾನ ಮತ್ತು ಶುಭವೂ ಇರುತ್ತದೆ.

**ಸಮಾರ್ಯದ ಸ್ತ್ರೀ:** ಯೋಹಾನನ ಸುವಾರ್ತೆ 4ನೆಯ ಅಧ್ಯಾಯವು ಅದ್ಭುತವಾದ ಭಾಗವಾಗಿದ್ದು, ಯೇಸು ಸಮಾರ್ಯದ ಸ್ತ್ರೀಯನ್ನು ಆರಿಸಿಕೊಂಡು ಅವಳ ಹೃದಯವನ್ನು ಬದಲಾಯಿಸಿದನು ಮತ್ತು ಅವಳ ಊರಿನಲ್ಲಿರುವ ಇತರ ಜನರನ್ನು ಪರಿವರ್ತಿಸಲು ಸವಾಲು ಹಾಕಿದನು ಎಂಬುದನ್ನು ಪ್ರಕಟಿಸುತ್ತದೆ. 39 ರಿಂದ 42ರ ವರೆಗಿನ ವಚನಗಳಿಂದ ನಾವು ಯೇಸು ಯೆಹೂದ್ಯರಿಗೆ ಮಾತ್ರವಲ್ಲದೆ ಸಮಾರ್ಯದವರಿಗೂ ಸಹ ರಕ್ಷಕನಾಗಿದ್ದಾನೆ ಎಂಬುದಕ್ಕೆ ಸಮಾರ್ಯದ ಸ್ತ್ರೀ ಸಾಕ್ಷಿಯಾದಳು ಮತ್ತು ಅನೇಕ ಹಳ್ಳಿಗರು ಯೇಸುವನ್ನು ನಂಬಿದರು ಎಂಬುದನ್ನು ಓದುತ್ತೇವೆ.

ಯೇಸುವಿನ ಚಿತ್ತ ಕೆಲಸದ ಮೂಲಕ ಮತ್ತು ಸಮಾರ್ಯದ ಸ್ತ್ರೀಯ ಸಣ್ಣ ಸಾಕ್ಷಿಯ ಮೂಲಕ ಬಂದಿರುವ ಹೆಚ್ಚಿನ ಫಲಿತಾಂಶಗಳನ್ನು ಪರಿಗಣಿಸಿರಿ.

**ಸುಂಕದವನಾದ ಜಕ್ಕಾಯ:** ನಾವು ಲೂಕ 19:1–10ರಲ್ಲಿ ಸುಂಕದವನಾದ ಜಕ್ಕಾಯನ ಕುರಿತು ಓದುತ್ತೇವೆ. ಯೇಸು ಸುಂಕದವರ ಮತ್ತು ಪಾಪಿಗಳ ಸ್ನೇಹಿತ ಎಂಬುದಾಗಿ ಜಕ್ಕಾಯನು ಕೇಳಿದ್ದನು (ಮತ್ತಾಯ 11:19) ಮತ್ತು ಅವನು ಯೇಸುವನ್ನು ನೋಡಲು ಆಲದ ಮರವನ್ನು ಹತ್ತಿದನು. ಯೇಸು ತನ್ನ ಮನೆಯಲ್ಲಿ ಉಳಿದುಕೊಳ್ಳಲು ಬಯಸಿ ತನ್ನನ್ನು ತಕ್ಷಣ ಕೆಳಗೆ ಇಳಿದು ಬರುವಂತೆ ನೀಡಿದ ಆಮಂತ್ರಣ ಕೇಳಿ ಅವನು ರೋಮಾಂಚಿತನಾಗಿದ್ದನು. ಜಕ್ಕಾಯನು ತಕ್ಷಣವೇ ಕೆಳಗೆ ಇಳಿದನು ಮತ್ತು ಯೇಸುವಿನೊಂದಿಗೆ ತನ್ನ ಮನೆಗೆ ನಡೆದನು. ಈಗ ಅವನು ಒಂದು ಕ್ಷಣ ನಿಂತನು ಮತ್ತು ಆಲೋಚಿಸಿದನು. ಅವನ ಹೃದಯ ಪರಿವರ್ತನೆಯಾಯಿತು. ಅನ್ಯಾಯವಾಗಿ ದುಡಿದ ಹಣದ ನಾಲ್ಕು ಪಟ್ಟು ಹಣವನ್ನು ಜನರಿಗೆ ಹಿಂದಿರುಗಿಸಲು ನಿರ್ಧರಿಸಿದನು. ಈ ಪರಿವರ್ತನೆಯು ಯೇಸು ಅವನ ಹೃದಯ ಮತ್ತು ಮನೆಯೊಳಗೆ ಬಂದ ಕಾರಣದಿಂದಾಗಿ ಆಯಿತು! ಅವನು ನೂತನ ಸೃಷ್ಟಿಯಾದನು (2ಕೊರಿ. 5:17). ಪಾಪ ಮತ್ತು ಕೆಟ್ಟತನದಿಂದ ಸತ್ತು ಹೋಗಿದ್ದ ಅವನ ಜೀವನವು ನೂತನ ಜೀವನವನ್ನು ಪಡೆದುಕೊಂಡಿತು. ಅವನು ಹೃದಯದಲ್ಲಿ ಯೆಹೂದ್ಯ ಮತ್ತು ಅಬ್ರಹಾಮನ ಮಗನಾದನು (ಗಲಾ. 3:7–8). ಎಂತಹ ಸಂತೋಷ! ಕ್ರಿಸ್ತನು ನನ್ನ ಎಲ್ಲಾ ಪಾಪಗಳನ್ನು ಕ್ಷಮಿಸಿದ್ದಾನೆ ಈ ಸಾಲುಗಳು ನಿಮ್ಮ ಜೀವನದಲ್ಲಿ ನಿಜವಾಗಿವೆಯೋ?

**ಕಣ್ಣೀರಿನೊಂದಿಗೆ ಬಿತ್ತಿದ ಬೀಜಗಳು ಮತ್ತು ಉತ್ತಮವಾದ ನೆಲದಲ್ಲಿ ಬಿತ್ತಿದ ಬೀಜಗಳು:** ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು, ಎಂಬುದನ್ನು ನಾವು ಕೀರ್ತನೆ 126:6ರಲ್ಲಿ ನೋಡುತ್ತೇವೆ. ಶ್ರಮೆಯು ಅಳುವುದರೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಸಂತೋಷವು ಸಿವುಡುಗಳ ಹಾಡುಗಳೊಂದಿಗೆ ಮುಕ್ತಾಯಗೊಳ್ಳುತ್ತದೆ. ಅದರಂತೆಯೇ, ಸುವಾರ್ತೆಯ ಕೆಲಸದಲ್ಲಿ ಮೂವತ್ತು, ಅರವತ್ತು ಮತ್ತು ನೂರರಷ್ಟು ಫಲಗಳನ್ನು ಕೊಯ್ಯುತ್ತೇವೆ. ಸಮೃದ್ಧವಾದ ಫಸಲನ್ನು ಪಡೆಯಲು ನಾವು ಪ್ರಾರ್ಥನೆಯ ಮೂಲಕ ಹೆಚ್ಚಿನ ಪ್ರಯತ್ನವನ್ನು ಮಾಡುತ್ತಿದ್ದೇವೆ.

ದಯವಿಟ್ಟು ನಮ್ಮೊಂದಿಗೆ ಪ್ರಾರ್ಥಿಸಲು ಮುಂದೆ ಬನ್ನಿರಿ, ಸೇವೆಗಾಗಿ ದೇಣಿಗೆಯನ್ನು ಕೊಡಿರಿ, ಮತ್ತು ಸ್ವಯಂ–ಪ್ರೇರಣೆಯಿಂದ ಇದನ್ನು ಬೆಂಬಲಿಸಿರಿ.

ಉತ್ತರ ಭಾರತದಲ್ಲಿ ನಾವು ಅಹಿತಕರ ಸನ್ನಿವೇಶಗಳನ್ನು ಮತ್ತು ವಿರೋಧವನ್ನು ಎದುರಿಸುತ್ತಿದ್ದರೂ, ನಾವು ಹೊಸ ಅವಕಾಶಗಳನ್ನು ಪಡೆದುಕೊಳ್ಳುತ್ತಿದ್ದೇವೆ. ಹೊಸ ದೇವಾಲಯಗಳ ಸ್ಥಾಪನೆ ಹೆಚ್ಚಾಗುತ್ತಲಿದೆ. ಹೊಸ ಜನರು ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡುತ್ತಿದ್ದಾರೆ. ಪಠಾಣಕೋಟಿನಲ್ಲಿ ಹೊಸ ತರಬೇತಿ ಕೇಂದ್ರವನ್ನು ಕಟ್ಟಲು ನಾವು ಶ್ರಮಿಸುತ್ತಿದ್ದೇವೆ. ಉತ್ತರ ಭಾರತದ ದೇವಾಲಯಗಳು ಸಹ ನಮ್ಮ ಸೇವೆಯನ್ನು ಬೆಂಬಲಿಸುತ್ತಿವೆ. ಸೇವೆಯನ್ನು ನಡೆಸುತ್ತಿರುವ, ಉತ್ತರ ಭಾರತದ 3126 ಹಳ್ಳಿಗಳಿಗಾಗಿ ಪ್ರಾರ್ಥನೆಯನ್ನು ಮಾಡಿರಿ.

ವಿಶ್ವವಾಣಿ ಸೇವೆಗಳನ್ನು ಪೂರ್ವ ಮತ್ತು ಈಶಾನ್ಯ ಭಾರತದಲ್ಲಿ 3014 ಹಳ್ಳಿಗಳಲ್ಲಿ ನಡೆಸಲಾಗುತ್ತಿದೆ. ಮಣಿಪುರ ರಾಜ್ಯದಲ್ಲಿ ಅನೇಕ ಸಲ ಗಲಭೆಗಳಿದ್ದಾಗ್ಯೂ ಸಹ ಸೇವೆಯನ್ನು ಮುಂದುವರೆಸಲಾಗುತ್ತಿದೆ. ಕೊಕ್ಬೊರೊಕ್ ಭಾಷೆಯಲ್ಲಿರುವ ಸತ್ಯವೇದಗಳನ್ನು ತ್ರಿಪುರಾ ರಾಜ್ಯದಲ್ಲಿ ಮನೆ–ಮನೆಯ ಬಾಗಿಲಿಗೆ ವಿತರಿಸಲ್ಪಟ್ಟಿವೆ. ಮಿಜೊರಾಂ ರಾಜ್ಯದ ಬ್ಯಾಪ್ಟಿಸ್ಟ್ ಮತ್ತು ಪ್ರೆಸ್ಬಿಟೇರಿಯನ್ ದೇವಾಲಯಗಳೊಂದಿಗೆ ಕೆಲಸ ಮಾಡಲು ನಮಗೆ ಅವಕಾಶಗಳು ಸಿಕ್ಕಿವೆ. ದಯವಿಟ್ಟು ಅದಕ್ಕೋಸ್ಕರವಾಗಿ ಪ್ರಾರ್ಥನೆ ಮಾಡಿರಿ. ಆಸ್ಸಾಂನ 4500 ಹಳ್ಳಿಗಳಲ್ಲಿ ಸುವಾರ್ತೆತಯನ್ನು ಹಂಚಿಕೊಳ್ಳಲು ಸೇವಾಬದ್ದರಾಗಿರುವ ಸೇವಕರನ್ನು ಪಡೆಯುವಂತೆ ಪ್ರಾರ್ಥಿಸುವುದನ್ನು ಮುಂದುವರೆಸಿರಿ. ಹಿಮಾಲಯದಲ್ಲಿ ನಡೆಸಲಾಗುತ್ತಿರುವ ಸೇವೆಗಳಿಗಾಗಿ ಮತ್ತು ದೇವಾಲಯದ ಸ್ಥಾಪನೆಯ ಕಾರ್ಯಕ್ಕಾಗಿ ಸಹ ಪ್ರಾರ್ಥಿಸಿರಿ. 2025ರ ವೇಳೆಗೆ ಸಿಕ್ಕಿಂನ 200 ಹಳ್ಳಿಗಳಲ್ಲಿ ಸುವಾರ್ತೆಯನ್ನು ಹಂಚಿಕೊಳ್ಳಲು ನಾವು ಶ್ರಮಿಸುತ್ತಿದ್ದೇವೆ.

ಸೇವೆಯು ಪಶ್ಚಿಮ ಭಾರತದ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ 1422 ಹಳ್ಳಿಗಳಲ್ಲಿ ಹರಡಲ್ಪಟ್ಟಿದೆ. ಗುಜರಾತಿನಲ್ಲಿ ತರಬೇತಿ ಮುಗಿಸಿದ 24 ಹೊಸ ಸೇವಕರಿಗೆ ಸೇವಾ ನಿಯೋಜನೆಯು 11–05–2024ರಂದು ನಡೆಯಿತು. 120 ಹೊಸ ಗ್ರಾಮಗಳಲ್ಲಿ ಸುವಾರ್ತೆಯನ್ನು ಹಂಚಿಕೊಳ್ಳಲು ಸ್ಥಳೀಯ ಕಾರ್ಯಕರ್ತರು ತಮ್ಮನ್ನು ತಾವು ಸಿದ್ಧಪಡಿಸಿಕೊಂಡಿದ್ದಾರೆ. ಸೇವಾ ಕ್ಷೇತ್ರದಲ್ಲಿ ದೇವಾಲಯದ ಸ್ಥಾಪನೆಗಾಗಿ ನಮಗೆ ಸೂಕ್ತವಾದ ಹೊಸ ಸ್ಥಳ ಸಿಗಲಿ ಎಂದು ಪ್ರಾರ್ಥಿಸಿರಿ.

ದಕ್ಷಿಣ ಪ್ರಾಂತ್ಯದ ತೆಲಂಗಾಣ, ಕರ್ನಾಟಕ ಮತ್ತು ಆಂಧ್ರಪ್ರದೇಶದ 2892 ಹಳ್ಳಿಗಳಲ್ಲಿ ಸೇವೆಯು ಪ್ರತವರ್ಧಮಾನಕ್ಕೆ ಬರುತ್ತಿದೆ. ಕ್ಷೇತ್ರಗಳಲ್ಲಿ ದೇವಾಲಯದ ಕಟ್ಟಡಗಳು, ಮತ್ತು ಬೆಂಗಳೂರು ಪಟ್ಟಣದ ಕಛೇರಿ ನಿರ್ಮಾಣ ಪ್ರಗತಿಯಲ್ಲಿದೆ.

ಕಾರ್ಯಕಾರಿ ಯೋಜನೆಗಳನ್ನು ಪೂರೈಸಲು ವಿಶ್ವಾಸಿಗಳ ಮಧ್ಯದಲ್ಲಿ ನಡೆಯುವ ರಾಜ್ಯ ಶಿಬಿರಗಳಿಗಾಗಿ ದಯವಿಟ್ಟು ಪ್ರಾರ್ಥಿಸುವುದನ್ನು ಮುಂದುವರೆಸಿರಿ. ನಮ್ಮ ಜೊತೆಸೇವಕರು ಮತ್ತು ಆಗಾಗ್ಗೆ ಅನಾರೋಗ್ಯಕ್ಕೆ ಒಳಗಾಗುತ್ತಿರುವ ಅವರ ಕುಟುಂಬಗಳನ್ನು ಸಹ ನೆನಪಿಸಿಕೊಳ್ಳಿರಿ.

**ಸುವಾರ್ತಾ ಕೆಲಸವನ್ನು ಬೆಂಬಲಿಸುವವರು ಧನ್ಯರು:** ವಿಶ್ವವಾಣಿ ಉಳಿತಾಯ ಕಾಣಿಕೆ ಪೆಟ್ಟಿಗೆಗಳನ್ನು ಪಡೆದುಕೊಂಡಿರುವವರಿಗೆ ಮತ್ತು ಸೇವೆಯನ್ನು ಬೆಂಬಲಿಸುತ್ತಿರುವವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.



ರೂ. 4000/– ಪ್ರತಿ ತಿಂಗಳು ದೇಣಿಗೆ ಕೊಡುವ ಮೂಲಕ ಹಳ್ಳಿಗಳಲ್ಲಿ ಸುವಾರ್ತೆಯನ್ನು ಹಂಚಿಕೊಳ್ಳಲು ನಮಗೆ ಬೆಂಬಲ ನೀಡುವ ಕುಟುಂಬಗಳು ಮತ್ತು ದೇವಾಲಯಗಳಿಗೆ ನಾವು ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

- ಸೇವಕರುಗಳನ್ನು ಮತ್ತು ಅವರು ಮಾಡುತ್ತಿರುವ ಸೇವೆಯನ್ನು ತಮ್ಮ ಅನುದಿನದ ಪ್ರಾರ್ಥನೆಯಲ್ಲಿ ನೆನಪಿಸಿಕೊಳ್ಳುವ ಎಲ್ಲರಿಗೂ ನಾವು ಧನ್ಯವಾದಗಳನ್ನು ಸಲ್ಲಿಸುತ್ತೇವೆ.
- ಸ್ವಯಂ–ಸೇವಕರಿಗೆ ಮತ್ತು ಸೇವೆಯಲ್ಲಿ ಸ್ವಯಂ–ಪ್ರೇರಣೆಯಿಂದ ತಮ್ಮನ್ನು ತಾವು ತೊಡಗಿಸಿಕೊಂಡಿರುವ ನಾಯಕರುಗಳಿಗೆ ನಾವು ಧನ್ಯವಾದಗಳನ್ನು ಸಲ್ಲಿಸುತ್ತೇವೆ.
- ವಿಶ್ವವಾಣಿ ಸೇವೆಯ ವಿಶೇಷ ಅಗತ್ಯಗಳಿಗಾಗಿ ಮತ್ತು ದೇವಾಲಯದ ನಿರ್ಮಾಣ ಕಾರ್ಯಕ್ಕಾಗಿ ಹೃದಯಪೂರ್ವಕವಾಗಿ ದೇಣಿಗೆ ನೀಡಿದ ಎಲ್ಲರಿಗೂ ನಾವು ಧನ್ಯವಾದಗಳನ್ನು ಸಲ್ಲಿಸುತ್ತೇವೆ.
- ದೇವಾಲಯಗಳಲ್ಲಿ ದೇವರ ವಾಕ್ಯ ಮತ್ತು ವಿಶ್ವವಾಣಿಯ ಸೇವೆಗಳ ದರ್ಶನವನ್ನು ಹಂಚಿಕೊಳ್ಳಲು ನಮಗೆ ಅವಕಾಶ ಮಾಡಿಕೊಟ್ಟ ದೇವಾಲಯದ ಸಭಾಪಾಲಕರುಗಳಿಗೂ ಮತ್ತು ಸಮಿತಿಯ ಸದಸ್ಯರುಗಳಿಗೂ ನಾವು ಧನ್ಯವಾದಗಳನ್ನು ಸಲ್ಲಿಸುತ್ತೇವೆ.
- ಎಲ್ಲಾ ಜನರ ಹೃದಯಗಳಲ್ಲಿ ವಾಸಿಸುವಂತೆ ಮಾಡುವ ಕೆಲಸಕ್ಕಾಗಿ ಪ್ರಾರ್ಥಿಸುವ ಮತ್ತು ಬೆಂಬಲಿಸುವ ಎಲ್ಲರೂ ಧನ್ಯರು! ದೇವರ ಆಶೀರ್ವಾದ ನಿಮ್ಮ ಮೇಲಿರಲಿ:

**"ಆ ಅಜ್ಞಾನ ಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾನೆ." (ಅಪೋಸ್ತಲರ ಕೃತ್ಯಗಳು (17:30).**

12.05.2024
ಚೆನ್ನೈ – 53

ಕ್ರಿಸ್ತನಲ್ಲಿ ನಿಮ್ಮ ಸಹೋದರ
**ಘನ. ಡಾ. ಡಬ್ಲು. ವಿಲ್ಸನ್ ಜ್ಞಾನಕುಮಾರ**

# ವಾಕ್ಯವು ಬೆಳಕಾಗಿರುವದು

ನನ್ನ ಹೆಸರು ಜಾನ್ ಎಂಬದಾಗಿ. ಒಬ್ಬ ಶಿಷ್ಯನ ಹೆಸರಾಗಿದ್ದರೂ ನನಗೂ ಯೇಸುವಿಗೂ ನಡುವೆ ಬಹುದೊಡ್ಡ ಅಂತರವಿತ್ತು. ನಾನು ಅಪೇಕ್ಷಿಸಿದ್ದೆಲ್ಲವೂ ನನ್ನ ಹತ್ತಿರವಿತ್ತು. ಆದರೂ ನಾನು ಲೋಕದ ವ್ಯರ್ಥತ್ವದಲ್ಲಿ ಸಿಕ್ಕಿಕೊಂಡವನಾಗಿ ಮಾನಸೀಕವಾಗಿ ಅಸ್ವಸ್ಥನಾಗಿದ್ದೆನು. ಅಂಥ ಸಂದರ್ಭದಲ್ಲಿ ನಾನು ಜೀವಸ್ವರೂಪನಾದ ದೇವರನ್ನು ಹುಡುಕಲು ಪ್ರಾರಂಭಿಸಿದವನಾದೆ. ದೇವರನ್ನು ಹುಡುಕುವವನಾದ ನಾನು ಒಮ್ಮೆಯಲ್ಲ, ಎರಡಾವರ್ತಿಯಲ್ಲ ಸಾಕಷ್ಟು ಸಲ ನಾನು ವಿಫಲತೆಗಳನ್ನು ಎದುರಿಸುವವನಾದೆನು. ಒಮ್ಮೆ ನನ್ನ ಸ್ನೇಹಿತನ ಮೂಲಕ ಛತ್ತೀಸ್‌ಘರ್ ರಾಜ್ಯದ ಸಲ್ಲೈನಗರ ಕ್ಷೇತ್ರದ ಮಿಷಿನರಿಯ ಮೂಲಕ ಬೋಧನೆಯನ್ನು ಆಲಿಸುವಂಥ ಅವಕಾಶವು ದೊರೆಯಿತು. ಜೀವನದಲ್ಲಿ ಪ್ರಪ್ರಥಮ ಸಲ ನಾನು ಸತ್ಯವೇದದಿಂದ ದೇವರ ವಾಕ್ಯವನ್ನು ಆಲಿಸಿದೆ. ನನ್ನ ಹೃದಯದಲ್ಲಿ ಕಳವಳವನ್ನುಂಟು ಮಾಡುತ್ತಿದ್ದ ಪ್ರತಿಯೊಂದು ಪ್ರಶ್ನೆಗೂ ಉತ್ತರವನ್ನು ಪಡೆದವನಾದೆನು. ಯೇಸುವಿನ ನಾಮದಲ್ಲಿ ನಾನು ಬೆಳಕನ್ನು ಪಡೆದುಕೊಂಡೆನು. ಪರಲೋಕದ ದೇವರು ಈ ಭೂಲೋಕಕ್ಕೆ ಹೇಗೆ ಬಂದನೆಂಬ ನನ್ನ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳುತ್ತಿರುವೆನು. ನಾನು ಸಾಯುವವರೆಗೂ ಯೌವನಸ್ಥರಿಗೆ ದೇವರ ವಾಕ್ಯವನ್ನು ಹಂಚುವೆನೆಂದು ಒಪ್ಪಿಸಿಕೊಂಡಿರುವೆನು.

**ಜಾನ್ ಬೆಕ್, ಛತ್ತೀಸ್‌ಘರ್**

ವಿಶೇಷ ಅಂಕಣ

# ಯೇಸು ಕ್ರಿಸ್ತನು ಸರ್ವರಿಗೂ ಕರ್ತನಾಗಿದ್ದಾನೆಂಬದೇ ಸತ್ಯವೇದವು

ಸಹೋ. ಎಸ್. ಎಮಿಲ್ ಜೆಬಸಿಂಗ್

ಪ್ರಿಯರೇ,

ಸುವಾರ್ತಾ ಸೇವೆಗೆ ತಳಹದಿಯಾಗಿರುವದು? ಯೇಸು ಕ್ರಿಸ್ತನು ಮಾನವ ಕುಲಕ್ಕೆ ರಕ್ಷಕನಾಗಿದ್ದಾನೆ ಎಂಬದೇ. ಸರ್ವಲೋಕಗಳ ರಕ್ಷಕನಾದ ಯೇಸು ಕ್ರಿಸ್ತನು, ಪಾಪ ಮಾಡಿದವರಿಗೂ ಮತ್ತು ವೈರಿಗಳಿಗೂ ತೀವ್ರವಾಗಿ ಶಿಕ್ಷಿಸುವದಕ್ಕೆಂದೇ ನಿರ್ಮಿಸಲ್ಪಟ್ಟ ಸಾವಿರಾರು ಶಿಲುಬೆಗಳೊಳಗೆ ಒಂದರಲ್ಲಿ ತೂಗುಹಾಕಲ್ಪಟ್ಟವನಾದನು. ಶಿಲುಬೆಯ ನೆರಳು 9 ಅಡಿ ಎತ್ತರವಾಗಿಯೂ ಮತ್ತು 7 ಅಡಿ ಅಗಲವಾಗಿಯೂ ಇದ್ದು, ಇದು ಲೋಕದವರೆಲ್ಲರಿಗೂ ತಿಳಿದಿರುವದಾಗಿದೆ. ಶಿಲುಬೆಯ ನೆರಳಿನ ಕೆಳಗೆ ಬರುವಂಥದ್ದೇ ಸುವಾರ್ತೆಯಾಗಿದೆ. ಶಿಲುಬೆಯ ನೆರಳು ಕೊಡುವಂಥ ಸಂದೇಶವನ್ನು ಬೇರೆ ಯಾವ ಕೊಡೆಗಳೂ ಕೊಡಲಾರವು.

ಅನೇಕ ಸಾವಿರ ಸಂದೇಶಗಳಿರುವವು ಆದರೆ ಶುಭದ ಸಂದೇಶವು ಒಂದೇ ಆಗಿರುವದು. ಮಾಹಿತಿಗಳನ್ನೂ ಹಾಗೂ ಸಮಾಚಾರಗಳನ್ನು ಒದಗಿಸುವಂಥ ಅನೇಕ ಪುಸ್ತಕಗಳಿರುವವು. ಆದರೆ ಶುಭದ ಸಂದೇಶವನ್ನು ಸಂದೇಶಕರಿರುವರು. ಆದರೆ ಪರಲೋಕವು ಕೊಡುವಂಥ ಸಂದೇಶಕರು ಮಾತ್ರ ಒಬ್ಬನೇ ಆಗಿರುವನು.

**ಪೌಲ ಹಾಗೂ ಬಾರ್ನಬ ಎಂಬುವರು (ಅ.ಕೃ. 13:2)**

**ಪವಿತ್ರಾತ್ಮನ ಮೂಲಕ ಪ್ರತ್ಯೇಕಿಸಲ್ಪಟ್ಟವರಾದರು**

ಅವರು ಹೇಳುವದೇನೆಂದರೆ, ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ, ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ ಎಂಬದು. (ಅ.ಕೃ. 4:12)

ಈ ಅಪರೂಪದ ಸತ್ಯವನ್ನೇ ದೃಢವಾಗಿಯೂ ಮತ್ತು ಪ್ರೀತಿಯಿಂದಲೂ ಹೇಳುವಂಥವರೇ ಸಂದೇಶಕರಾಗಿದ್ದಾರೆ.

ರೋಮಾಪುರದವರಿಗೆ 3:29 ಏನು ಹೇಳುತ್ತದಂದು ಗಮನಿಸಿರಿ, ದೇವರು ಯೆಹೂದ್ಯರಿಗೆ ಮಾತ್ರ ದೇವರಾಗಿದ್ದಾನೋ? ಅನ್ಯ ಜನಗಳಿಗೆ ಸಹ ದೇವರಲ್ಲವೇ?

ಆದದರಿಂದ ಪ್ರಿಯರೇ, ಯೇಸು ಕ್ರಿಸ್ತನು ಪ್ರತಿಯೊಬ್ಬರಿಗೂ ಕರ್ತನೂ ದೇವರೂ ಆಗಿದ್ದಾನೆ. ಈ ಸತ್ಯ ವಿಷಯುವು ಲೋಕದ ಜನರಿಗೆ ತಿಳಿದಿರುವದಿಲ್ಲವೆಂದು ಮತ್ತು ಈಗಲೂ ಅದು ಅವರಿಗೆ ಅರ್ಥವಾಗಿರುವುದಿಲ್ಲವೆಂದು ಪೂರ್ಣಾವಧಿ ಸೇವಕರು ಹಾಗೂ ವಿಶ್ವಾಸಿಗಳು ಸಂದೇಹಪಡದಿರಲಿ. ಆದರೆ ಒಂದು ವಿಷಯ, ಪ್ರತಿಯೊಬ್ಬರ ಮೊಣಕಾಲುಗಳು ಒಂದು ದಿನ ಕರ್ತನಾದ ಯೇಸು ಕ್ರಿಸ್ತನ ಮುಂದೆ ಬಾಗಬೇಕು.

**ರೋಮಾಪುರದವರಿಗೆ 9:24 ಏನು ಹೇಳುತ್ತದೆಂದು ಗಮನಿಸಿ:**

ಆತನು ಕರುಣಿಸಿದ ನಮ್ಮನ್ನು (ನೀವು ಮತ್ತು ನಾನು) ಯೆಹೂದ್ಯರೊಳಗಿಂದ ಮಾತ್ರ ಕರೆಯದೆ, ಅನ್ಯಜನರೊಳಗಿಂದ ಸಹ ಕರೆದನು. ಯಾಕಂದರೆ, ನಾವು (ನೀವು ಮತ್ತು ನಾನು) ಪ್ರತಿಯೊಬ್ಬರಿಗೂ ಸುವಾರ್ತೆಯನ್ನು ಸಾರುವವರಾಗಲು ಸಮರ್ಪಿಸಿಕೊಳ್ಳುವವರಾಗ**ಬೇ**ಕೆಂದೇ. ನಾವು ಹೋಗ**ಬೇ**ಕೆಂದು ಆತನು ಹೇಳುವಾಗ, ನಾವು ಹೋಗ**ಬೇ**ಕು. ನಾವು ಕೊಡುವವರಾಗ**ಬೇ**ಕೆಂದು ಆತನು ಹೇಳುವಾಗ ಸುವಾರ್ತೆ ಸೇವೆಗೋಸ್ಕರ ನಾವು ಉಳಿತಾಯ ಪೆಟ್ಟಿಗೆಗಳ ಮೂಲಕ, ವಿಶೇಷ ಕಾಣಿಕೆಗಳ ಮೂಲಕ, ಲಕ್ಷಾಂತರ ಗ್ರಾಮಗಳಲ್ಲಿ ಒಂದು ಗ್ರಾಮವನ್ನು ದತ್ತು ತೆಗೆದುಕೊಳ್ಳುವದರ ಮೂಲಕ ಸಭೆಗಳನ್ನು ಕಟ್ಟಲು ನಾವು ಕೊಡುವವರಾಗ**ಬೇ**ಕು.

**ಪವಿತ್ರಾತ್ಮನು ಎರಡು ಕಾರ್ಯಗಳನ್ನು ಮಾಡುತ್ತಾನೆ.**

**ಮೊದಲನೇದಾಗಿ** – ಶಿಲು**ಬೆ**ಯ ನೆರಳಿನಡಿಯಲ್ಲಿ ನಮ್ಮನ್ನು ಕರೆತಂದು ವಿಶ್ವಾಸಿಗಳೆಂದು ಕರೆಯಿಸಿಕೊಳ್ಳುವ ಭಾಗ್ಯವನ್ನು ಅನುಗ್ರಹಿಸುತ್ತಾನೆ.

**ಎರಡನೇದಾಗಿ** – ಪ್ರತಿಯೊ**ಬ್ಬ**ರಿಗೂ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಸಾರಿ ಹೇಳುವ ಆಶೀರ್ವಾದವನ್ನು ಅನುಗ್ರಹಿಸುತ್ತಾನೆ.

ಇದರ ಅರ್ಥವೇನೆಂದರೆ, ಮನುಷ್ಯರು ಶಿಲು**ಬೆ**ಯ ನೆರಳಿನಡಿಯಲ್ಲಿ **ಬ**ರುವಂಥದ್ದು ಅದು ದೇವರ ಅನುಗ್ರಹವಾಗಿರುವದು. ಇತರರನ್ನು ಶಿಲು**ಬೆ**ಯ ನೆರಳಿನಡಿಯಲ್ಲಿ ಕರೆತರುವಂಥದ್ದು ದೇವರ ಅನುಗ್ರಹವಾಗಿರುವದು. ದೇವರಿಂದಾಗುವ ಆಶೀರ್ವಾದಗಳಲ್ಲಿ ನಾವು ಅಭಿವೃದ್ಧಿಗೊಳ್ಳುವಾಗ ನಮ್ಮ ಹೃದಯಗಳು **ಬ**ಲಗೊಳ್ಳುವವು. 1 ತಿಮೊಥೆ. 2:4 ಏನು ಹೇಳುತ್ತದೆಂದು ಗಮನಿಸಿರಿ.

ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರ**ಬೇ**ಕೆಂದು ಆತನ ಚಿತ್ತವಾಗಿದೆ ಎಂ**ಬ**ದಾಗಿ. ಯಾರು ಈ ಪ್ರಕಾರವಾಗಿ ಅಪೇಕ್ಷಿಸುತ್ತಿರುವರು? ಅನ್ನುವದಾದರೆ, ಆತನೇ ತಂದೆಯಾದ ದೇವರು. ಆತನು ನಮಗೆ ಯೋಹಾನ 3:16 ನ್ನು **ಬ**ಹುಮಾನವಾಗಿ ಕೊಟ್ಟಿರುವನು. ಮತ್ತೊಮ್ಮೆ ಅ.ಕೃ. 4:12ನ್ನು ಗಮನಿಸಿರಿ.

ಯೇಸು ಕ್ರಿಸ್ತನ ಹೆಸರಿನಿಂದಲೇ ಹೊರತು **ಬೇ**ರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ. ರಕ್ಷಣೆಯ ಸರಿಯಾದ ಅರ್ಥವು ಸ್ವಸ್ಥತೆ ಎಂದಾಗುತ್ತದೆ. ಮೊದಲನೇದಾಗಿ ಸರ್ಪದ ಕಡಿತದ ವಿಷದಿಂದ ಸ್ವಸ್ಥನಾಗುವದು, ಎರಡನೇದಾಗಿ – ಶರೀರದ ಕಾಯಿಲೆಯಿಂದ ಸ್ವಸ್ಥನಾಗುವದು. ಈ ಎರಡೂ ಸ್ವಸ್ಥತೆಗಳನ್ನು ಒಟ್ಟುಗೂಡಿಸಿದಾಗ ಸಿಗುವ ಅರ್ಥವೇ ರಕ್ಷಣೆ ಎಂದಾಗುತ್ತದೆ.

**ಈಗ ಸ್ವಲ್ಪ ಹೊತ್ತು ಆಲೋಚಿಸಿರಿ**

ಈ ಎರಡೂ ಸ್ವಸ್ಥತೆಗಳು ನಿಮಗೆ **ಬೇ**ಕೇ? ನಿಮ್ಮ ಕುಟುಂ**ಬ**ದಲ್ಲಿ ಸಿಗುವ ಯಾರಿಗಾದರೂ **ಬೇ**ಕೇ? ನೀವು ತಿಳಿದಿರುವ ಎಷ್ಟು ಜನರಿಗೆ ಈ ಸ್ವಸ್ಥತೆಯು ಅವಶ್ಯಕತೆಯಿರುವದು? ಈ ಮೊದಲು ನಿಮಗೆ

ತಿಳಿಯದೆ ಇದ್ದಂಥ ಅದೆಷ್ಟು ಸಾವಿರ ಜನರಿಗೆ, ತಮ್ಮ ಎಡಗೈಗೂ ಮತ್ತು ಬಲಗೈಗೂ ವ್ಯತ್ಯಾಸ ಗೊತ್ತಿಲ್ಲದಂಥವರಿಗೆ ಈ ಸ್ಪಷ್ಟತೆಯ ಅವಶ್ಯಕತೆಯಿದೆ?

ಮಾನವ ಕುಲಕ್ಕೆ ಯೇಸು ಕ್ರಿಸ್ತನು ಎಷ್ಟು ಅವಶ್ಯವಾಗಿ ಬೇಕಾಗಿದ್ದಾನೆಂದು ನಿಮ್ಮ ಹೃದಯವು ಅರಿಯುವದಾದರೆ ಆಗ ನೀವು ಶಿಲುಬೆಯ ನೆರಳಿನಡಿಯಲ್ಲಿ ಬರುವಿರಿ ಹಾಗೂ ಮರಿಯಳ ಹಾಗೆ ಯೇಸು ಕ್ರಿಸ್ತನ ಪಾದವೊಂದೇ ಸಾಕು ಎಂದು ನಿರ್ಧರಿಸುವಿರಿ ಮತ್ತು ದೇವರಿಂದ ನೀವು ಆಶೀರ್ವದಿಸಲ್ಪಡುವಿರಿ.

**ರೋಮಾಪುರದವರಿಗೆ 1–14,15 ನ್ನು ಓದಿರಿ–**

ವಚನ 14 – ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದಂಥ ಒಂದು ಋಣ ನನ್ನ ಮೇಲೆ ಇದೆ. ಇದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುವದಾದರೆ, ಯೇಸು ಕ್ರಿಸ್ತನ ವಿಷಯದಲ್ಲಿ ತಿಳಿಯದೆ ಇರುವಂಥ ಎಲ್ಲಾ ಜನರು ಲೋಕದ ಯಾವುದೇ ಭಾಗದಲ್ಲಿ ವಾಸವಾಗಿರುವವರಾಗಿದ್ದಾಗ್ಯೂ ಅವರೆಲ್ಲರಿಗೂ ನಾನು ಋಣಸ್ಥನಾಗಿದ್ದೇನೆ. ಅಂದರೆ ಅವರಿಗೆ ನಾನು ಸಹಾಯ ಮಾಡುವವನಾಗಿದ್ದೇನೆ. ಯಾವ ಪ್ರಕಾರದ ಸಹಾಯ? ಪ್ರಾರ್ಥನೆ ಸಹಾಯ, ಅವರಿಗಾಗಿ ಸಮಯವನ್ನು ಕೊಡುವದು, ಹಣವನ್ನು ಕೊಡುವದು, ಅವರ ಸೇವೆ ಮಾಡುವದು, ಕೂಟಗಳಿಗಾಗಿ, ಪ್ರಾರ್ಥನೆಗಾಗಿ ನಮ್ಮ ಸ್ಥಳಗಳನ್ನು ಮನೆಗಳನ್ನು ತೆರೆದುಕೊಡುದು, ಪೂರ್ಣಾವಧಿ ಸೇವೆಗೆ ಪವಿತ್ರಾತ್ಮನು ಯಾವಾಗ ನಮ್ಮನ್ನು ಕರೆಯುವನೋ ಆಗ ನಮ್ಮಲ್ಲಿರುವದನ್ನೆಲ್ಲಾ ಕೊಡುವುದರ ಮೂಲಕ ಸಹಾಯ ಮಾಡುವದು.

ವಚನ 15 – ಹೀಗಿರುವದರಿಂದ ಸುವಾರ್ತೆಯನ್ನು ಸಾರುವುದಕ್ಕೆ ನಾನಂತೂ ಸಿದ್ಧನಾಗಿದ್ದೇನೆ. ಅಂದರೆ ಸುವಾರ್ತೆಯನ್ನು ಸಾರುವಂಥವರಿಗೆ ಸಹಾಯ ಮಾಡುವದಕ್ಕೆ ನಾನಂತೂ ಆತುರವುಳ್ಳವನಾಗಿದ್ದೇನೆ. ಅಂದರೆ, ಸುವಾರ್ತೆಯ ತುತ್ತೂರಿಯು ಊದುವುದಕ್ಕೆ ಬೇಕಾದದ್ದನ್ನು ಮಾಡುವುದಕ್ಕೆ ನಾನಂತೂ, ಆತುರವುಳ್ಳವನಾಗಿದ್ದೇನೆ ಎಂಬದು.

ಆತುರವಾಗಿದ್ದೇನೆ ಎಂಬ ಪದದ ಮೂಲ ಅರ್ಥವು, ಸುವಾರ್ತಾ ಸೇವೆಗೋಸ್ಕರ ನಾನು ಏನು ಬೇಕಾದರೂ ಮಾಡಲು ಸಿದ್ಧ ಮನಸ್ಸನ್ನು ಹೊಂದಿದ್ದೇನೆ ಎಂದಾಗುತ್ತದೆ.

ಹೌದು, ಯಾರ ಹೃದಯಗಳು ತೆರೆದಿರುವವೋ ಅಂಥವರಿಗಾಗಿ ಒಂದು ದಿನ ಪರಲೋಕದ ಬಾಗಿಲು ತೆರೆಯುವುದು.

ಮತ್ತಾಯ 25:34 – ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ, ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ.

ಯಾರ ಹೃದಯಗಳು ತೆರೆಯುವದಿಲ್ಲವೋ, ಯಾರು ವಿಧೇಯರಾಗುವುದಕ್ಕೆ ವಿಫಲಗೊಳ್ಳುವರೋ, ಅಂಥವರಿಗೆ ಒಂದು ದಿನ ಪರಲೋಕದ **ಬಾ**ಗಿಲು ಮುಚ್ಚುವದು.

ಮತ್ತಾಯ 25:31 – ಆಮೇಲೆ ಆತನು ಎಡಗಡೆಯಲ್ಲಿರುವವರಿಗೆ, ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ**ಬೆ**ಂಕಿಯೊಳಗೆ ಹೋಗಿರಿ ಅನ್ನುವನು.

ಆದದರಿಂದ ಪ್ರಿಯರೇ, ಪವಿತ್ರಾತ್ಮನು ತಾನೇ ನಿಮ್ಮನ್ನು ಈ **ಬ**ರಹವನ್ನು ಓದುವದಕ್ಕೂ ಹಾಗೂ ಸುವಾರ್ತಾ ಸೇವೆಯಲ್ಲಿ ನಿಮ್ಮ ಪಾಲು ಏನೆಂ**ಬ**ದನ್ನು ತಿಳಿದುಕೊಳ್ಳುವದಕ್ಕೂ ಕರೆದಿರುವನೆಂದು ಮನವರಿಕೆ ಮಾಡಿಕೊಳ್ಳಿರಿ. ಮನವರಿಕೆ ಮಾಡಿಕೊಂಡ ನಂತರ ಭಯಭಕ್ತಿಯಿಂದ ನಡುಗುವವರಾಗಿ ಅದನ್ನು ಮಾಡಿರಿ. ನಿಮಗೋಸ್ಕರ ಈ ಲೋಕದಲ್ಲಿ ಆಶೀರ್ವಾದದ **ಬಾ**ಗಿಲು ತೆರೆಯುತ್ತದೆ, ಮುಂದೊಂದು ದಿನ ಪರಲೋಕದ **ಬಾ**ಗಿಲೂ ನಿಮಗೋಸ್ಕರ ತೆರೆಯಲ್ಪಡುತ್ತದೆ. ■

# ನಂಬಿಕೆಯ ಹೆಜ್ಜೆಗಳು

19 ವರ್ಷ ಪ್ರಾಯದವಳಾದ ನಾನು ತಾರುಣ್ಯದ ಕೊನೆಯ ಹಂತಕ್ಕೆ ಬಂದಿದ್ದೇನೆ. ನನ್ನ ತಾರುಣ್ಯದ ಹಾಗೂ ಉನ್ನತ ವ್ಯಾಸಂಗದ ವಿಷಯದಲ್ಲಿ ಆಲೋಚನೆ ಮಾಡುತ್ತಾ ಕನಸುಗಳಿಂದ ಸುತ್ತುವರಿದವಳಾಗಿದ್ದೆನು. ಆದರೆ ನಾನು ಪಾರ್ಶ್ವವಾಯು ಪೀಡಿತಳಾದ ಕಾರಣ ಒಂದೇ ದಿನದಲ್ಲಿ ನನ್ನೆಲ್ಲಾ ಆಲೋಚನೆಗಳೂ ಕನಸುಗಳೂ ನುಚ್ಚುನೂರಾಗಿ ಹೋದವು. ಹಣಕಾಸಿನ ಕೊರತೆಯ ಮಧ್ಯದಲ್ಲಿಯೂ ನನ್ನ ತಂದೆಯವರು ನನ್ನ ಚಿಕಿತ್ಸೆಗಾಗಿ 70,000 ರೂಪಾಯಿಗಳನ್ನು ವೆಚ್ಚಮಾಡಿದರೂ ಪ್ರಯೋಜನವಾಗಲಿಲ್ಲ.

ಮಾನವರಿಂದ ಅಸಾಧ್ಯವಾದ ಸಂಗತಿಗಳು ಯೇಸುವಿನಿಂದ ಸಾಧ್ಯವಾಗುವವು ಎಂಬ ಸಂದೇಶವನ್ನು ಹಂಚಿಕೊಳ್ಳುವುದಕ್ಕಾಗಿ ದೇವರು ನಮ್ಮ ದೂರದ ಒಬ್ಬ ಸಂಬಂಧಿಕರನ್ನು ನಮ್ಮ ಮನೆಗೆ ಕಳುಹಿಸಿಕೊಟ್ಟನು. ಅವರು ನಮ್ಮನ್ನು ಗುಜರಾತಿನ ಪಿಪ್ಲವಾನ ಕ್ಷೇತ್ರದ ಮಿಷಿನರಿಯ ಹತ್ತಿರ ಕರೆದುಕೊಂಡು ಹೋಗಿ ಯೇಸುವಿನ ನಾಮದಲ್ಲಿ ಉಂಟಾಗುವಂಥ ಅದ್ಭುತ ಕೃತ್ಯಗಳ ಬಗ್ಗೆ ಕೇಳಿಸಿಕೊಳ್ಳುವಂತೆ ಮಾಡಿದರು. ಅವರು ನನಗೋಸ್ಕರ ಸತತವಾಗಿ ಪ್ರಾರ್ಥನೆ ಮಾಡಿದರು. ಅದರ ಪರಿಣಾಮವಾಗಿ ಈ ದಿನಗಳಲ್ಲಿ ನನಗೆ ನಿಂತುಕೊಳ್ಳಲು ಹಾಗೂ ನಡೆದಾಡಲು ಸಾಧ್ಯವಾಗಿರುವದು. ಅದು ನನ್ನನ್ನು ಸ್ಪರ್ಶಿಸಿದ ಯೇಸು ಕ್ರಿಸ್ತನಿಂದ ಸಾಧ್ಯವಾಗಿರುವದು. ನಾನು, ಹಣದಿಂದಲ್ಲ ಬದಲಾಗಿ ಯೇಸುವಿನ ವಾಕ್ಯದಲ್ಲಿ ನಂಬಿಕೆಯಿಟ್ಟ ಕಾರಣ ಸ್ವಸ್ಥಳಾಗಿದ್ದೇನೆ ಹಾಗೂ ಈಗ ಯಾವ ತೊಂದರೆಯೂ ಇಲ್ಲ ಎಂಬದಾಗಿ ನನ್ನ ತಂದೆಯವರಿಗೂ ಮನವರಿಕೆಯಾಗಿರುವದು. ನಮ್ಮ ತಂದೆಯು ಸಹ ಯೇಸುವಿಗಾಗಿ ತಮ್ಮ ಹೃದಯವನ್ನು ತೆರೆದಿರುವರು. ನಮ್ಮ ಮನೆಯೀಗ ಸುವಾರ್ತಾ ಕೇಂದ್ರವಾಗಿರುವದು. ದೇವರು ನಮ್ಮ ನಂಬಿಕೆಯ ಹೆಜ್ಜೆಗಳನ್ನು ಬಲಪಡಿಸುವಂತೆ ಹಾಗೂ ನಮ್ಮ ಯುವ ಸಭೆಯಲ್ಲಿ ವಿಶ್ವಾಸಿಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಪ್ರಾರ್ಥಿಸಿರಿ.

ಹಿರಾಳ್‌ಬೆನ್ ವಸಾವ

# ಪ್ರಾರ್ಥನೆ

ಸರ್ವಶಕ್ತನಾದ ದೇವರೇ, ಸೃಷ್ಟಿಕರ್ತನೂ ಮತ್ತು ಎಲ್ಲಾ ವಸ್ತುಗಳ ಒಡೆಯನೂ ಮತ್ತು ಎಲ್ಲಾ ಜನರ ರಕ್ಷಕನೇ, ಕೃಪೆಯಿಂದ ನಮ್ಮನ್ನು ಕ್ಷಮಿಸು ಏಕೆಂದರೆ ನಾವು ನಿನ್ನನ್ನು ನೋಡದಿದ್ದರೂ ಸಹ.
ನಮ್ಮ ಕಲ್ಪನೆಯು ನಿನಗೆ ಅನೇಕ ಆಕಾರಗಳನ್ನು ನೀಡಿದೆ.
ಒಂದು ನಿಮಿಷದಲ್ಲಿ, ನಾವು ಚಿನ್ನವನ್ನು ಕರಗಿಸಿದ್ದೇವೆ.
ಚಿನ್ನದ ಕರುವನ್ನು ಸೃಷ್ಟಿಸಿ ಅದಕ್ಕೆ ಅಡ್ಡಬಿದ್ದಿದ್ದೇವೆ.
ದಯೆಯಿಂದ ಸಹಿಸಿಕೊಳ್ಳಿ ಏಕೆಂದರೆ ನಾವು ಇಂದಿಗೂ ಎಡವುತ್ತಿದ್ದೇವೆ.
ಕರ್ತನೇ, ನೀನು ಅದ್ಭುತಗಳನ್ನು ಮಾಡುವವನು.
ಅದ್ಭುತ ದೇವರಾಗಿರುವುದರಿಂದ ನಮ್ಮ ಬುದ್ಧಿವಂತಿಕೆಯ ಮೂಲಕ ನಿನ್ನನ್ನು ತಲುಪಲು ಸಾಧ್ಯವಿಲ್ಲ.
ಜೀವಂತ ತ್ಯಾಗ, ದಯೆಯಿಂದ ನಮಗೆ ನಿನ್ನನ್ನು ಬಹಿರಂಗಪಡಿಸು!
ನಮಗೆ ಹಸಿವು ಮತ್ತು ಬಾಯಾರಿಕೆಯಾಗಿದೆ!
ಅಳುವ ಜನರ ಧ್ವನಿಯನ್ನು ಗಮನಿಸು!
ನಾವು ಯೇಸುವನ್ನು ನೋಡಲು ಬಯಸುತ್ತೇವೆ ಎಂಬ ಮಾತು ನಮ್ಮ ಕಿವಿಗಳನ್ನು ಚುಚ್ಚುತ್ತಿದೆ!
ನಾವು ಏಕತೆಯ ಮನೋಭಾವದಿಂದ ಇರುವವರಾಗೋಣ.
ನಮಗಿಂತ ಇತರರನ್ನು ಯೋಗ್ಯರೆಂದು ಪರಿಗಣಿಸುವುದು.
ಸುವಾರ್ತೆಯ ತುತ್ತೂರಿಯನ್ನು ಊದಿರಿ, ಮತ್ತು ಎಲ್ಲರಿಗೂ ಕ್ಷಮೆ ನೀಡಿ!
ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ.
ತನ್ನನ್ನು ಯಜ್ಞವಾಗಿ ಕೊಟ್ಟವನು, ಆಮೆನ್!
ಕೃಪೆಯಿಂದ ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸು! ದೇವರಿಗೆ ಸ್ತೋತ್ರವಾಗಲಿ!

# ರಕ್ಷಣೆಯ ಮಹಾ ಆನಂದ

ರಾತ್ರಿ ಅರುಚುವ ಶಬ್ಧವನ್ನು ಕೇಳಿಸಿಕೊಳ್ಳುವಾಗ ಯಾರಿಗೆ ಹೆದರಿಕೆಯಾಗುವುದಿಲ್ಲ ಹೇಳಿರಿ! ದುರಾತ್ಮವು ನಮ್ಮ ತಾಯಿಯನ್ನು ಪೀಡಿಸುತ್ತಿದ್ದರಿಂದ ಪ್ರತಿದಿನ ರಾತ್ರಿಯೂ ನಾವು ಅರಚಾಟವನ್ನು ಕೇಳಿಸಿಕೊಳ್ಳುತ್ತಿದ್ದೆವು. 2 ವರ್ಷಗಳ ಕಾಲ ನಾವು ತೊಂದರೆಯನ್ನು ಅನುಭವಿಸಿದೆವು. ಇದ್ದಕ್ಕಿದ್ದ ಹಾಗೆ ನಮ್ಮ ಬಂಧುಗಳಲ್ಲಿ ಒಬ್ಬರಾದ ಗಿರೀಶ್ ಎಂಬವರು ಆಕಸ್ಮಿಕವಾಗಿ ನಮ್ಮ ಮನೆಗೆ ಬಂದಾಗ ನಮ್ಮ ತೊಂದರೆಗಳನ್ನೆಲ್ಲಾ ನೋಡಿದರು. ನಂತರ ಅವರು ನಮಗೆ ಬೀರನಹಳ್ಳಿ ಕ್ಷೇತ್ರದ ಸೇವಕರಾದ ರವಿ ತೇಜ ಎಂಬವರ ಕುರಿತಾಗಿ ಹೇಳಿದರು. ಅವರನ್ನು ನಾವು ಮನೆಗೆ ಆಮಂತ್ರಿಸಿ ಪ್ರಾರ್ಥಿಸಿಕೊಳ್ಳುತ್ತಿರುವಾಗ ಯೇಸುವಿನ ಹೆಸರನ್ನು ಕೇಳಿಸಿಕೊಂಡ ಕೂಡಲೇ ದುರಾತ್ಮವು ನಡುಗುತ್ತಾ ನಮ್ಮ ತಾಯಿಯನ್ನು ಬಿಟ್ಟು ಓಡಿ ಹೋಯಿತು. ಎರಡು ವರ್ಷಗಳ ನಂತರ ನಮ್ಮ ಮನೆಯು ಸಹಜ ಸ್ಥಿತಿಗೆ ಹಿಂತಿರುಗಿತು. ಅದರ ನಂತರ ನಾವು ಆನಂದ ಹಾಗೂ ಉಲ್ಲಾಸಗಳ ಸ್ವರವನ್ನು ಕೇಳಿಸಿಕೊಳ್ಳುತ್ತಿರುವೆವು. ಹಲ್ಲೇಲೂಯ.

**ವೆಂಕಟೇಶ, ಹೊಸ ವಿಶ್ವಾಸಿ, ಕರ್ನಾಟಕ**

# ಸುವಾರ್ತೆಗಾಗಿ ಸಾಲಗಾರರು

ಪ್ರಭಾವಶಾಲಿಯಾದ ಮತ್ತು ಸರ್ವಶಕ್ತನಾದ ದೇವರು ನನಗೆ ಒಡಿಶಾದ ದಕ್ಷಿಣ ಜಿಲ್ಲೆಗಳಿಗೆ ಅದರಲ್ಲಿಯೂ ವಿಶೇಷವಾಗಿ ಸೋರಾ ಜನರು ವಾಸಿಸುವ ಹಳ್ಳಿಗಳಿಗೆ ಭೇಟಿ ನೀಡಲು ಸಾಧ್ಯವಾಗುವಂತೆ ಮಾಡಿದ್ದಾನೆ.




ಗಜಪತಿ ಜಿಲ್ಲೆಯ ಒಳಪ್ರದೇಶದಲ್ಲಿರುವ ಹಳ್ಳಿಗಳು ಸುವಾರ್ತೆಯ ಮೂಲಕ ಪರಿವರ್ತನೆಗೊಳ್ಳುತ್ತಿದೆ. ಸರ್ವಶಕ್ತನಾದ ಕರ್ತನು ಸಾಮಾನ್ಯ ಸೇವಕರನ್ನು ಬೆಂಕಿಯಂತೆ ಉಪಯೋಗಿಸಿಕೊಳ್ಳುತ್ತಿದ್ದಾನೆ ಮತ್ತು ಪರಾಕ್ರಮದಿಂದಲ್ಲ ಬಲದಿಂದಲ್ಲ ನನ್ನ ಆತ್ಮದಿಂದಲೇ (ಜೆಕ. 4:5) ಎಂದು ಸರ್ವಶಕ್ತನಾದ ಕರ್ತನು ಹೇಳುವ ಮೂಲಕ ಸಾಬೀತುಪಡಿಸಿದ್ದಾನೆ.

ಸೇವಕರು ಭೇಟಿ ನೀಡಿದ ಎಲ್ಲಾ ಹಳ್ಳಿಗಳಲ್ಲಿನ ವಿಶ್ವಾಸಿಗಳು ಪ್ರೀತಿ, ಐಕ್ಯತೆ, ಏಕತೆ ಮತ್ತು ಆತ್ಮನಿಂದ ತುಂಬಿಸಲ್ಪಟ್ಟಿದ್ದಾರೆ ಎಂಬುದನ್ನು ನಾವು ನಮ್ಮ ಕಣ್ಣಾರೆ ನೋಡಿದ್ದೇವೆ.

ಅತಿಥಿ ಸತ್ಕಾರಕ್ಕೆ ಮುಂಚೂಣಿಯಲ್ಲಿ ನಿಂತು ಹೃದಯಪೂರ್ವಕವಾಗಿ ಕರ್ತನನ್ನು ಸ್ತುತಿಸುತ್ತಿದ್ದಾರೆ. ಅವರು ದೇವರ ವಾಕ್ಯವನ್ನು ಕೇಳಲು ತಣಿಸಲಾಗದ ಅಪೇಕ್ಷೆಯನ್ನು ಹೊಂದಿದ್ದಾರೆ. ಸುವಾರ್ತೆಯು ಜನರನ್ನು ಎಲ್ಲಾ ಸ್ಥಳಗಳಲ್ಲಿ ಕರ್ತನನ್ನು ಆರಾಧಿಸುವಂತೆ ಮಾಡಿದೆ ಎಂಬುದು ನಿಜ.

ಹೊರ ಪ್ರದೇಶಗಳಲ್ಲಿನ ಜನರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳುವುದು ಅಷ್ಟು ಸರಳವಾಗಿರುವದಿಲ್ಲ. ಆದುದರಿಂದ ದೇವರು ನಮಗೆ ಕೊಟ್ಟಿರುವ ಅವಕಾಶಗಳನ್ನು ನಾವು ಸಕ್ರಿಯವಾಗಿ ಉಪಯೋಗಿಸಿಕೊಳ್ಳಬೇಕು. ಹೌದು, ಇದು ಪವಿತ್ರಾತ್ಮನು ನನ್ನ ಹೃದಯದಲ್ಲಿ ಹಾಕಿದ ಭಾರವಾಗಿತ್ತು.

ರಸ್ತೆ ಮತ್ತು ಸಾರಿಗೆ ಸೌಲಭ್ಯಗಳಿಲ್ಲದ ಹಳ್ಳಿಗಳ ಮೂಲಕ ಅಜ್ಞಾನ, ಕತ್ತಲೆ, ಬಡತನ, ಸಾಂಪ್ರದಾಯಕ ಪದ್ಧತಿಗಳ ಅಭ್ಯಾಸ ಮತ್ತು ಹಳ್ಳಿಗಳಿಂದ ಬರುವ ವಿರೋಧಗಳ, ಅಡತಡೆಗಳು ಇವೆಲ್ಲವುಗಳ ಮೂಲಕ ಮುನ್ನಡೆಯುತ್ತಿರುವ ಸೇವಕರುಗಳಿಗಾಗಿ ಪ್ರಾರ್ಥಿಸುವುದನ್ನು ಮುಂದುವರೆಸೋಣ.

ಪರಲೋಕ ಮತ್ತು ಭೂಲೋಕದಲ್ಲಿ ಅಧಿಕಾರವನ್ನು ಹೊಂದಿರುವ ಕರ್ತನು ತನ್ನ ಎರಡನೆಯ ಬರೋಣದವರೆಗೆ ನಮ್ಮನ್ನು ಮುನ್ನಡೆಸಲಿ ಮತ್ತು ಶಿಷ್ಯರು ಆತ್ಮಗಳ ಸಂಖ್ಯೆಯನ್ನು ಹೆಚ್ಚಿಸುವುದು ದೇವಾಲಯಗಳ ಹೆಚ್ಚಳದ ಪ್ರಗತಿಗೆ ಕಾರಣವಾಗುತ್ತದೆ.

**ಡಾ. ಫೆಲಿಸಿಟ್ ಪುನೀತ, ನಾಗರ ಕೋಯಿಲ್**

## ಅಗತ್ಯತೆ – ಅಂತಿಯೋಕ್ಯದಲ್ಲಿ ವಿಶ್ವಾಸಿಗಳು



ಸುಗ್ಗಿಯ ಯಜಮಾನನು ನಾವು ಆತನನ್ನು ಕೇಳಿಸಿಕೊಂಡಾಗಲೆಲ್ಲಾ ತನ್ನ ಸೇವಕರನ್ನು ಗ್ರಾಮಗಳಿಗೆ ಕಳುಹಿಸಿಕೊಡುತ್ತಾನೆ ಮತ್ತು ಆತನು ಅವರನ್ನು ಆಚೆಯ ಸೀಮೆಗಳಿಗೆ ಕಳುಹಿಸಿಕೊಡುತ್ತಾನೆ. 24 ಹೊಸ ಸೇವಕರನ್ನು ಮುಖ್ಯವಾಗಿ 5 ಜನರ ಗುಂಪುಗಳನ್ನು ಗುಜರಾತಿನಲ್ಲಿರುವ ಭಿಲ್, ಕುಖ್ನಾ, ರಥ್ವಾ, ಗಮಿತ್ ಮತ್ತು ವಸಾವ ಸ್ಥಳಗಳಿಗೆ ಕಳುಹಿಸಲಾಗಿದೆ. ಅವರನ್ನು ಬೆಂಬಲಿಸಲು ಅಂತಿಯೋಕ್ಯದಲ್ಲಿದ್ದಂತಹ ವಿಶ್ವಾಸಿಗಳ ಅಗತ್ಯತೆಯಿದೆ. ಅವರು ಗುಜರಾತಿನಲ್ಲಿರುವ 8 ಜಿಲ್ಲೆಗಳ ಹಳ್ಳಿಗಳನ್ನು ತಲುಪಲು ಹೋಗಿರುವ ಕಾರಣ ನಿಮ್ಮ ಪ್ರಾರ್ಥನೆ ಮತ್ತು ದೇಣಿಗೆಯಿಂದ ಅವರನ್ನು ಬೆಂಬಲಿಸಲು ನಾವು ನಿಮ್ಮನ್ನು ದೀನತೆಯಿಂದ ವಿನಂತಿಸಿಕೊಳ್ಳುತ್ತೇವೆ.



# ಬೆಳಕನ್ನು ಹರಡುವವರು ಧನ್ಯರು

ಸತ್ಯವೇದದ ಅದ್ಭುತಗಳನ್ನು ನೋಡಲು ತೆರೆದಿರುವ ಜನರ ಕಣ್ಣುಗಳು ಸೇವಾಕ್ಷೇತ್ರಗಳ ಕಡೆಗೆ ತಮ್ಮ ಗಮನವನ್ನು ತಿರುಗಿಸಿದಾಗ ಮತ್ತು ತಮ್ಮ ಪ್ರೀತಿಯ ಕೈಗಳನ್ನು ಚಾಚಿದಾಗ ಮತ್ತು ಅಗತ್ಯವಿರುವ ಜನರಿಗೆ ತನ್ನ ಸಂಪತ್ತನ್ನು ಹಂಚಿದಾಗ ಸ್ವರ್ಗವು ಸಂತೋಷವಾಗುತ್ತದೆ. ಪ್ರಕಟವಾದ ಕೊಕ್ ಬೊರೊಕ್ ಸತ್ಯವೇದಗಳು ತ್ರಿಪುರ ಕ್ಷೇತ್ರಗಳಲ್ಲಿನ ಸಭೆಗಳು ಮತ್ತು ಆರಾಧನಾ



ಗುಂಪುಗಳಿಗೆ ಹೆಚ್ಚು ಬೇಡಿಕೆಯಲ್ಲಿವೆ. ಇದನ್ನು ಕೇಳಿದ ಘನ. ಆರ್.ಎ.ಜೆ. ಟ್ಯುಟಿಕೋರಿನ್‌ನ ಸೇಂಟ್ ಪ್ಯಾಟ್ರಿಕ್ ಚರ್ಚ್‌ನ ಸೆಲ್ವಿನ್ ದುರೈ ಮತ್ತು ಸಭೆಯ ಹತ್ತು ಸದಸ್ಯರು ಸೇರಿ ಏಪ್ರಿಲ್ 16 ರಿಂದ ಕ್ಷೇತ್ರಗಳಿಗೆ ಭೇಟಿ ನೀಡಿ ಭಕ್ತರಿಗೆ ಕೊಕ್ ಬೊರೊಕ್ ಸತ್ಯವೇದಗಳನ್ನು ವಿತರಿಸಿದರು. ಅವರ ಸತ್ಕಾರ್ಯದ ಸುಗಂಧವು ಪರ್ವತಗಳಲ್ಲಿ ಹರಡಲಿ. ಸಭಾಪಾಲಕರಿಗೂ ಮತ್ತು ಭಕ್ತರಲ್ಲಿ ಬೆಳಕನ್ನು ಹರಡಲು ಸಹಾಯ ಮಾಡಿದ ಎಲ್ಲರಿಗೂ ನಾವು ನಮಸ್ಕರಿಸುತ್ತೇವೆ ಮತ್ತು ಧನ್ಯವಾದ ಹೇಳುತ್ತೇವೆ.

**ಜ್ಞಾನಸಿಂಗ್, ಸಂಯೋಜಕರು**

# ಜೀವ ನೀಡುವ ಸುವಾರ್ತೆ

ನಾನು ಮಾದಕ ವಸ್ತು ಮತ್ತು ಮದ್ಯ ವ್ಯಸನಿಯಾಗಿದ್ದರಿಂದ ನನ್ನ ಕುಟುಂಬವು ಛಿದ್ರವಾಯಿತು. ನಾನು ಬೆಳಿಗ್ಗೆ ನನ್ನ ಕೈಯಿಂದ ದುಡಿದು ಸಂಪಾದಿಸಿದ ಹಣವು ನನ್ನ ಚಟದಿಂದ ರಾತ್ರಿಯಲ್ಲಿ ಮಾಯವಾಗುತ್ತಿತ್ತು! ಕಣ್ಣೀರು ಹಾಕುತ್ತಿರುವ ನನ್ನ ಹೆಂಡತಿ ಮತ್ತು ಆತಂಕಗೊಂಡ ನನ್ನ ಹೆತ್ತವರನ್ನು ನೋಡಿದರೂ ನನ್ನ ಹೃದಯ ಗಟ್ಟಿಯಾಗಿತ್ತು. ನನ್ನ ಇಡೀ ಕುಟುಂಬವು ಖಿನ್ನತೆಗೆ ಒಳಗಾದಾಗ, ಒಬ್ಬ ವಿಶ್ವಾಸಿಯು ನಮಗೆ ಭರವಸೆಯ ಮಾತುಗಳನ್ನು ತಂದರು.

ಸುವಾರ್ತೆಯು, ’ಮನುಕುಲವನ್ನು ಮಾನವರನ್ನಾಗಿ ಮಾಡಲು ಜಗತ್ತಿಗೆ ಬಂದು ಮನುಷ್ಯರೊಂದಿಗೆ ಬದುಕಿದ ಏಕೈಕ ವ್ಯಕ್ತಿ



ಯೇಸು ಕ್ರಿಸ್ತನು. ಆತನನ್ನು ಹೃದಯದಲ್ಲಿ ಸ್ವೀಕರಿಸಿದರೆ ಇಂದಿಗೂ ನಮ್ಮೊಂದಿಗೆ ನೆಲೆಸಿದ್ದಾನೆ’ ಎಂದು ನಮ್ಮೊಂದಿಗೆ ಹಂಚಿಕೊಂಡಿದ್ದು ನಮಗೆ ಭರವಸೆ ಮೂಡಿಸಿದೆ. ಗುದ್ವಾಲ್ ಕ್ಷೇತ್ರದ ಮಿಷಿನರಿ ಪ್ರಕಾಶ್ ನಮ್ಮನ್ನು ಆಗಾಗ್ಗೆ ಭೇಟಿ ಮಾಡಿ ನಮಗಾಗಿ ಪ್ರಾರ್ಥಿಸುತ್ತಿದ್ದರು. ಅವರು ಯೇಸುವನ್ನು ನನ್ನ ಜೀವನಕ್ಕೆ ಪರಿಚಯಿಸಿದರು. ಇಂದು, ಇದು ಯೇಸುಕ್ರಿಸ್ತನ ಮೂಲಕ ಮಾತ್ರ. ನನ್ನ ಹೃದಯವು ಈಗ ಮದ್ಯವನ್ನು ತ್ಯಜಿಸುತ್ತದೆ ಮತ್ತು ನನ್ನ ಗಳಿಕೆಯು ಮನೆಗೆ ತಲುಪುತ್ತದೆ. ನನ್ನನ್ನು ಮನುಷ್ಯನನ್ನಾಗಿ ಮಾಡಿದವನು ಯೇಸು ಮಾತ್ರ. ಹಲ್ಲೆಲುಯಾ! **ಪಂಕಜ್, ಹಿಮಾಚಲ ಪ್ರದೇಶ.**




# ಎತ್ತರಕ್ಕೆ ಹಾರಿ, ಪರ್ವತವನ್ನು ತಲುಪಿರಿ

ಮರಿಹುಳುಗಳು ತಮ್ಮ ರೆಕ್ಕೆಗಳೊಂದಿಗೆ ಬೀಸಿ ಹಾರಲು ಸಿದ್ಧವಾಗಿರುವ ಅದ್ಭುತ ಸಮಯ! 12ನೆಯ ತರಗತಿಯನ್ನು ಮುಗಿಸಿ ಹದಿಹರೆಯದವರು ಶಾಲೆಯಿಂದ ಕಾಲೇಜುಗಳತ್ತ ಮುಂದೆ ಹೋಗುತ್ತಿರುವ ಸಮಯ, ಮತ್ತು ಕಾಲೇಜುಗಳಿಂದ ಯೌವನಸ್ಥರು ಸಂತೋಷದಿಂದ ಹೊಸ ಕೆಲಸದ ಸ್ಥಳಗಳ ಕಡೆಗೆ ಹೆಜ್ಜೆಯನ್ನು ಹಾಕುತ್ತಿರುವ ಸಮಯ!

ಜೀವನದ ಅಚ್ಚರಿಯೆನಂದರೆ ಅದು ನಮಗೆ ಒಂದರ ನಂತರ ಇನ್ನೊಂದರಂತೆ ಪ್ರಸ್ತುತಪಡಿಸುತ್ತಿರುವ ಅದ್ಭುತಗಳು. ಬಣ್ಣ, ಭಾಷೆ, ಜಾತಿಯನ್ನು ಲೆಕ್ಕಿಸದೆ ಕಳೆದ 12 ವರ್ಷಗಳಿಂದ ನಾವು ಮಾಡಿಕೊಂಡ ಸ್ನೇಹಿತರನ್ನು ಬಿಟ್ಟು ಹೋಗುವಾಗ ನಮಗಾಗುವ ನೋವು ಮತ್ತು ಶಿಕ್ಷಕರಿಗೆ ವಿದಾಯ ಹೇಳುವಾಗ ನಮಗಾಗುವ ತೊಂದರೆಗಳೆಲ್ಲವೂ ಕೆಲವೇ ವಾರಗಳಲ್ಲಿ ನಾವು ಜೀವನದಲ್ಲಿರುವ ಶುಭವನ್ನು ಅನುಭವಿಸುತ್ತಿರುವಂತೆಯೆ ಮಾಯವಾಗುತ್ತವೆ. ಇದು ಜಗತ್ತಿನ ಸ್ವಾಭಾವಿಕತೆ ಸಹ ಆಗಿದೆ.

ನಾವು ಪೂರ್ಣಗೊಳಿಸಬೇಕಾದ ಕಾರ್ಯಗಳನ್ನು ಪೂರ್ಣಗೊಳಿಸಿದಾಗ ನಾವು ಹಿತಕರವಾದ ಅಚ್ಚರಿಗಳಿಂದ ತುಂಬಿಸಲ್ಪಟ್ಟಿರುತ್ತೇವೆ ಮತ್ತು ನಮ್ಮ ಅಲಕ್ಷತನದಿಂದ ನಿಗದಿತ ಸಮಯಕ್ಕೆ ಕೆಲಸವನ್ನು ಪೂರ್ಣಗೊಳಿಸದಿರುವ ಮೂಲಕ ನಾವು ಅಹಿತಕರ ಅಚ್ಚರಿಗಳನ್ನು ಎದುರಿಸುರಿಸುತ್ತೇವೆ.

ನಾವು ಕಷ್ಟಪಟ್ಟು ಓದಿದ್ದೇವೆ. ನಾವು ಆಯಾಸದಿಂದ ಹೊರ ಬರುವಷ್ಟರಲ್ಲಿ, ಫಲಿತಾಂಶಗಳು ಪ್ರಕಟವಾಗುತ್ತವೆ, ಮತ್ತು ನಾವು ಇನ್ನೊಂದು ಓಟಕ್ಕೆ ಸಿದ್ಧತೆಯನ್ನು ಮಾಡಲು ಪ್ರಾರಂಭಿಸುತ್ತೇವೆ! ಕಷ್ಟಪಟ್ಟು ದುಡಿಯುವ ಮತ್ತು ಉತ್ತಮವಾಗಿ ಓದುವ ಜನರು ಉದ್ಯೋಗದಲ್ಲಿರುವಾಗ ಹೆಚ್ಚಿನ ಎತ್ತರವನ್ನು ತಲುಪುತ್ತಾರೆ. ಆದರೆ ವ್ಯಾಸಂಗ ಮಾಡಬೇಕಾದ ಸಮಯದಲ್ಲಿ ಸೋಮಾರಿಯಾಗಿದ್ದವರು, ಆಮೆಯೊಂದಿಗೆ ತನ್ನ ಓಟದಲ್ಲಿ ಹಿಂದೆ ಬಿದ್ದು ಪಂದ್ಯದಲ್ಲಿ ಸೋತ ಮೊಲದಂತೆ ಹಿಂದುಳಿಯುತ್ತಾರೆ. ಸೋಲು ಅಂತ್ಯವಲ್ಲ ಮತ್ತು ತಿರುಗಿ ಮೇಲೆ ಏರಲು ಅವಕಾಶಗಳಿವೆ ಎಂದು ಅರಿತುಕೊಂಡವರು ಜೀವನದಲ್ಲಿ ಹೆಚ್ಚಿನ ಸಂಗತಿಗಳನ್ನು ಸಾಧಿಸಿದ್ದಾರೆ.

ಪ್ರೀತಿಯ ಯುವ ಜನರೇ ನೀವು ಹರಿತವಾದ ಬಾಣದಂತೆ ಇದ್ದೀರಿ. ಬಾಣದ ವೇಗವು ಅದು ಶಕ್ತಿಯುತವೋ ಅಥವಾ ವಿನೋದವೋ ಎಂಬುದು ಅದನ್ನು ಹಿಡಿದುಕೊಂಡಿರುವವರನ್ನು ಅವಲಂಬಿಸುತ್ತದೆ. ಮಗು ಬಾಣದೊಂದಿಗೆ ಮಗು ಏನನ್ನೂ ಮಾಡಲಾರದು. ಆದರೆ ಒಬ್ಬ ಶಕ್ತಿವಂತನಾದ ಸೈನಿಕನು ತನ್ನ ಶತ್ರುವಿನ ಮೇಲೆ ಅದೇ ಬಾಣದಿಂದ ನಿಖರವಾಗಿ ಗುರಿಯಿಟ್ಟು, ಜಯಶಾಲಿಯಾಗುತ್ತಾನೆ. ನಾವು ಸೈನಿಕನ ಕೈಯಲ್ಲಿರುವ ಬಾಣಗಳಿದ್ದಂತೆ ಎಂದು ಸತ್ಯವೇದವು ಹೇಳುತ್ತದೆ. ನಾವು ಅವಸರವಾಗಿ ನಮ್ಮ ಗುರಿಯತ್ತ ಸಾಗುತ್ತಿದ್ದೇವೆ ಮತ್ತು ನಮ್ಮ ನಿಗದಿತ ಸ್ಥಳವನ್ನು ತಲುಪುತ್ತೇವೆ, ಎಂದು ಇದರ ಅರ್ಥ. ನೀವು ಹೊಸ ಕಾಲೇಜಿಗೆ ಅಥವಾ ಕೆಲಸದ ಸ್ಥಳಕ್ಕೆ ಕಾಲಿಟ್ಟಾಗ, ಯಶಸ್ಸಿಗೆ ಕೆಲವು ಹಂತಗಳಿರುತ್ತವೆ. ನೀವು ಅದರ ಮೂಲಕ ನಡೆಯುವಾಗ, ಅನೇಕರು ನಿಮ್ಮನ್ನು ಸ್ವಾಗತಿಸಲು ಕಾಯಿತ್ತಿರುತ್ತಾರೆ.

ನಗುವು ಹೃದಯಗಳನ್ನು ಗೆಲ್ಲುವ ಪ್ರಭಲವಾದ ಅಸ್ತ್ರವಾಗಿದೆ! ಅದಕ್ಕೆ ಭಾಷೆ, ಧರ್ಮ ಮತ್ತು ಬಣ್ಣ ಇಲ್ಲ. ನಗುವಿನ ಸಣ್ಣ ಸೂಚನೆಯು ಭವಿಷ್ಯದಲ್ಲಿ ಉತ್ತಮವಾದ ಸಂಬಂಧಕ್ಕೆ ದಾರಿ ಮಾಡಿಕೊಡುತ್ತದೆ. ಪ್ರೀತಿಯಿಂದ ಇತರರೊಂದಿಗೆ ಸಂತೋಷದಿಂದ ಮಾತನಾಡುವ ಜನರಿಗಾಗಿ ಜಗತ್ತು ಒಬ್ಬ ದಾಸನಂತಿರುತ್ತದೆ.

ನಗುವಿನಿಂದಲೇ ಜಗತ್ತನ್ನು ಜಯಿಸಬಹುದು. ಆದುದರಿಂದ ನಗುವುದನ್ನು ಕಲಿಯಿರಿ. ಇತರರೊಂದಿಗೆ ನಗುತ್ತಾ ಮಾತನಾಡುವುದನ್ನು ಕಲಿಯಿರಿ. ನಿಮ್ಮ ನಗು ಮೋಸಗೊಳಿಸದಿರಲಿ. ಅದೇ ಸಮಯದಲ್ಲಿ ನೀವು ಎದುರಿಸುವ ನಗುವಿನ ಕುರಿತು ಎಚ್ಚರಿಕೆಯಿಂದಿರಿ ಯಾಕಂದರೆ ಅವುಗಳು ವಿಷದಿಂದ ಲೇಪಿತವಾಗಿರಬಹುದು.

"ಜೀವನದ ಎಲ್ಲಾ ಒಳ್ಳೆಯತನ ಸತ್ಯ ಎಂಬ ಒಂದೇ ಪದದಡಿಯಲ್ಲಿದೆ. ನನ್ನ ಸ್ನೇಹಕ್ಕೆ ಸುಳ್ಳು ಆಧಾರವಾಗದಿರಲಿ" ಎಂಬ ಈ ಹೇಳಿಕೆಯು ನಿಮ್ಮ ಜೀವನದ ಪಾಠವಾಗಲಿ..

ಸತ್ಯ ಪ್ರಾಮಾಣಿಕತೆ ಸಮಗ್ರತೆಯು ಉದ್ಯೋಗದ ಅವಕಾಶಗಳನ್ನು ಚಿನ್ನದ ಎಳೆಯಲ್ಲಿ ಹಿಡಿದುಟ್ಟುಕೊಂಡು ಅದಕ್ಕೆ ಯೋಗ್ಯರಾದವರನ್ನು ಸ್ವೀಕರಿಸುತ್ತದೆ. ನಾವು ಸತ್ಯವನ್ನು ಸ್ವಲ್ಪಮಟ್ಟಿಗೆ ಸರಿಪಡಿಸಿಕೊಳ್ಳಬಹುದು. ಆದರೆ ಸತ್ಯವನ್ನು ಮಾತನಾಡುವ ಕಾರಣದಿಂದ ಸಮಸ್ಯೆಗಳನ್ನು ಎದುರಿಸುತ್ತಿರುವವರು ನಂತರದ ದಿನಗಳಲ್ಲಿ ಅದೇ ಸತ್ಯವನ್ನು ಮಾತನಾಡುವುದರ ಮೂಲಕ ಮಾದರಿಯಾಗುತ್ತಾರೆ. ಸುಳ್ಳು ಹೇಳುವ ಮೂಲಕ ಪಾರಾಗುವವರು ಸ್ವಲ್ಪ ಸಮಯದವರೆಗೆ ಸ್ವೇಚ್ಛೆಯಿಂದ ಜೀವಿಸುತ್ತಾರೆ ಮತ್ತು ಶಾಶ್ವತವಾಗಿ ತೊಂದರೆಯಲ್ಲಿ ಸಿಲುಕಿಕೊಳ್ಳುತ್ತಾರೆ. ಪದೇಪದೇ ತಮ್ಮನ್ನು ಹೊಗಳಿಕೊಳ್ಳುವ ಮತ್ತು ಸತ್ಯವನ್ನು ಹೊರತುಪಡಿಸಿ ಪ್ರತಿಯೊಂದನ್ನೂ ಮಾತನಾಡುವ ಜನರು ನಿಮ್ಮ ಸುತ್ತಲೂ ಇದ್ದರೆ, ಆಗ ಅವರಿಂದ ದೂರ ಹೋಗಿರಿ. ಅವರೊಂದಿಗೆ ನಿಮ್ಮ ಸಂಭಾಷಣೆಯು ಖಡಕ್ಕಾಗಿರಲಿ.

ಒಬ್ಬ ಕಷ್ಟಪಟ್ಟು ಕೆಲಸ ಮಾಡುವ ವ್ಯಕ್ತಿಯಾಗಿರಿ. ಕಷ್ಟಪಟ್ಟು ಕೆಲಸ ಮಾಡುವ ವಕ್ತಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಉದ್ಯಮಿಗಳೊಂದಿಗಿನ ಸಭೆಯಲ್ಲಿ ನಾನು ಪಡೆದುಕೊಂಡ ಮಾಹಿತಿಯಿಂದ ನಾನು ಹಿಂದಕ್ಕೆ ಬಂದೆ. ಭೂಮಿಯ ಮೇಲೆ ವಾಸಿಸುತ್ತಿರುವ 100 ಜನರ ಮಧ್ಯದಲ್ಲಿ 97 ಜನರಿಗೆ ತಾವು ಏನು ಮಾಡುತ್ತಿದ್ದೇವೆ ಎಂಬುದು ತಿಳಿದಿಲ್ಲ. ಆದರೆ ಶೇಕಡಾ 3ರಷ್ಟು ಜನರ ಸಹಾಯದಿಂದ ಮಾತ್ರ ಭೂಮಿಯು ಕಾರ್ಯವನ್ನು ನಿರ್ವಹಿಸುತ್ತಿದೆ. ಅವರು ತಮ್ಮ ಜೀವಿತವನ್ನು ಇತರರಿಗಾಗಿ ಅರ್ಪಿಸುತ್ತಾರೆ ಮತ್ತು ಹಗಲು ರಾತ್ರಿ ಕೆಲಸವನ್ನು ಮಾಡುತ್ತಾರೆ. ಆ ಕಾರಣಕ್ಕಾಗಿಯೇ, ಭೂಮಿಯು ಸುಂದರವಾಗಿದೆ, ನೈಸರ್ಗಿಕವಾಗಿದೆ ಮತ್ತು ಭವಿಷ್ಯದಲ್ಲಿ ಜನರು ಜೀವಿಸಲು ಯೋಗ್ಯವಾಗಿದೆ. ನೀವು ಈ 3 ರಲ್ಲಿ ಮಾತ್ರ ಇರಬೇಕು. ಕೆಲಸಮಾಡುವ ದೇಹಕ್ಕೆ ವಿಶ್ರಾಂತಿಯ ಅಗತ್ಯತೆಯಿದೆ. ಆದರೆ ನಮ್ಮ ಆಲೋಚನೆ ಮತ್ತು ಗಂಭೀರವಾದ ಯೋಜನೆಗಳಿಗೆ ದೊಡ್ಡ ಪ್ರಮಾಣದಲ್ಲಿ ವಿಶ್ರಾಂತಿಯ ಅಗತ್ಯತೆಯಿಲ್ಲ. ಕಷ್ಟಪಟ್ಟು ದುಡಿಯುವ ಜನರ ಪಟ್ಟಿಯಲ್ಲಿ ನಿಮ್ಮ ಹೆಸರು ಯಾವಾಗಲೂ ಇರಬೇಕು. ನಿಮ್ಮ ಶ್ರಮಗಳು ನಿಮ್ಮ ಜೀವಿತವನ್ನು ಮೇಲಕ್ಕೆತ್ತುವುದು ಮಾತ್ರವಲ್ಲದೆ ಇತರರ ಕಣ್ಣೀರು ಮತ್ತು ಬಡತನವನ್ನು ತೆಗೆದು ಹಾಕುವಂತಿರಬೇಕು.

ಯಥಾರ್ಥವಾಗಿರಲು ಕಲಿಯಿರಿ. ನಿಮ್ಮ ಜೀವನದ ಅಧಿಕ ಭಾಗವು ತೆರೆದ ಪುಸ್ತಕವಾಗಿರಲಿ. ನೀವು ಮಾಡುವ ಎಲ್ಲವನ್ನೂ ಇತರರಿಗೆ ಜಾಹೀರುಪಡಿಸುವ ಅವಶ್ಯಕತೆಯಿಲ್ಲ. ಇದರ ಕುರಿತು ಕಾಳಜಿಯಿರುವ ಜನರಿಗೆ ಇದು ತಿಳಿದರೆ ಸಾಕು. ಕೆಲವರು ತಮ್ಮ ಕುರಿತು ಅತೀಂದ್ರಿಯ ಚಿತ್ರಣವನ್ನು ರೂಪಿಸಿಕೊಂಡು ತಾವು ಮಾಡಿದ್ದೆಲ್ಲವನ್ನೂ ಯೋಜಿಸಿಕೊಳ್ಳುವ ಮೂಲಕ ಸಾಧನೆ ಮಾಡುತ್ತಲೇ ಇರುತ್ತಾರೆ. ನಿಮ್ಮ

ಹೆಸರು ಈ ಪಟ್ಟಿಯಲ್ಲಿ ಇರದಿರಲಿ. ನೀವು ಮಾಡುವ ಕೆಲಸಗಳು ದೇವರ ಮುಂದೆ ಮತ್ತು ನಿಮ್ಮ ಆತ್ಮಸಾಕ್ಷಿಯ ಮುಂದೆ ಸರಿಯಾಗಿ ಇರುವಾಗ ಯಾವುದೇ ಸಮಸ್ಯೆ ಇಲ್ಲ. ನಮ್ಮ ಎಲ್ಲಾ ಕ್ರಿಯೆಗಳು ಪರಲೋಕದಲ್ಲಿ ದಾಖಲಿಸಲ್ಪಡುತ್ತವೆ ಮತ್ತು ಅದು ಒಂದು ದಿನ ಇತರರಿಗೆ ತೋರಿಸಲ್ಪಡುತ್ತದೆ ಎಂಬುದನ್ನು ನಾವು ಮರೆಯಬಾರದು.

ಕೆಲಸದ ಸ್ಥಳಗಳಲ್ಲಿ ಅಥವಾ ಹೊರಗೆ ತಪ್ಪು ಸಂಬಂಧಗಳ ಮೂಲಕ ನಿಮ್ಮನ್ನು ದಾಸರನ್ನಾಗಿ ಮಾಡಲು ಪ್ರಯತ್ನಿಸುತ್ತಿರುವ ಜನರ ಬಲೆಗಳ ಕುರಿತು ಎಚ್ಚರಿಕೆಯಿಂದಿರಿ. ನೀವು ಅನೇಕರಿಂ ಪ್ರೀತಿಸಲ್ಪಡಬಹುದು. ಆ ಅನೇಕರ ಮಧ್ಯದಲ್ಲಿ ಒಬ್ಬರು ನಿಮ್ಮನ್ನು ಆಕರ್ಷಿಸಲೂಬಹುದು. ಆದರೆ ಎಲ್ಲಾ ಆಕರ್ಷಣೆಗಳು ಅಪಾಯಕಾರಿಯಾಗಿವೆ. ಇದು ನಿಮ್ಮನ್ನು ನಿಸ್ಸಾರತೆಗೆ ಕೊಂಡೋಯ್ಯುತ್ತದೆ. ನಿಮ್ಮನ್ನು ಹೆತ್ತು, ಬೆಳೆಸಿ, ಅವರ ಕಣ್ಣೀರು ಮತ್ತು ಬೆವರಿನ ಮಧ್ಯೆ ನೀವು ನಿಂತುಕೊಳ್ಳುವಂತೆ ಮಾಡಿದ ನಿಮ್ಮ ತಂದೆ ತಾಯಿಗೆ ನೀನು ಕೊಡುವ ಉತ್ತಮವಾದ ಉಡುಗೊರೆಯೇ ನಿನ್ನ ಜೀವನ ಸಂಗಾತಿಯನ್ನು ಆಯ್ಕೆ ಮಾಡುವ ಸೌಭಾಗ್ಯ. ನಾವು ಯಾರನ್ನಾದರೂ ಕೈ ಹಿಡಿದು ನಮ್ಮ ತಂದೆತಾಯಿಗಳು ಅವನನ್ನು/ಅವಳನ್ನು ಒಪ್ಪಿಕೊಳ್ಳುವಂತೆ ಎಳೆದುಕೊಂಡು ಹೋದರೆ, ಇನ್ನೊಂದು 30 ವರ್ಷಗಳಲ್ಲಿ, ಈಗ ನಮ್ಮ ತಂದೆತಾಯಿಗಳು ಎದುರಿಸಿದ ಅದೇ ಸಮಸ್ಯೆಗಳನ್ನು ನಾವು ಎದುರಿಸಬೇಕಾಗುತ್ತದೆ.

ಜೀವನವು ಒಂದು ವರ್ತುಲವಾಗಿದೆ ಎಂಬುದು ನೆನಪಿನಲ್ಲಿಟ್ಟುಕೊಳ್ಳಿರಿ. ನಾವು ಮನುಷ್ಯರಿಗೆಮಾಡಿದ್ದೆಲ್ಲವೂ ಒಂದು ದಿನ ನಮಗಾಗುತ್ತದೆ. ನಾವು ಜೀವನದ ಆ ಕಹಿ ಭಾಗವನ್ನು ಅನುಭವಿಸಬೇಕು. ಹಾಗರಳು ಮರುಭೂಮಿಗೆ ಓಡಿಹೋಗಲು ಅಬ್ರಹಾಂ ಮತ್ತು ಸಾರಾ ಕಾರಣರಾದರು. ಮೊದಲು, ಅವಳು ಶೂರ್ ಮರುಭೂಮಿಗೆ ಮತ್ತು ನಂತರ ಬೇರ್ಷೆಬಕ್ಕೆ ಓಡಿಹೋದಳು. ಕೆಲವು ವರ್ಷಗಳಲ್ಲಿ, ಅಬ್ರಹಾಮನ ಸಂತತಿಯವರು ಅದೇ ಮರುಭೂಮಿಗಳಲ್ಲಿ ನೀರಿಗಾಗಿ ಅಲೆದಾಡಿದರು. ಅವರು 40 ವರ್ಷಗಳವರೆಗೆ ಅಲೆದಾಡಿದರು. ನಾವು ಏನು ಬಿತ್ತುತ್ತೇವೆಯೋ, ಅದನ್ನೇ ನಾವು ಕೊಯ್ಯುತ್ತೇವೆ. ನಾವು ನಿರಂತರವಾಗಿ ಒಳ್ಳೆಯ ಮತ್ತು ನಿತ್ಯವಾಗಿರುವುದನ್ನು ಬಿತ್ತೋಣ. ಇದು ನಮಗೆ ಆಶೀರ್ವಾದ ಮತ್ತು ಜೀವನವಾಗಿರುತ್ತದೆ.

ರಚನಾತ್ಮಕ ಸತ್ಯವೇನಂದರೆ ನಾವು ನಮಗೆ ಸೇರಿದವರಲ್ಲ ಎಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. ಈ ಸತ್ಯವನ್ನು ನೀವು ಎಷ್ಟು ಬೇಗ ಕಂಡುಕೊಳ್ಳುತ್ತೀರೋ, ಅಷ್ಟು ವೇಗವಾಗಿ ನೀವು ಯಶಸ್ಸಿನ ಮೆಟ್ಟಿಲುಗಳನ್ನು ಏರುತ್ತೀರಿ. ನಿಮ್ಮನ್ನು ಈಗಾಗಲೇ ಯಾರೋ ಬೆಲೆ ಕಟ್ಟುವ ಮೂಲಕ ಕೊಂಡುಕೊಂಡಿದ್ದಾರೆ. ಆದುದರಿಂದ, ಕೆಲವು ಸಂಗತಿಗಳನ್ನು ಮಾಡುವ ಸ್ವಾತಂತ್ರ್ಯ ನಿಮಗಿಲ್ಲ. ಆದರೆ ನೀವು ತಂದೆಯ ಕೈಗಳ ಪ್ರೀತಿಯ ಕಾಳಜಿಯಲ್ಲಿ ಕಾರ್ಯಗತಗೊಳ್ಳಲು ಪ್ರಾರಂಭಿಸಿದಾಗ, ಪರಲೋಕವು ನಿಮ್ಮ ಸ್ವರದ ಮೂಲಕ ಬದ್ಧವಾಗಿರುತ್ತದೆ. ಆತನೊಂದಿಗೆ ಇರುವುದೇ ಒಂದು ದೊಡ್ಡ ಸ್ವಾತಂತ್ರ್ಯ! ಜಗತ್ತು ನಿಮಗಾಗಿ ತೆರೆದಿರುತ್ತದೆ. ದೇವರ ಶಕ್ತಿಯುತವಾದ ಕೈಗಳ ಕೆಳಗೆ ನಿಮ್ಮ ಎಳೆಯ ರೆಕ್ಕೆಗಳನ್ನು ಬೀಸಿ ಎತ್ತರಕ್ಕೆ ಹಾರಿರಿ. ನಿಮ್ಮನ್ನು ಮುಟ್ಟುವ ಅಧಿಕಾರ ಈ ಜಗತ್ತಿನಲ್ಲಿ ಯಾರಿಗೂ ಇಲ್ಲ! ಆಮೆನ್.

**ಹ್ಯಾರಿಸ್ ಪ್ರೇಮ್, ವಿಶ್ವವಾಣಿ ಮಾಧ್ಯಮ.**

**ನಿಮ್ಮ ಗಮನಕ್ಕೆ...** ನೊಂದಾಯಿತ ಸುದ್ದಿ ಪತ್ರಗಳ ವಿಷಯದಲ್ಲಿ ಅಂಚೆ ವಿಭಾಗವು ಲಕೋಟೆಗಳ ಮೇಲೆ ಮೂರು ಬದಲಾವಣೆಗಳನ್ನು ಮಾಡಲು ತಿಳಿಸಿರುವದು. ಕಳುಹಿಸಬೇಕಾಗಿರುವವರ ಗುರುತಿನ ಸಂಖ್ಯೆ, ಪತ್ರಿಕೆಯ ಹೆಸರು ಮತ್ತು ಲೋಗೋ ಮತ್ತು ಕಳುಹಿಸುವವರ ಅಚ್ಚಾದ ವಿಳಾಸ ಲಕೋಟೆಗಳ ಮೇಲಿನಿಂದ ತೆಗೆಯಲು ಹೇಳಿದೆ. ಸಮರ್ಪಣ್ ಪತ್ರಿಕೆಯನ್ನು ಪಡೆಯುವವರು, ನಿಮ್ಮ ವಿಳಾಸದಲ್ಲಿ ಬದಲಾವಣೆಯಾದರೆ ಅಥವಾ ಬೇಡವಾದರೆ ನಿಮ್ಮ ಪ್ರದೇಶದ ಅಭಿವೃದ್ಧಿ ಸೇವಕರಿಗೆ ತಿಳಿಸಬೇಕಾಗಿ ಕೋರುವೆವು.

# ಕೋಯಾ ಪ್ರದೇಶದಲ್ಲಿ ಬಿದ್ದ ಗೋದಿ ಕಾಳು



ಕಳೆದ 16 ವರ್ಷಗಳಿಂದ ಮಿಷಿನರಿ ಅಕ್ವಿಲ್ಲಾ ಶಾಸ್ತ್ರಿ (50 ವರ್ಷ) ಆಂಧ್ರ ಪ್ರದೇಶದ ಗೋದಾವರಿ ನದಿಯ ಪಶ್ಚಿಮ ದಡದ ಪಕ್ಕದಲ್ಲಿ ಹರಡಿರುವ ಕೋಯಾ ಜನರ ಗುಂಪಿನೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳುತ್ತಿದ್ದರು. ಅವರು ಹಳ್ಳಿಗಳಲ್ಲಿ ಪಂಡಿರಿ, ಮಾಮಿಡಿಯಿಂದ ಗುಡಿದ ಬೋರುದವರೆಗೆ ವಾಸಿಸುತ್ತಿರುವ ಜನರೊಂದಿಗೆ ಕ್ರಿಸ್ತನ ಪ್ರೀತಿಯನ್ನು ಹಂಚಿಕೊಳ್ಳಲು ಅವರು ಶ್ರಮವಹಿಸಿ ಕೆಲಸವನ್ನು ಮಾಡಿದ್ದರು. ಇದು ಕ್ರಿಸ್ತನಲ್ಲಿ ಬಿಡುಗಡೆಯನ್ನು ಹೊಂದಲು ಅವರಿಗೆ ಸಹಾಯ ಮಾಡಿತು. ಅವರ ಪರಿಶ್ರಮದ ಪ್ರಯತ್ನಗಳ ಮೂಲಕ 16 ಹಳ್ಳಿಗಳಲ್ಲಿ ದೀಪಸ್ತಂಭಗಳಂತಿರುವ ದೇವಾಲಯಗಳು ಸ್ಥಾಪನೆ ಗೊಂಡವು. ಅಕ್ವಿಲ್ಲಾ ನಡೆಸಿದ ಸತ್ಯವೇದ ಅಧ್ಯಯನ ಗುಂಪುಗಳು, ಆರಾಧನಾ ಗುಂಪುಗಳು ಮತ್ತು ಉಜ್ಜೀವನ ಶಿಬಿರಗಳು ಕೋಯಾ ಹಳ್ಳಿಗಳನ್ನು ದೊಡ್ಡ ಬೆಳಕಿನೆಡೆಗೆ ನಡೆಸಿವೆ ಮತ್ತು ನೂರಾರು ಆತ್ಮಗಳನ್ನು ಪುನಃಸ್ಥಾಪಿಸಿವೆ.

ಮೇ 6, 2024 ರಂದು, ಅಕ್ವಿಲ್ಲಾ ಅವರು ಏಲೂರು ಜಿಲ್ಲೆಯ ಚಿನ್ನ ಜೀಡಿಪುಡಿಯಲ್ಲಿ ತಮ್ಮ ಸೇವೆಯನ್ನು ಪೂರ್ಣಗೊಳಿಸಿದರು. ಅವರು ಸೇವಕರ ಸಭೆಯಲ್ಲಿ ಭಾಗವಹಿಸಿದರು ಮತ್ತು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸೇವಕರಿಗೆ ಸಂತೋಷದಿಂದ ವಿದಾಯ ಹೇಳಿದರು. ಮನೆ ತಲುಪಿದ ನಂತರ ಅವರೆಗ ಎದೆನೋವು ಬಂದಿತು. ಜನರು ಅವರನ್ನು ಗಡಿದಬೋರು ಪ್ರದೇಶದಿಂದ 15 ಕಿಲೋ ಮೀಟರ್ ದೂರದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆದರೆ ಆಸ್ಪತ್ರೆಗೆ ಹೋಗುವಾಗ ದಾರಿಯಲ್ಲಿ ಸಾವನ್ನಪ್ಪಿದರು. ಅಕ್ವಿಲ್ಲಾ ಮೂಲಕ ಕೋಯಾ ಗುಂಪಿನ ಮಧ್ಯದಲ್ಲಿ ನಡೆದ ಸೇವೆಗಾಗಿ ನಾವು ಕರ್ತನನ್ನು ಸ್ತುತಿಸುತ್ತೇವೆ. ಕೋಯಾ ಪ್ರದೇಶದಿಂದ ನೂರಾರು ಕೋಯಾ ಸೇವಕರು ಎದ್ದು ಬರುತ್ತಾರೆ ಎಂದು ನಾವು ನಂಬುತ್ತೇವೆ. ಸೇವಕರ ಪತ್ನಿ ಪ್ರಿಸ್ಕಿಲ್ಲಾ ಮತ್ತು ಅವರ ಚಿಕ್ಕ ಮಕ್ಕಳಾದ ಪ್ರೇಮ್ ಕುಮಾರ್ ಮತ್ತು ಪರಿಮಳಾ ಪುಷ್ಪಾ ಇವರನ್ನು ನೆನಪಿಸಿಕೊಳ್ಳುವುದನ್ನು ಮರೆಯಬೇಡಿರಿ.

# ಪ್ರದೇಶಕ್ಕೆ ಭೇಟಿ ನೀಡಿ, ಕರ್ತನಲ್ಲಿ ಸಂತೋಷಪಟ್ಟರು!

ಮಹಿಮಾನ್ವಿತ ಸುವಾರ್ತೆ ತಲುಪುತ್ತಿರುವ ಎಲ್ಲಾ ಕಡೆಗಳಲ್ಲಿ ಪವಿತ್ರಾತ್ಮನ ಕಾರ್ಯಗಳ ಮೂಲಕ ಸಮುದಾಯದಲ್ಲಿ ತೀವ್ರವಾದ ಬದಲಾವಣೆಗಳನ್ನು ಉಂಟುಮಾಡಲು ಬೆಳೆಯುತ್ತಿರುವ ವಿಶ್ವಾಸಿಗಳ ಅನ್ಯೋನ್ಯತೆಯನ್ನು ನೋಡಲು ಕರ್ತನು ನಮಗೆ ಸೌಲಭ್ಯಗಳನ್ನು ಕೊಟ್ಟಿದ್ದಾನೆ. ತಿರುನೆಲ್ವೇಲಿಯಿಂದ ಆರು ಜನರ ತಂಡದಂತೆ ನಾವು ದೇವಾಲಯದ ಪ್ರತಿಷ್ಠಾ ಕಾರ್ಯಕ್ಕಾಗಿ ವಾಯ್ ಶ್ರೀರಾಮಪುರಂ ಪ್ರದೇಶ, ಮಾನ್ಯ ಜಿಲ್ಲೆಗೆ ಭೇಟಿ ನೀಡಿದೆವು. ಶ್ರೀ ಸಮುವೇಲರ ಪ್ರಾರ್ಥನೆಗಳ ಮತ್ತು ದೇಣಿಗೆಯ ಮೂಲಕ ದೇವಾಲಯವನ್ನು ಅಭಿವೃದ್ಧಿ ಪಡಿಸಲಾಯಿತು ಮತ್ತು 24.03.2024 ರಂದು ದೇವರ ಮಹಿಮೆಗಾಗಿ ಪ್ರತಿಷ್ಠೆ ಮಾಡಲಾಯಿತು. ತನ್ನ ನುಡಿಯನ್ನು ಭೂಲೋಕಕ್ಕೆ ಕಳುಹಿಸುತ್ತಾನೆ, ಆತನ ವಾಕ್ಯವು ಬಹು ವೇಗಶಾಲಿಯಾಗಿದೆ. (ಕೀರ್ತನೆ 147:15) ಎಂಬ ವಾಕ್ಯದ ಪ್ರಕಾರ ನಾವು ನಮ್ಮ ಸ್ವಂತ ಕಣ್ಣುಗಳಿಂದ ಸಾವಿರಾರು ಆತ್ಮಗಳನ್ನು ನೋಡಲು ಸಾಧ್ಯವಾಯಿತು. ವಾಯ್ ಶ್ರೀರಾಮಪುರಂ ನಲ್ಲಿರುವ ದೇವಾಲಯವು ಯೇಸು ಕ್ರಿಸ್ತನ ಎರಡನೆಯ ಬರೋಣದವರೆಗೆ ಬೆಳೆಯುವುದನ್ನು ಮುಂದುವರೆಸುವಂತೆ ಮತ್ತು ಮೊದಲನೆಯ ತಲೆಮಾರಿನ ವಿಶ್ವಾಸಿಗಳು ಪರಲೋಕದಲ್ಲಿ ಸಂತೋಷವುಂಟಾಗುವುದಕ್ಕೆ ಸಾಕ್ಷಿ ಗಳಾಗಿರಲಿಕ್ಕಾಗುವಂತೆ ದಯಮಾಡಿ ಪ್ರಾರ್ಥಿಸಿರಿ.

**ಸೇವಕರಾದ ಕ್ರಿಸ್ಟೋಫರ್ ಜೇಮ್ಸನ್ ಜೊತೆಗಿನ ಪ್ರವಾಸದ ಗುಂಪು**



# ನೆಟ್ ವರ್ಕ್ ಚೇರ್ಮನ್ನರಿಂದ

ಪ್ರೀತಿಯ ಆಲೋಚನೆಗಳು

ಕ್ರಿಸ್ತನಲ್ಲಿರುವ ಪ್ರೀತಿಯ ಸಹೋದರ ಮತ್ತು ಸಹೋದರಿಯರೇ,

ಕರ್ತನಾದ ಯೇಸು ಕ್ರಿಸ್ತನ ಜ್ಞಾನದಲ್ಲಿ ನಾವು ಬೆಳೆಯುತ್ತಿರುವಂತೆಯೇ ಕೃಪೆ ಮತ್ತು ಸಮಾಧಾನವು ಹೆಚ್ಚಾಗಲಿ.

ವಿಶ್ವವಾಣಿಯ ಸಮರ್ಪಣ್ ಪತ್ರಿಕೆಯು ದೇವರ ಕೃಪೆಯ ಮೂಲಕ ನಿಮ್ಮನ್ನು ತಲುಪುತ್ತಲಿದೆ ಮತ್ತು 12 ಭಾಷೆಗಳಲ್ಲಿ ಪ್ರಕಟವಾಗುತ್ತಲಿದೆ. ಈ ತಿಂಗಳಿಗೆ ಅದನ್ನು ಪ್ರಚಾರ ಮಾಡಲು ನಾವು ಕ್ರಿಸ್ತನಿಂದ ಸದಾವಕಾಶಗಳನ್ನು ಹೊಂದಿದ್ದೇವೆ. ನಿಮ್ಮ ಪ್ರಾರ್ಥನೆಗಳ ಬೆಂಬಲದಿಂದ ಮತ್ತು ಪಾಲ್ಗೊಳ್ಳುವಿಕೆಯ ಮೂಲಕ ಸೇವೆಯನ್ನು ದೇವರು ಅತಿ ಎತ್ತರಕ್ಕೆ ಕೊಂಡೊಯ್ಯುತ್ತಿದ್ದಾನೆ. ಎಲ್ಲಾ ಮಹಿಮೆ ಮತ್ತು ಗೌರವವು ಆತನಿಗೆ ಸಲ್ಲಲಿ.

ಅಷ್ಟು ಮಾತ್ರವಲ್ಲದೇ, ಸೇವೆಯಲ್ಲಿರುವ ಪಾಲುದಾರರು ಸುವಾರ್ತೆಯ ಕೇಂದ್ರ ಬಿಂದುವಾಗಿರಬೇಕೆಂದು ದೇವರು ನಿರೀಕ್ಷಿಸುತ್ತಾನೆ. ಪುನರುತ್ಥಾನಗೊಂಡ ಕರ್ತನು ಪರಲೋಕಕ್ಕೆ ಏರಿ ಹೋಗುವ ಮೊದಲು ಶಿಷ್ಯರಿಗೆ ಕಾಲಕಾಲಕ್ಕೆ ಕಾಣಿಸಿಕೊಂಡನು ಮತ್ತು ಅವರಿಗೆ ಒಂದು ಮುಖ್ಯವಾದ ಸಂದೇಶವನ್ನು ಕೊಟ್ಟನು ಮತ್ತು ಅವರಿಗೆ ಈ ಅತ್ಯಂತ ಮುಖ್ಯವಾದ ಕೆಲಸವನ್ನು ಪೂರ್ಣಗೊಳಿಸಲು ಹೇಳಿದನು.

**ಮುಖ್ಯವಾದ ಸಂದೇಶ:** ಸುವಾರ್ತೆ – ರಕ್ಷಣೆಯ ಸಂದೇಶ. ದೇವರ ವಾಕ್ಯದ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳಿಗೋಸ್ಕರವಾಗಿ ಸತ್ತನು, ಹೂಣಲ್ಪಟ್ಟನು ಮತ್ತು ಮೂರನೆಯ ದಿನದಲ್ಲಿ ಪುನರುತ್ಥಾನಗೊಂಡನು ಎಂಬುದು ಸಂದೇಶವಾಗಿದೆ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಈ ದಿನದ ವರೆಗೂ ಜೀವಂತವಾಗಿದ್ದಾನೆ ಮತ್ತು ಆತನು ಅರಸರ ಅರಸನು ಮತ್ತು ಕರ್ತರ ಕರ್ತನಾಗಿ ಮಹಿಮಾನ್ವಿತನಾಗಿ ಹಿಂತಿರುಗಿ ಬರುತ್ತಾನೆ.

**ಮುಖ್ಯವಾದ ಕೆಲಸ:** ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದುದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು (ಮತ್ತಾಯ 28:18–20).

ಆತನ ಎರಡನೆಯ ಬರೋಣಕ್ಕಿಂತ ಮೊದಲು ಆತನ ಕುರಿತು ಪ್ರಚುರಪಡಿಸುವಂತೆ ನಾವು ಕರ್ತನಿಂದ ಆಜ್ಞಾಪಿಸಲ್ಪಟ್ಟಿದ್ದೇವೆ. ಆದುದರಿಂದ ನಾವು ಎಲ್ಲೇ ಇದ್ದರೂ ಯೇಸುವಿನ ಕುರಿತು ಹಂಚಿಕೊಳ್ಳೋಣ ಮತ್ತು ದೂರದ ಸ್ಥಳಗಳಲ್ಲಿ ಆತನ ಕುರಿತು ಹಂಚಿಕೊಳ್ಳಲು ಅವಕಾಶಗಳನ್ನು ಪಡೆದುಕೊಳ್ಳೋಣ. ಇದು ನಮ್ಮ ಮೇಲಿರುವ ದೊಡ್ಡ ಭಾರ. ಒಂದು ವೇಳೆ ನೀವು ಈ ಪತ್ರಿಕೆಯನ್ನು ಪಡೆದುಕೊಳ್ಳುತ್ತಿದ್ದರೆ, ನೀವು ಉಳಿತಾಯ ಪೆಟ್ಟಿಗೆಗಳ ಮೂಲಕ ಅಥವಾ ಪ್ರತಿ ತಿಂಗಳು ರೂ. 4000 ಅನ್ನು ದೇಣಿಗೆ ಕೊಡುವ ಮೂಲಕ ಕುಟುಂಬವಾಗಿ ಒಂದು ಹಳ್ಳಿಯನ್ನು ಅಥವಾ ದೇವಾಲಯವನ್ನು ದತ್ತು ತೆಗೆದುಕೊಳ್ಳುವ ಮೂಲಕ ಬೆಂಬಲಿಸಬಹುದು ಎಂಬುದನ್ನು ಇದು ನಿರ್ಣಯಿಸುತ್ತದೆ. ಕರ್ತನು ನಿಮ್ಮನ್ನು ಸಮೃದ್ಧಿಯಾಗಿ ಆಶೀರ್ವದಿಸಲಿ.

ನೀವು ಸುವಾರ್ತೆಯ ಸೇವೆಯಲ್ಲಿ ಪ್ರಮುಖರಾಗಿರುವ ಕಾರಣ ನಾನು ನಿಮ್ಮ ಮುಂದೆ ಎರಡು ವಿನಂತಿಗಳನ್ನು ಇಡುತ್ತೇನೆ. ಮೊದಲನೆ ಮತ್ತು ಅತಿ ಪ್ರಾಮುಖ್ಯವಾಗಿರುವುದು ಉಳಿತಾಯ ಪೆಟ್ಟಿಗೆಗಳು. ನಿಮ್ಮ ಸ್ನೇಹಿತರಿಗೆ ಅಥವಾ ಅವರ ಕುಟುಂಬಕ್ಕೆ ಉಳಿತಾಯ ಪೆಟ್ಟಿಗೆಯ ಕುರಿತು ತಿಳಿಸಿ ಹೇಳಲು ಮುಂದೆ ಬನ್ನಿರಿ, ಇದರಿಂದ ಅವರು 6 ತಿಂಗಳಿಗೊಮ್ಮೆ 600 ರೂಪಾಯಿಗಳನ್ನು ದೇಣಿಗೆ ನೀಡಲು ಸಾಧ್ಯವಾಗುತ್ತದೆ. ಎರಡನೆಯದಾಗಿ ನೀವು ಒಂದು ಹಳ್ಳಿಯಲ್ಲಿ ಸೇವೆಯನ್ನು ಬೆಂಬಲಿಸಲು ಪ್ರತಿ ತಿಂಗಳು ರೂ. 4000 ದೇಣಿಗೆ ಕೊಡುವ ಕುಟುಂಬವನ್ನು ಪರಿಚಯಿಸಬಹುದು.

ಮಿಷನರಿಗಳು ಮಾತ್ರವಲ್ಲದೆ ಎಲ್ಲಾ ವಿಶ್ವಾಸಿಗಳೂ ಸುವಾರ್ತೆ ಕಾರ್ಯದಲ್ಲಿ ಭಾಗಿಯಾಗಬೇಕು ಮತ್ತು ದೇವರ ಆಶೀರ್ವಾದವನ್ನು ಹೊಂದಿಕೊಳ್ಳಬೇಕು ಎಂಬುದು ದೇವರ ಬಯಕೆಯಾಗಿದೆ.

ನಾನು ಸಮರ್ಪಣ್ ಮಾಸಪತ್ರಿಕೆಯಲ್ಲಿ (ಮೇ ಸಂಚಿಕೆ) ಪಠಾಣ್‌ಕೋಟ್‌ನಲ್ಲಿ (ಪಂಜಾಬ್) ಜಮ್ಮು ಕಾಶ್ಮೀರ, ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದ ಉತ್ತರ ಭಾರತದ ಸೇವೆಗಳ ತರಬೇತಿ ಕೇಂದ್ರದ ನಿರ್ಮಾಣದ ಬಗ್ಗೆ ಹಂಚಿಕೊಂಡಿದ್ದೇನೆ. ಈ ತರಬೇತಿ ಕೇಂದ್ರವು ಈ 4 ರಾಜ್ಯಗಳ ಯುವಕರಿಗೆ ಸೇವೆಗಳ ಕುರಿತು ತರಬೇತಿ ನೀಡಲು, ಪ್ರಾರ್ಥನಾ ಶಿಬಿರಗಳನ್ನು ನಡೆಸಲು ಮತ್ತು ದಕ್ಷಿಣ ಭಾರತದ ಸೇವೆಗಳ ಪಾಲುದಾರರನ್ನು ಭೇಟಿ ಮಾಡಲು ಬಂದಾಗ ಅವರಿಗೆ ಅವಕಾಶ ಕಲ್ಪಿಸಲು ಸಹಾಯ ಮಾಡುತ್ತದೆ ಎಂದು ನೀವು 'ಪ್ರೀತಿಯ ಆಲೋಚನೆಗಳು' ನಲ್ಲಿ ಓದಿದ್ದೀರಿ. ಉತ್ತರ ಭಾರತದಲ್ಲಿ ಕ್ಷೇತ್ರಗಳು.

ದೇವರ ದಯೆಯಿಂದ ಉತ್ತರ ಭಾರತದ ನಾಯಕರು ಕ್ಷೇತ್ರಕ್ಕೆ ಭೇಟಿ ನೀಡಿದ್ದು, ಜುಲೈ ಅಂತ್ಯದೊಳಗೆ ಭೂಮಿ ನೋಂದಣಿಯಾಗಲಿದೆ. ಕೂಡಲೇ ನಿವೇಶನ ನಿರ್ಮಾಣ ಕಾಮಗಾರಿ ಆರಂಭಿಸಬೇಕು. ಜಮೀನು,



ಬೋರ್ ವೆಲ್, ವಿದ್ಯುತ್, ಕಾಂಪೌಂಡ್ ಗೋಡೆಗೆ ಮೊದಲ ಹಂತವಾಗಿ ಉತ್ತರ ಭಾರತದ ವಿಶ್ವಾಸಿಗಳು 50 ಲಕ್ಷ ರೂ. 5000 ಚದರ ಅಡಿ ತರಬೇತಿ ಕೇಂದ್ರವನ್ನು ನಿರ್ಮಿಸಲು ತಮಿಳುನಾಡಿನ ಭಕ್ತರಿಂದ 1 ಕೋಟಿ ರೂಪಾಯಿ ದೇಣಿಗೆ ಸಂಗ್ರಹಿಸಲು ನಾವು ಪ್ರಯತ್ನಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಒಂದು ಚದರ ಅಡಿ ನಿರ್ಮಾಣಕ್ಕೆ 2000 ರೂಪಾಯಿ ದೇಣಿಗೆ ನೀಡುವ ಮೂಲಕ 5000 ಭಕ್ತರು ಮುಂದೆ ಬಂದರೆ ನಾವು ಗುರಿಯನ್ನು ತಲುಪಬಹುದು. ಉತ್ತರ ಭಾರತದಲ್ಲಿನ ಸಚಿವಾಲಯಗಳಿಗಾಗಿ ನೀವು ಶ್ರದ್ಧೆಯಿಂದ ಪ್ರಾರ್ಥಿಸುವಾಗ ನೀವು ಖಂಡಿತವಾಗಿಯೂ ಕೆಲಸಕ್ಕೆ ಬೆಂಬಲ ನೀಡುತ್ತೀರಿ ಎಂಬ ನಂಬಿಕೆಯೊಂದಿಗೆ ನಾವು ಮುಂದುವರಿಯುತ್ತಿದ್ದೇವೆ. ಈ ಆರ್ಥಿಕ ವರ್ಷದ ಅಂತ್ಯದೊಳಗೆ ಅದನ್ನು ಲೋಕಾರ್ಪಣೆ ಮಾಡಲು ಯೋಜಿಸುತ್ತಿದ್ದೇವೆ. ಪ್ರಾರ್ಥನೆ ಮತ್ತು ಬೆಂಬಲವನ್ನು ಮುಂದುವರಿಸಿ. ಮುಂಬರುವ ಸಂಚಿಕೆಗಳಲ್ಲಿ ನಾವು ಕೆಲಸದ ಪ್ರಗತಿಯನ್ನು ಹಂಚಿಕೊಳ್ಳಲು ಬಯಸುತ್ತೇವೆ.

ಉತ್ತರ ಭಾರತದಲ್ಲಿನ ಸೇವೆಗಳನ್ನು ಬೆಂಬಲಿಸುವ ಉತ್ತರ ಭಾರತದ ಎಲ್ಲಾ ಭಕ್ತರಿಗೆ ಮತ್ತು ತಮಿಳುನಾಡು ಮತ್ತು ಕೇರಳದ ಭಕ್ತರಿಗೆ ನಾವು ಧನ್ಯವಾದಗಳು. ಉತ್ತರ ಭಾರತ ಸೇವೆಗಳ ನಿರ್ದೇಶಕರಾದ ಘನ ಡಾ.ಆನಂದ್ ಸಿಂಗ್ ಮತ್ತು ಘನ ಡಾ. ಅಲೆಕ್ಸ್ ಮೋರಿಸ್, ವಾಯುವ್ಯ ಸಚಿವಾಲಯಗಳ ಉಸ್ತುವಾರಿ ಘನ. ಅಜಯ್ ವರ್ಮಾ, ಜಮ್ಮು ಕಾಶ್ಮೀರ ರಾಜ್ಯ ಸಂಯೋಜಕ ಘನ. ಫಾ.ಸ್ಟೋನಿಯಸ್, ಹಿಮಾಚಲ ಪ್ರದೇಶ ರಾಜ್ಯ ಸಂಯೋಜಕ ಘನ. ಬಲ್ವಿಂದರ್ ಸಿಂಗ್, ಪಂಜಾಬ್ ರಾಜ್ಯ ಸಂಯೋಜಕ ಘನ. ರಾಕೇಶ್ ಕುಮಾರ್ ಮತ್ತು ಉತ್ತರಾಖಂಡ ರಾಜ್ಯ ಸಂಯೋಜಕ ಘನ. ರಾಜೇಶ್ ಪಾಲ್. ಉತ್ತರ ಭಾರತದ 46,000 ಹಳ್ಳಿಗಳಲ್ಲಿ ಸುವಾರ್ತೆಯನ್ನು ಹಂಚಿಕೊಳ್ಳುವ ಹೆಚ್ಚಿನ ಜವಾಬ್ದಾರಿ ಉತ್ತರ ಭಾರತದ ನಾಯಕರ ಮೇಲಿದೆ. ಆಯಾ ಗ್ರಾಮಗಳಲ್ಲಿ ದೇವರು ಬೆಳೆಸುತ್ತಿರುವ ಮಿಷನರಿಗಳಿಗಾಗಿ ನಾವು ಕರ್ತನನ್ನು ಸ್ತುತಿಸುವವರಾಗಿದ್ದೇವೆ.

ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ, ಆತನಿಗೆ ಸ್ತೋತ್ರ.

**"ಆದದರಿಂದ ನನ್ನ ಪ್ರಿಯ ಸಹೋದರರೇ, ಸ್ಥಿರಚಿತ್ತರಾಗಿಯೂ ನಿಶ್ಚಲರಾಗಿಯೂ ಇರ್ರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ." (1 ಕೊರಿಂಥ15:57-58)**

ಹೈದರಾಬಾದ
12.05.2024

ಇಂತಿ ಕ್ರಿಸ್ತನಲ್ಲಿ ನಿಮ್ಮ, **ಪಿ. ಸೆಲ್ವರಾಜ್**
ಚೇರ್ಮನ್, ವಿಶ್ವವಾಣಿ ನೆಟ್ ವರ್ಕ್

# ಆತನು ಬಡವರನ್ನು ಧೂಳಿನಿಂದ ಎಬ್ಬಿಸುತ್ತಾನೆ



ಮಾನ್ಸಿಂಗ್ ಮುಂಡಾ ಜಾರ್ಖಂಡಿನ ಲುಬುದಿಹ ಹಳ್ಳಿಯವರು. ಅವರು ಪ್ರಕೃತಿಯನ್ನು ಆರಾಧಿಸುತ್ತಿದ್ದರು. ಅವರು ಚಿಕ್ಕವರಿದ್ದಾಗಲೇ ತಂದೆಯನ್ನು ಕಳೆದುಕೊಂಡರು, ಮತ್ತು ಅವರ ಕುಟುಂಬವು ಬಡತನದಲ್ಲಿತ್ತು. ಮಾನ್ಸಿಂಗ್ ಇವರ ತಾಯಿಯು ಅವರನ್ನೊಳಗೊಂಡು 4 ಮಕ್ಕಳನ್ನು ನೋಡಿಕೊಳ್ಳಬೇಕಾಗಿತ್ತು. ಅವರ ಕುಟುಂಬದಲ್ಲಿ ಕಿರಿಯ ಮಗಳು ಮೂಗಳಾಗಿದ್ದಳು.

ಮಾನ್ಸಿಂಗನ ತಾಯಿಗೆ ಮಕ್ಕಳಿಗೆ ಆಹಾರ ಕೊಡುವುದು ಮತ್ತು ಅವರನ್ನು ಶಾಲೆಗೆ ಕಳುಹಿಸುವುದು ಕಷ್ಟಕರವೆಂಬುದನ್ನು ಕಂಡುಕೊಂಡಳು. 2017ರಲ್ಲಿ ಅವಳು ವಿಶ್ವವಾಣಿಯ ಸೇವಕರ ಮೂಲಕ ನವಟೋಲಿಯಲ್ಲಿರುವ ವಿಶ್ವವಾಣಿ ಮಕ್ಕಳ ಪಾಲನಾ ಕೇಂದ್ರದ ಕುರಿತು ಕೇಳಿದಳು ಮತ್ತು ಮಾನ್ಸಿಂಗ್ನನ್ನು ಮಕ್ಕಳ ಪಾಲನಾ ಕೇಂದ್ರಕ್ಕೆ ಕಳುಹಿಸಿದಳು.

ಮಾನ್ಸಿಂಗ್ ಪ್ರಕೃತಿಯನ್ನು ಸೃಷ್ಟಿಸಿದ ಸೃಷ್ಟಿಕರ್ತನ ಕುರಿತು ಕೇಳಿದನು ಮತ್ತು ಆತನನ್ನು ನಂಬಲು ಪ್ರಾರಂಭಿಸಿದನು. ಅವನು ಸತ್ಯವೇದದ ಕಥೆಗಳನ್ನು ಕೇಳಿದ ಮೇಲೆ – ಮಕ್ಕಳ ಆರೈಕೆ ಕೇಂದ್ರದಲ್ಲಿನ ಶಿಸ್ತು, ಪ್ರಾರ್ಥನೆಯ ಸಮಯ, ಆರಾಧನಾ ಸಮಯ, ಆಟದ ಸಮಯ ಮತ್ತು ಆರೋಗ್ಯಕರ ಪೌಷ್ಠಿಕಾಂಶದ ಆಹಾರದೊಂದಿಗೆ ತೀವ್ರವಾಗಿ ಅಧ್ಯಯನ ಮಾಡಲು ವಿಶ್ವವಾಣಿ ಸೇವಕರ ಸಹಾಯದ ಮೂಲಕ ದೈಹಿಕವಾಗಿ ಮತ್ತು ಆತ್ಮೀಕವಾಗಿ ಬೆಳೆಯಲು ಸಾಧ್ಯವಾಯಿತು. ಮಾನ್ಸಿಂಗ್ ಯೇಸುವನ್ನು ತನ್ನ ಸ್ವಂತ ರಕ್ಷಕನೆಂದು ಒಪ್ಪಿಕೊಂಡನು ಮತ್ತು 24.04.2024 ರಂದು ತನ್ನ ನಂಬಿಕೆಯನ್ನು ಅರಿಕೆ ಮಾಡಿದನು. 10ನೆಯ ವರ್ಗದ ಪರೀಕ್ಷೆಯಲ್ಲಿ ಶೇಕಡಾ 81 ಅಂಕ ಪಡೆದು ಶಾಲೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡನು. ಅವನು ತನ್ನ ಕುಟುಂಬದವರು ಸಹ ಯೇಸುವನ್ನು ಸ್ವೀಕರಿಸಬೇಕು ಎಂದು ತನ್ನ ಪ್ರಾರ್ಥನೆಯಲ್ಲಿ ತನ್ನ ಕುಟುಂಬವನ್ನು ನಿರಂತರವಾಗಿ ನೆನಪಿಸಿಕೊಳ್ಳುತ್ತಾನೆ.

ಈ ಚಿಕ್ಕ ಹುಡುಗನ ಪರಿವರ್ತನೆಯು ಈಡೀ ಕುಟುಂಬದ ಪರಿವರ್ತನೆಗೆ ದಾರಿ ಮಾಡುತ್ತಿದೆ. ಯೇಸುವನ್ನು ತಿಳಿಯದಿರುವ ಈ ಬಡ ಚಿಕ್ಕ ಮಕ್ಕಳಿಗೆ ಆತನ ಕುರಿತು ಹೆಚ್ಚು ತಿಳಿದುಕೊಳ್ಳಲು ಅವಕಾಶ ಮಾಡಿಕೊಡುತ್ತಿರುವ ಈ ಮಕ್ಕಳ ಆರೈಕೆ ಕೇಂದ್ರಗಳಿಗಾಗಿ ನಾವು ಕರ್ತನಿಗೆ ಧನ್ಯವಾದವನ್ನು ಹೇಳುತ್ತೇವೆ.

ಮಕ್ಕಳನ್ನು ಬೆಂಬಲಿಸುವುದಕ್ಕಾಗಿ ಪ್ರತಿ ತಿಂಗಳು ದೇಣಿಗೆ ಕೊಡುತ್ತಿರುವ ಎಲ್ಲಾ ಕುಟುಂಬಗಳನ್ನು ನಾವು ಅಭಿನಂದಿಸುತ್ತೇವೆ. ನಿಮ್ಮ ಒಳ್ಳೆಯ ಕೆಲಸಗಳಿಂದ ಸಮಾಜ ಪರಿವರ್ತನೆಯಾಗುತ್ತದೆ. ದೇವರು ಇದನ್ನು ನಿಮ್ಮ ಲೆಕ್ಕದಲ್ಲಿ ಇಡುತ್ತಾನೆ ಮತ್ತು ನಿಮ್ಮನ್ನು ಅಧಿಕಾಧಿಕವಾಗಿ ಆಶೀರ್ವದಿಸುತ್ತಾನೆ.

**ಗ್ಲಾಡ್ವೈನ್ ಗೋಲ್ಡಾ ಅಜಿತ್.**

# ಕರ್ನಾಟಕ ರಾಜ್ಯ ಸಂಯೋಜಕರಿಂದ

ಜೀವಿತರಿಗೂ ಸತ್ತವರಿಗೂ ನ್ಯಾಯಾಧಿಪತಿಯಾಗಿರುವ ಏಕ ದೇವರಿಗೆ ಸ್ತೋತ್ರ ಕೊಂಡಾಟಗಳನ್ನು ಸಲ್ಲಿಸುತ್ತಾ, ಯೇಸು ಕ್ರಿಸ್ತನು ಎಲ್ಲರ ಕರ್ತನು ಎಂಬ ಶಿರೋನಾಮೆಯೊಂದಿಗೆ ಪ್ರಕಟಗೊಂಡ ಜೂನ್ ತಿಂಗಳ ಸಮರ್ಪಣ್ ಮಾಸ ಪತ್ರಿಕೆಯ ಮೂಲಕ ನಿಮ್ಮ ಕುಟುಂಬಗಳನ್ನು ಸಂಧಿಸಲು ತುಂಬಾ ಸಂತೋಷವುಳ್ಳವರಾಗಿದ್ದೇವೆ.

ಪ್ರಿಯರೇ, ಯೇಸು ಕ್ರಿಸ್ತನು ಎಲ್ಲರಲ್ಲಿ ಒಬ್ಬ ದೇವರಲ್ಲ ಆತನೊಬ್ಬನೇ ಎಲ್ಲರಿಗೂ ಕರ್ತನಾಗಿದ್ದಾನೆ. ಯಾಕಂದರೆ ಆತನು ಸ್ವತಃ ದೇವರಾಗಿದ್ದರೂ ಮಾನವ ರೂಪವನ್ನು ತಾಳಿದವನು, ಈ ಲೋಕದಲ್ಲಿ ಅನೇಕ ಮಾನವರು ದೇವರಾಗುವ, ದೇವರೆಂದು ಕರೆಸಿಕೊಳ್ಳುವುದಕ್ಕೆ ಪ್ರಯತ್ನಿಸುವವರಾಗಿದ್ದಾರೆ. ಕೆಲವರನ್ನು ಜನರು ನಡೆದಾಡುವ ದೇವರುಗಳೆಂದು ಭೂಲೋಕದ ಮಾನವರಿಗೆ ಕರೆದಿರುವರು. ಆದರೆ ಯೇಸು ಕ್ರಿಸ್ತನು ಸ್ವತಃ ದೇವರಾಗಿದ್ದನು. ತನ್ನನ್ನು ತಗ್ಗಿಸಿಕೊಂಡು ಈ ಭೂಮಿಗೆ ಮನುಷ್ಯನಾಗಿ ಬಂದನು. ಫಿಲಿಪ್ಪಿ 2:5–12. ಆದುದರಿಂದಲೇ ಆತನಿಗೆ ಎಲ್ಲಾ ಹೆಸರುಗಳಿಗಿಂತಲೂ ಮೇಲಾದ ಹೆಸರನ್ನು ನೀಡಲಾಗಿದೆ.

ಇನ್ನು ಯೇಸು ಕ್ರಿಸ್ತನು ಯಾಕೆ ಎಲ್ಲರ ಕರ್ತನೆಂದರೆ ಇಡೀ ಮಾನವರನ್ನು ಅವರ ಪಾಪಗಳಿಂಗ ಬಿಡಿಸಲು ಆತನೊಬ್ಬನೇ ತನ್ನ ರಕ್ತವನ್ನು ಕಲ್ವಾರಿಯ ಶಿಲುಬೆಯಲ್ಲಿ ಸುರಿಸಿದವನಾಗಿದ್ದಾನೆ. ಕೊಲೊಸ್ಸೆ 1:7, ಆತನು ನಮ್ಮೆಲ್ಲರಿಗಾಗಿ ಸುರಿಸಿದ ರಕ್ತದ ಮೂಲಕ ನಾವೆಲ್ಲರೂ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯುಂಟಾಯಿತು. ಕೊಲೊಸ್ಸೆ 1:13–19, ವ. 14 ರಲ್ಲಿ ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು, ಆದುದರಿಂದಲೇ ಆಕಾಶದ ಕೆಳಗೆ ಕೊಡಲ್ಪಟ್ಟಿರುವ ಯೇಸುವಿನ ಹೊರತು ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ. ಅದಕ್ಕಾಗಿ ಈ ಹೆಸರನ್ನು ನಾವು ಎಲ್ಲಾ ಜನರಿಗೆ ಸಾರಿ ಹೇಳಬೇಕಾಗಿದೆ.

ಇನ್ನು ಕೊನೆಯದಾಗಿ ಯಾರಿಗೆ ಯೇಸು ಕರ್ತನಾಗಿದ್ದಾನೆ, ಎಂದರೆ ಯಾರೆಲ್ಲಾ ಯೇಸು ಕ್ರಿಸ್ತನು ನಿಜವಾದ ದೇವರೆಂದು, ನನ್ನ ಪಾಪಕ್ಕಾಗಿ ಶಿಲುಬೆಯಲ್ಲಿ ಪ್ರಾಣಕೊಟ್ಟವನೆಂದು ಒಪ್ಪಿಕೊಂಡು ಯೇಸು ಕ್ರಿಸ್ತನಲ್ಲಿ ನಂಬಿಕೆ ಇಟ್ಟಿದ್ದಾರೋ ಅವರೆಲ್ಲರಿಗೂ ಆತನು ಕರ್ತನಾಗಿದ್ದಾನೆ. ಹಳೆಯ ಒಡಂಬಡಿಕೆಯಲ್ಲಿ ಕರ್ತನನ್ನು ಸೂಚಿಸುವುದಕ್ಕೆ ಯೆಹೋವನು ಎಂಬ ಪದವನ್ನು ಉಪಯೋಗಿಸಲಾಗಿದೆ. ಕರ್ತನು ಹಾಗೂ ದೇವರೂ ಎಂಬ ಪದಗಳು ಒಂದೇ ಆಗಿರುವವು. ಸಾಮಾನ್ಯವಾಗಿ ಕರ್ತನು ಎಂಬ ಪದವು ಬಲ ಮತ್ತು ಅಧಿಕಾರವನ್ನು ಹೊಂದಿರುವದೆಂದು ತಿಳಿಸುವಂತದ್ದಾಗಿದೆ, ಇನ್ನು ಗಂಡನಿಗೂ ಕರ್ತನು ಎಂಬ ಪದವನ್ನು ಉಪಯೋಗಿಸಲಾಗುತ್ತದೆ.

ಪ್ರಿಯರೆ ಯೇಸು ಕ್ರಿಸ್ತನು ಆ ಬಲವನ್ನು, ಅಧಿಕಾರವನ್ನು ಹೊಂದಿದ್ದಾನೆ, ಯಾರು ಯೇಸುವನ್ನು ಕರ್ತನೆಂದು ಒಪ್ಪಿಕೊಳ್ಳುವರೋ ಆತನು ಅವರ ಜೀವಿತಗಳನ್ನು ತನ್ನ ಅಧೀನತೆಯಲ್ಲಿಟ್ಟುಕೊಂಡು ಕಾಪಾಡುವವನಾಗಿದ್ದಾನೆ. ಇದನ್ನು ನಾವು ಮತ್ತಾಯ 16:14–16 ರಲ್ಲಿ ಯೇಸು ಕ್ರಿಸ್ತನು ಕೈಸರೆಯ ಪಟ್ಟಣದಲ್ಲಿ ಪೇತ್ರನಿಗೆ ಜನರು ನನ್ನನ್ನು ಯಾರೆನ್ನುತ್ತಾರೆಂದು ಕೇಳಿದಾಗ, ಪೇತ್ರನ ಉತ್ತರವು, ನೇರವಾಗಿರಲಿಲ್ಲ. ಅದಕ್ಕಾಗಿ ಯೇಸುವು ಪೇತ್ರನ ಅಭಿಪ್ರಾಯಕ್ಕಾಗಿ ಎದುರು ನೋಡುವಂತನಾಗಿದ್ದನು. ಆಗ ಪೇತ್ರನು ಯೇಸುವಿಗೆ ಬರಬೇಕಾಗಿರುವ ಕ್ರಿಸ್ತನು ಎಂದು ಅರಿಕೆಮಾಡಿಕೊಂಡನು. ಅಂದರೆ ಯೆಹೂದ್ಯರು ಯಾವ ಮೆಸ್ಸೀಯನನ್ನು ಕರ್ತನನ್ನು ಎದುರುನೋಡುತ್ತಿದ್ದರೋ ಆ ವ್ಯಕ್ತಿಯೇ ನೀನು ಎಂದು ಒಪ್ಪಿಕೊಂಡನು. ಅದಕ್ಕಾಗಿ ಯೇಸು ಅವನ ಉತ್ತರಕ್ಕಾಗಿ ಪ್ರಶಂಸಿಸಿದನು.

ಯಾವ ರೀತಿ ಒಬ್ಬ ಸ್ತ್ರೀಯು ಮದುವೆಯಾದ ನಂತರ ಸಾಯುವತನಕ ಗಂಡನಿಗೆ ಬದ್ಧಳಾಗಿರುತ್ತಾಳೋ ಅದೇ ರೀತಿ ನಾವು ಯೇಸುವನ್ನು ಕರ್ತನೆಂದು ಒಪ್ಪಿಕೊಳ್ಳುವುದಾದರೆ ನಮ್ಮ ಜೀವಿತದ ಕೊನೆಯ ಉಸಿರಿರುವ ತನಕ ಆತನಿಗಾಗಿ ಜೀವಿಸಬೇಕು. ಅದನ್ನು ಯೇಸು ಪೇತ್ರನಿಂದ ಎದುರು ನೋಡಿದ ಉತ್ತರವಾಗಿತ್ತು.

ಪ್ರಿಯರೇ, ಈ ಸತ್ಯವನ್ನು ಭೂಲೋಕದಲ್ಲಿರುವ ಎಲ್ಲಾ ಜನರು ತಿಳಿಯಬೇಕೆಂದು ದೇವರು ಬಯಸುವವನಾಗಿದ್ದಾನೆ. ಈ ಸತ್ಯವನ್ನು ಸಾರುವುದಕ್ಕಾಗಿಯೇ ವಿಶ್ವವಾಣಿ ಸೇವಕರಾದ ನಾವು ತ್ವರಿತವಾಗಿ ಗ್ರಾಮ ಗ್ರಾಮಗಳಿಗೆ ಸಾರುತ್ತಿರುವೆವು. ನೀವು ನಮ್ಮೊಂದಿಗೆ ಕೈಜೋಡಿಸುವುದಾದರೆ ಭಾರತ ದೇಶದಲ್ಲಿರುವ ಗ್ರಾಮಗಳು ಯೇಸು ಎಂಬ ಹೆಸರಿನಲ್ಲಿ ಆಶೀರ್ವದಿಸಲ್ಪಡುವಂತವುಗಳಾಗಿವೆ.

## ಸೇವಾ ವರದಿಗಳು ಮತ್ತು ಸೇವಾ ಪ್ರಯಾಣಗಳು



ದಿನಾಂಕ 23.4.2024 ರಂದು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ತೊರೆಬೀರನಹಳ್ಳಿ ಎಂಬ ಗ್ರಾಮದಲ್ಲಿ 4 ಜನ ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆ ಮಾಡಿಕೊಂಡಿರುವರು. ಇವರ ಆತ್ಮೀಕ ಜೀವಿತಕ್ಕಾಗಿ ಕ್ರಿಸ್ತನಿಗಾಗಿ ದೃಢವಾಗಿ ನಿಂತು ಅನೇಕರಿಗೆ ಸಾಕ್ಷಿಗಳಾಗಿ ಜೀವಿಸುವಂತೆ ಪ್ರಾರ್ಥಿಸಿರಿ.





ದಿನಾಂಕ 12, 13, 14 ಏಪ್ರಿಲ್ 2024 ರಂದು ರಾಣೆಬೆನ್ನೂರಿನ ಸಿ.ಎಸ್.ಐ. ಒಳ್ಳೆ ಕುರುಬ ದೇವಾಲಯದಲ್ಲಿ 101ನೇ ಸಭೆಯ ವಾರ್ಷಿಕೋತ್ಸವದ ಅಂಗವಾಗಿ 3 ದಿನಗಳ ಭಕ್ತಿಸಂಜೀವನ ಕೂಟವನ್ನು ಏರ್ಪಡಿಸಲಾಗಿತ್ತು. ಈ ಕೂಟಗಳಲ್ಲಿ ದೈವ ಸಂದೇಶವನ್ನು ಹಂಚಿಕೊಳ್ಳಲು ನನ್ನನ್ನು ಮತ್ತು ಜೊತೆ ಸೇವಕರಾದ ಘನ. ಜೋಸೆಫ್ ರವಿಕುಮಾರ ಅವರನ್ನು ಆಮಂತ್ರಿಸಲಾಗಿತ್ತು. ಈ ಮೂರು ದಿನಗಳೂ ಸಭೆಗೆ ತುಂಬಾ ಆಶೀರ್ವಾದಕರವಾಗಿ ಕರ್ತನು ನಮ್ಮನ್ನು ಉಪಯೋಗಿಸಿಕೊಂಡನು ಮತ್ತು ವಿಶ್ವವಾಣಿ ಸೇವೆಯ ಕುರಿತು ಹಂಚಿಕೊಳ್ಳಲು ಕರ್ತನು ಸಹಾಯ ಮಾಡಿದನು. ಈ ರೀತಿ ನಮ್ಮನ್ನು ಸೇವೆಯಲ್ಲಿ ಉಪಯೋಗಿಸಿಕೊಂಡು ಅವಕಾಶ ಮಾಡಿಕೊಟ್ಟ ಘನ. ವಿಜಯರಾಜ್ ಜೆಡೆಗಲ್ಲ ಅಯ್ಯನವರಿಗೂ ಸಭಾಪಾಲನ ಸಮಿತಿಯವರಿಗೂ ಸಭೆಯ ಎಲ್ಲಾ ಸದಸ್ಯರಿಗೂ ತುಂಬು ಹೃದಯದ ವಂದನೆಗಳನ್ನು ತಿಳಿಸುವವನಾಗಿದ್ದೇನೆ.

## ವಿಶೇಷ ದೀನತೆಯ ಮನವಿ

ಕರ್ತನಲ್ಲಿ ಪ್ರೀತಿಯುಳ್ಳ ಸೇವಾ ಸಹಭಾಗಿಗಳೇ ಕರ್ತನ ಕೃಪೆಯಿಂದ ಅನೇಕ ವಿಶ್ವಾಸಿಗಳ ಸಹಾಯ ಸಹಕಾರದಿಂದ ಬೆಂಗಳೂರು ರಾಜ್ಯ ಕಾರ್ಯಾಲಯದ ಕಟ್ಟಡದ ಮೊದಲ ಕೆಳ ಮಹಡಿಯ ಮೇಲ್ಛಾವಣಿಯ ಕೆಲಸವು ಮುಕ್ತಾಯಗೊಂಡಿರುವದು. ಮುಂದಿನ ಕಟ್ಟಡದ ಕೆಲಸಕ್ಕಾಗಿ ಅನುದಿನವೂ ನಿಮ್ಮ ಪ್ರಾರ್ಥನೆಯಲ್ಲಿ ನೆನಪಿಸಿಕೊಳ್ಳಿರಿ. ಈ ಕಟ್ಟಡ ಕೆಲಸವು ಪೂರ್ಣಗೊಳ್ಳಲು ನಮಗೆ ಹೆಚ್ಚು ಕಡಿಮೆ





ಇನ್ನು 1 ಕೋಟಿ ಹಣದ ಅವಶ್ಯವಿರುವುದು. ಆದುದರಿಂದ ನಾವು ಪ್ರಾರ್ಥನಾ ಪೂರ್ವಕವಾಗಿ 1 ಲಕ್ಷ ದೇಣಿಗೆ ನೀಡುವ 100 ಜನರನ್ನು ಅಥವಾ 100 ಕುಟುಂಬಗಳನ್ನು ಎದುರುನೋಡುವವರಾಗಿದ್ದೇವೆ. ಕರ್ತನು ನಿಮ್ಮನ್ನು ಪ್ರೇರೇಪಿಸುವುದಾದರೆ ದಯಮಾಡಿ ನಿಮ್ಮ ಸಹಾಯದ ಹಸ್ತಗಳನ್ನು ಈ ಕಾರ್ಯಕ್ಕಾಗಿ ಮುಂದೆ ಚಾಚಿರಿ. ನೆಹೆ. 2:18. ಇದಲ್ಲದೆ ನಿನ್ನ ದೇವರ ಕೃಪಾಹಸ್ತವು ನನ್ನನ್ನು ಪಾಲಿಸಿದ್ದನ್ನು ಅರಸನು ನನಗೆ ಹೇಳಿದ್ದನ್ನು ಅವರಿಗೆ ವಿವರಿಸಿದೆನು. ಆಗ ಅವರು ಬನ್ನಿರಿ ಕಟ್ಟೋಣ ಎಂದು ಹೇಳಿ ಆ ಒಳ್ಳೇ ಕೆಲಸಕ್ಕೆ ಕೈ ಹಾಕಲು ಧೈರ್ಯಗೊಂಡರು.

ಇಂತಿ ನಿಮ್ಮ ಸಹೋದರ

**ಘನ. ಎಂ. ಭದ್ರಿನಾಥ**

ಕರ್ನಾಟಕ ರಾಜ್ಯ ಸಂಯೋಜಕರು

# ಅವಶ್ಯಕತೆಯು ಕರೆಯುತ್ತಿರುವದು

ಆತ್ಮಗಳ ಆದಾಯದ ಸೇವೆಯಲ್ಲಿ ಹಗಲೂ ರಾತ್ರಿ ಸೇವಾ ಕ್ಷೇತ್ರಗಳಲ್ಲಿ ಫಲವನ್ನು ಪಡೆಯುವದಕ್ಕಾಗಿ ಅಭಿವೃದ್ಧಿ ಸೇವಕರಿಗೆ ತಮ್ಮ ಕೆಲಸವನ್ನು ತೀವ್ರಗೊಳಿಸಲು ಅನೇಕ ಅವಶ್ಯಕತೆಗಳು ಅವಶ್ಯವಾಗಿರುವವು. ಕೆಳಗಿನ ಪಟ್ಟಿಯು ಮಹತ್ವದ ಅವಶ್ಯಕತೆಗಳ ಬಗ್ಗೆ ತಿಳಿಸುವದು. ಪ್ರಾರ್ಥನಾ ಪೂರ್ವಕವಾಗಿ ಅವಶ್ಯಕತೆಗಳ ಬಗ್ಗೆ ಓದಿರಿ ಪಾಲುಗಾರರಾಗಿರಿ ಹಾಗೂ ಆಶೀರ್ವದಿಸಲ್ಪಡಿರಿ.

ರೂ. 500x5000 ಕೊಕ್‌ಬೊರೊಕ್ ಸತ್ಯವೇದಗಳು – ರೂ. 25,00,000/– ಅವಶ್ಯವಿದೆ.

ರೂ. 6,000x225 ಸೈಕಲ್‌ಗಳಿಗೆ – ರೂ. 6,60,000/– ಅವಶ್ಯವಿದೆ.

ರೂ. 1000x660 ಸಂಗೀತ ಉಪಕರಣಗಳು – ರೂ. 6,60,000/– ಅವಶ್ಯವಿದೆ.

ರೂ. 500x1300 ಜಮುಖಾನೆಳು / ಹಾಸುಗಳು – ರೂ. 6,50,000/– ಅವಶ್ಯವಿದೆ.

ರೂ. 200x600 ಕೈದೀಪಗಳು – ರೂ. 1,20,000/– ಅವಶ್ಯವಿದೆ.

ರೂ. 75,000x50 ದ್ವಿಚಕ್ರವಾಹನಗಳು – ರೂ. 37,50,000/– ಅವಶ್ಯವಿದೆ.

ರೂ. 20,000x200 ಧ್ವನಿವರ್ಧಕ ಉಪಕರಣ – ರೂ. 50,00,000/– ಅವಶ್ಯವಿದೆ. ■



# ಕ್ಷೇತ್ರ ಸಮಾಚಾರ

## ಸ್ತುತಿಸಿರಿ – ಪ್ರಾರ್ಥನಸಿರಿ

**"ಯೆಹೋವನು ತನ್ನ ಪ್ರಜೆಗೆ ಪ್ರಸನ್ನನಾದನು, ದೀನರನ್ನು ರಕ್ಷಣೆಯಿಂದ ಭೂಷಿಸುತ್ತಾನೆ." ಕೀರ್ತನೆ 149:4**

## 01. ಬಿಹಾರ

**ಸ್ತುತಿಸಿರಿ:** ಸರಾನ್ ಜಿಲ್ಲೆಯಲ್ಲಿ ಸೇವೆಗಾಗಿ ಗುರುತಿಸಲಾದ 15 ಗ್ರಾಮಗಳಿಗಾಗಿ ದೇವರಿಗೆ ಸ್ತೋತ್ರಗಳು. 208 ಸ್ಥಳಗಳಲ್ಲಿ ನಡೆದ ಅನ್ವೇಷಕರ ಕೂಟಗಳ ಮೂಲಕ 1873 ಜನರಿಗೆ ದೇವರ ಪ್ರೀತಿಯನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ದೇವರಿಗೆ ಮಹಿಮೆ ಉಂಟಾಗಲಿ. 15 ಕ್ಷೇತ್ರಗಳಲ್ಲಿ ನಡೆದ ದೆಬೋರಾ ಶಿಬಿರಗಳ ಮೂಲಕ ದೇವರ ವಾಕ್ಯದಲ್ಲಿ ಬಲಗೊಂಡ 375 ಮಹಿಳೆಯರಿಗಾಗಿ ದೇವರಿಗೆ ಸ್ತೋತ್ರ. ಕ್ರಿಸ್ತನಲ್ಲಿನ ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡ 5 ಜನರಿಗಾಗಿ ದೇವರಿಗೆ ಮಹಿಮೆ.

**ಪ್ರಾರ್ಥನಸಿರಿ:** ಕ್ರಿಸ್ತನಲ್ಲಿ ತಮ್ಮ ನೂತನ ಜೀವಿತವನ್ನು ಪ್ರಾರಂಭಿಸಿದ 305 ಜನರಿಗಾಗಿ ಪ್ರಾರ್ಥನಸಿರಿ. ಹೊಸ ವಿಶ್ವಾಸಿಯಾಗಿರುವ ಅಲೋಕ್ ಕುಮಾರ್ ಮತ್ತು ಅವರ ಕುಟುಂಬದ ಸಾಕ್ಷಿಗಳ ಮೂಲಕ ಹೊಸ ಸಂಪರ್ಕಗಳನ್ನು ಪಡೆಯಲು ಪ್ರಾರ್ಥನಸಿರಿ. ಪಟ್ನಾದಲ್ಲಿ ಕಾರ್ಯನಿರ್ವಹಿಸುವ ವೆಬ್ ಸೆಂಟರ್ ಗೆ ಕಂಪ್ಯೂಟರ್ ಮತ್ತು ಪ್ರಿಂಟರ್ ಅವಶ್ಯವಿರುವದು. ಸುವಾರ್ತೆಗೆ ಬಾಗಿಲು ತೆರೆದಿರುವ 40 ಹಳ್ಳಿಗಳಿಗೆ ಮಿಷಿನರಿಗಳನ್ನು ಕಳುಹಿಸಲು ಪ್ರಾರ್ಥನಸಿರಿ.

## 02. ಜಾರ್ಖಂಡ್

**ಸ್ತುತಿಸಿರಿ:** ಜನುಂಪಿರಿ, ಮಾಮರ್ಲ, ಗುಟುತೋಳ ಗ್ರಾಮಗಳಲ್ಲಿ ಆರಂಭವಾದ ಆರಾಧನಾ ಗುಂಪುಗಳಿಗಾಗಿ ದೇವರಿಗೆ ಸ್ತೋತ್ರ. ದೆಬೋರಾ ಶಿಬಿರದ ಮೂಲಕ ದೇವರ ವಾಕ್ಯದಲ್ಲಿ ಸ್ಥಾಪಿಸಲ್ಪಟ್ಟ ಬುಡು ಗ್ರಾಮದ ಮಹಿಳೆಯರಿಗಾಗಿ ದೇವರಿಗೆ ಮಹಿಮೆ. ಪೊಯ್ರಾದಲ್ಲಿ ಮೊದಲ ಬಾರಿಗೆ ದೇವರ ವಾಕ್ಯವನ್ನು ಕೇಳಿದ 16 ಜನರಿಗಾಗಿ ದೇವರಿಗೆ ಸ್ತೋತ್ರ. ಒಮ್ಮೆ ಸೇವೆಯನ್ನು ವಿರೋಧಿಸುತ್ತಿದ್ದ ಚಕ್ಲಾದ ಮಂಕು ಒರಾನ್ ದೇವರ ವಾಕ್ಯದ ಮೂಲಕ ರೂಪಾಂತರಗೊಳ್ಳುತ್ತಿರುವುದಕ್ಕಾಗಿ ದೇವರಿಗೆ ಮಹಿಮೆ. ಕರ್ತನಿಗೆ ಸ್ತೋತ್ರ.

**ಪ್ರಾರ್ಥನಸಿರಿ:** ಅಪಘಾತದಿಂದ ಕಾಲು ಮುರಿದುಕೊಂಡಿರುವ ಲಾಲದೇವ್ ಮತ್ತು ಅಯೂಬ್ ಮಾಂಝಿ ಅವರ ಆರೋಗ್ಯಕ್ಕಾಗಿ ಪ್ರಾರ್ಥನಸಿರಿ. ಗಾರ ಗ್ರಾಮದಲ್ಲಿ ಸೇವೆಯನ್ನು ವಿರೋಧಿಸುತ್ತಿರು ಭೋರೋ

ಒರಾವ್ರೋನ ಅವರ ರಕ್ಷಣೆಗಾಗಿ ಪ್ರಾರ್ಥಿಸಿರಿ. ಕಳೆದ 12 ವರ್ಷಗಳಿಂದ ಮಗುವಿಗಾಗಿ ಪ್ರಾರ್ಥಿಸುತ್ತಿರುವ ಫುಲ್ಪಟ್ಟಿ ದೇವಿ ಮತ್ತು ಅವರ ಕುಟುಂಬಕ್ಕಾಗಿ ಪ್ರಾರ್ಥಿಸಿರಿ. ಭವೋ ಕ್ಷೇತ್ರದಲ್ಲಿ ನಡೆದ ಒರಾವ್ರೋನ ಮೇಳದ ಅನುಸರಣಾ ಸೇವೆಗಾಗಿ ಪ್ರಾರ್ಥಿಸಿರಿ.

## 03. ಪಶ್ಚಿಮ ಬಂಗಾಳ – ಕೂಚ್ ಬೆಹಾರ ಜಿಲ್ಲೆ

**ಸ್ತುತಿಸಿರಿ:** ಮೈನಾಬರಿಯಲ್ಲಿ ವಿತರಿಸಲಾದ ಸುವಾರ್ತೆ ಕರಪತ್ರಗಳ ಮೂಲಕ 70 ಹೊಸ ಸಂಪರ್ಕಗಳಿಗಾಗಿ ದೇವರಿಗೆ ಸ್ತೋತ್ರಗಳು. ಸುವಾರ್ತೆಯನ್ನು ಕೇಳಲು ಭೀಮ್ ಛೇತ್ರಿ ಮತ್ತು ಪಬಿತ್ರಾ ದೇಬ್ಸಿಂಗ್ ಅವರ ಹೃದಯದಲ್ಲಿ ಹೆಚ್ಚುತ್ತಿರುವ ಆಸಕ್ತಿಗಾಗಿ ದೇವರಿಗೆ ಮಹಿಮೆಯಾಗಲಿ. ಸಿಂಗಿಮರಿ ವಿಶ್ವಾಸಿಗಳ ಅನ್ಯೋನ್ಯತೆಗೆ ಸೇರ್ಪಡೆಗೊಂಡ 7 ಹೊಸ ಕುಟುಂಬಗಳಿಗಾಗಿ ದೇವರಿಗೆ ಸ್ತೋತ್ರ. ಹೊಸ ಕ್ಷೇತ್ರದವರಾಗಿರುವ ಗುಮಾನಿಯಲ್ಲಿ ಸಮಾಧಾನದ ಪಾತ್ರೆಯಾಗಿರುವ ಮೊಮೊಟಾ ಬರ್ಮನ್ ಮತ್ತು ಅವರ ಕುಟುಂಬಕ್ಕಾಗಿ ದೇವರಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ಧರಿಯಾ ಗ್ರಾಮದಲ್ಲಿ ಪ್ರಪ್ರಥಮ ಬಾರಿಗೆ ಸುವಾರ್ತೆಯನ್ನು ಕೇಳಿದ 26 ಜನರು ಕ್ರಿಸ್ತನಲ್ಲಿ ಹೊಸ ಸೃಷ್ಟಿಗಳಾಗಲು ಪ್ರಾರ್ಥಿಸಿರಿ. ದಿಪುಲಿನ್ ನಲ್ಲಿರುವ ವಿಶ್ವಾಸಿಗಳ ಆತ್ಮೀಕ ಬೆಳವಣಿಗೆಗಾಗಿ ಪ್ರಾರ್ಥಿಸಿರಿ. ಕ್ಷಯರೋಗದಿಂದ ಬಳಲುತ್ತಿರುವ ಅಂಟೋನಿ ಟೋಪ್ನೊ ಅವರ ಸ್ವಸ್ಥತೆಗಾಗಿ ಪ್ರಾರ್ಥಿಸಿರಿ. ಅನೇಕ ಜನರನ್ನು ಕ್ರಿಸ್ತನ ಬಳಿಕೆ ತರಲು ಚಿರೋಲಿನ್ ನಲ್ಲಿ ಮುಂದುವರಿಯುವ ಸುವಾರ್ತೆ ಕೂಟಗಳಿಗಾಗಿ ಪ್ರಾರ್ಥಿಸಿರಿ.

## 04. ಪಶ್ಚಿಮ ಬಂಗಾಳ – ಡಾರ್ಜಿಲಿಂಗ್ ಜಿಲ್ಲೆ

**ಸ್ತುತಿಸಿರಿ:** ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡಿದ 18 ಜನರಿಗಾಗಿ ದೇವರಿಗೆ ಸ್ತೋತ್ರ. ಸುವಾರ್ತೆ ಕೂಟಗಳಿಗಾಗಿ ತನ್ನ ಮನೆಯನ್ನು ತೆರೆದಿರುವ ವಿಶ್ವಾಸಿಯಾಗಿರುವ ಸಾಹಿಲ್ ಲೋಹರ್ ಅವರಿಗಾಗಿ ದೇವರಿಗೆ ಮಹಿಮೆ. ಅನ್ವೇಷಕರ ಕೂಟಗಳ ಮೂಲಕ ಕ್ರಿಸ್ತನನ್ನು ತಿಳಿದುಕೊಂಡ 130 ಜನರಿಗಾಗಿ ದೇವರಿಗೆ ಸ್ತೋತ್ರ. ಪಶ್ಚಾತ್ತಾಪ ಪಟ್ಟಿರುವ ಯುವಕ ಅಮರ್ ರೈಗಾಗಿ ದೇವರಿಗೆ ಮಹಿಮೆ. ಈಗ ಅವರ ಕುಟುಂಬವು ಶಾಂತಿಯಿಂದಿದೆ. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಮಾದಕ ವ್ಯಸನಿಗಳಾಗಿರುವ ನಿಂಬೋತ್ತರಿ ಭಾಗದ ಜನರ ಬಿಡುಗಡೆಗಾಗಿ ಪ್ರಾರ್ಥಿಸಿರಿ. ಶನ್ಯಾಸಿ ಗ್ರಾಮದಲ್ಲಿ ಸುವಾರ್ತೆಗಾಗಿ ದೇವರು ಬಾಗಿಲನ್ನು ತೆರೆಯಲೆಂದು ಪ್ರಾರ್ಥಿಸಿರಿ. ಮಕ್ಕಳ ಸೇವೆ ನಡೆಯುತ್ತಿರು ರತನ್ ಲಾಲಪಲ್ಲಿಯಲ್ಲಿ ಸುವಾರ್ತೆ ಕಾರ್ಯವು ಸ್ಥಾಪನೆಯಾಗಲಿ ಎಂದು ಪ್ರಾರ್ಥಿಸಿರಿ. ಸೇವಾ ಕ್ಷೇತ್ರಗಳಲ್ಲಿ ನಡೆದ ಎಜ್ರಾ ಶಿಬಿರಗಳ ಮೂಲಕ ಆಯ್ಕೆಯಾಗಲಿಕ್ಕಿರುವ 15 ಹೊಸ ಮಿಷನರಿಗಳಿಗಾಗಿ ಪ್ರಾರ್ಥಿಸಿರಿ.

## 05. ಪಶ್ಚಿಮ ಬಂಗಾಳ – ಕೊಲ್ಕೊತ್ತಾ ಪ್ರಾಂತ್ಯ

**ಸ್ತುತಿಸಿರಿ:** ಯೇಸುವಿನ ಹೆಸರಿನಲ್ಲಿ ದುಷ್ಟ ಆತ್ಮನಿಂದ ಬಿಡುಗಡೆಗೊಂಡ ಸೋನಾಲಿ ಬರ್ಮನ್ ಗಾಗಿ ದೇವರಿಗೆ ಸ್ತೋತ್ರಗಳು. ಇತ್ತೀಚೆಗೆ ಪ್ಲಾಸಿ ಗ್ರಾಮದಲ್ಲಿ ವಿಶ್ವಾಸಿಗಳ ಅನ್ಯೋನ್ಯತೆಗೆ ಸೇರಿದ ಮೀನಾ ದಾಸ್ ಮತ್ತು ಅವರ ಕುಟುಂಬಕ್ಕಾಗಿ ದೇವರಿಗೆ ಮಹಿಮೆ. ಸುಮಿತ್ ಮಲ್ಲಿಕ್ ಮತ್ತು ಸರಜಿತ್ ಬಿಸ್ವಾಸ್ ಅವರು ಪೂರ್ಣಾವಧಿ ಸೇವೆಗೆ ಸೇರಿದ್ದಕ್ಕಾಗಿ ದೇವರಿಗೆ ವಂದನೆಗಳು. ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡಿದ 16 ಜನರಿಗಾಗಿ ದೇವರಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** 67 ಗ್ರಾಮಗಳಲ್ಲಿ ಪೂರ್ಣಗೊಂಡ ಅನ್ವೇಷಕರ ಕೂಟದ ಅನುಸರಣಾ ಸೇವೆಗಾಗಿ ಪ್ರರ್ಥಿಸಿರಿ. ವಿಶ್ವಾಸಿಗಳು ಹೆಚ್ಚುತ್ತಿರುವ ಗೋಪಿನಾಥಪುರ, ರೈನಾ, ಸುರಿಶತುಲಿ ಮತ್ತು ಚೆಂಚರಕುರಿಗಳಲ್ಲಿ ಸಭೆಯ ನಿರ್ಮಾಣಕ್ಕಾಗಿ ಭೂಮಿಯನ್ನು ಪಡೆಯಲು ಪ್ರಾರ್ಥಿಸಿರಿ. 147 ಸತ್ಯವೇದ ಗುಂಪುಗಳಿಗಾಗಿ ಪ್ರಾರ್ಥಿಸಿರಿ.

## 06. ಮಣಿಪುರ

**ಸ್ತುತಿಸಿರಿ:** ಸತೀಶ್ ಮತ್ತು ರೀನು ದೇವಿ ಎಂಬ ದಂಪತಿಗಳಿಗೆ 6 ವರ್ಷಗಳ ನಂತರ ದೇವರು ಗಂಡುಮಗುವನ್ನು ಕೊಡುವುದರ ಮೂಲಕ ಅವರನ್ನು ಆಶೀರ್ವದಿಸಿದನು. ಅವರೀಗ ಕ್ರಿಸ್ತನನ್ನು ಸಾಕ್ಷೀಕರಿಸುವವರಾಗಿದ್ದಾರೆ. 49 ಸ್ಥಳಗಳಲ್ಲಿ ಏರ್ಪಡಿಸಿದ ಅನ್ವೇಷಕರ ಕೂಟದಲ್ಲಿ 105 ಜನರು ಯೇಸುವಿನ ಹೆಸರನ್ನು ಮೊದಲನೆಯ ಸಾರಿ ಕೇಳಿರುವರು. ಅಂಡ್ರೋ ಕೊಯುಬು ಎಂಬ ವಿಶ್ವಾಸಿಗಳ ಗುಂಪಿನಲ್ಲಿ 4 ಕುಟುಂಬಗಳು ಸೇರ್ಪಡೆಗೊಂಡಿರುವವು. 29 ಜನರು ಕ್ರಿಸ್ತನ ಸುವಾರ್ತೆಯ ಮೂಲಕ ರಕ್ಷಿಸಲ್ಪಟ್ಟಿರುವರು. ಅವರಲ್ಲಿ 6 ಜನರು ಕ್ರಿಸ್ತನ ಪಾಪದರಿಕೆಯನ್ನು ಮಾಡಿಕೊಂಡಿರುವರು. ಕರ್ತನಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ತೊರಗುಂಗ ಬಂಗ್ಲಾ ಎಂಬ ಕ್ಷೇತ್ರದಲ್ಲಿ ಸುರ್ಜಿತ್ ಮತ್ತು ಸುಶೀಲ್ ಎಂಬುವರು ಸೇವೆಗೆ ಅಡ್ಡಿಪಡಿಸುತ್ತಿರುವರು. ತೈನು ಎಂಬವರು ಬೆನ್ನು ಮೂಳೆ ಕ್ಯಾನ್ಸರಿನಿಂದ ಬಾಧೆಪಡುತ್ತಿರುವರು. 45 ಜನರು ವಿಶ್ವಾಸದರಿಕೆಯ ಪೂರ್ವಸಿದ್ಧತ ತರಬೇತಿಯಲ್ಲಿ ಭಾಗವಹಿಸುತ್ತಿರುವರು. ಅವರಿಗಾಗಿ ಪ್ರಾರ್ಥಿಸಿರಿ. ಕೋಮುಗಲಭೆಯ ನಂತರಲೂ 275 ಗ್ರಾಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸೇವಕರಿಗಾಗಿ ಪ್ರಾರ್ಥಿಸಿರಿ.

## 07. ಒಡಿಶಾ – ಗಜಪತಿ ಹಾಗೂ ಗಂಜಾಮ್ ಜಿಲ್ಲೆಗಳು

**ಸ್ತುತಿಸಿರಿ:** ಜಂಗ್ತಾರ್ ವಿಶ್ವಾಸಿಗಳ ಅನ್ಯೋನ್ಯತೆಗೆ 9 ಜನರು ಹೊಸದಾಗಿ ಸೇರ್ಪಡೆಗೊಂಡಿರುವರು. ಪ್ರಕಾಶ್ ಜಾನಿ ಎಂಬವರಿಗೆ ಪ್ರಾರ್ಥನೆಯ ಫಲವಾಗಿ ಕಳೆದ 3 ವರ್ಷಗಳಿಂದ ರಕ್ತಹೀನತೆಯಿಂದ ಬಾಧೆಪಡುತ್ತಿದ್ದಳು, ಕರ್ತನು ಹೊಸ ಬಲವನ್ನು ನೀಡಿರುವನು. ಒಂದು ದಿವಸ ಸುವಾರ್ತೆಗೆ ವಿರೋಧಿಸುತ್ತಿದ್ದ ಸಾನ್ಯಾ ಸಬರ ಈಗ ಸುವಾರ್ತೆಯ ಮೂಲಕ ಸ್ಪರ್ಷಿಸಲ್ಪಟ್ಟಿರುವರು. ಕಂಬಾರಿನಾಯಿ ಎಂಬ ತರಬೇತಿ ಕೇಂದ್ರದಲ್ಲಿ 4 ಕುಟುಂಬಗಳು ಯೇಸುವನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಿರುವರು.

**ಪ್ರಾರ್ಥಿಸಿರಿ:** ಅಮರಸಿಂಗ್ ಸೇವಾಕ್ಷೇತ್ರದಲ್ಲಿ ವಿರೋಧವನ್ನೆದುರಿಸುತ್ತಿರುವ ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿರಿ. ಪ್ರಶಾಂತ ಮೊಂಡಲ್ ಎಂಬವರು ನೂತನವಾಗಿ ಹುಟ್ಟಿದ ಮಗುವು ತೀರಿಕೊಂಡಿದೆ. ಅವರ ಕುಟುಂಬಕ್ಕೆ ಕರ್ತನು ಸಂತೈಸಬೇಕಾಗಿ ಪ್ರಾರ್ಥಿಸಿರಿ. ನೂತನ ಸಭಾಕಟ್ಟಡಗಳನ್ನು ಹೊಂದಿದ ಸೌರ ಪಾಲೆಮ್ ವಿಶ್ವಾಸಿಗಳು ಸುತ್ತಮುತ್ತಲಿನ ಗ್ರಾಮಗಳಿಗೆ ಸುವಾರ್ತೆ ತಲುಪುವಂತೆ ಪ್ರಾರ್ಥಿಸಿರಿ. ಅಂದರಗೈ ಬೈಲಿಮುಲೈ ಹಾಗೂ ಅರ್ದಿಯರ್ ಎಂಬಲ್ಲಿ ಬಿತ್ತಲ್ಪಟ್ಟ ವಾಕ್ಯವು ಫಲಕೊಡುವಂತೆ ಪ್ರಾರ್ಥಿಸಿರಿ.

## 08. ಒಡಿಶಾ – ಹೋ, ಸಂತಾಲಿ ಸೇವಾಕ್ಷೇತ್ರ

**ಸ್ತುತಿಸಿರಿ:** ದೇವರ ವಾಕ್ಯವನ್ನು ಸೇವೆಯ ವಿರೋಧಿಸುತ್ತಿದ್ದಂತೆ ಸರತ್ ಎಂಬ ಕ್ಷೇತ್ರದಲ್ಲಿ ಸುವಾರ್ತೆಗಾಗಿ ಕರ್ತನು ಬಾಗಿಲು ತೆರೆದಿರುವನು. ಬಡಬಹಲಿ ಹಾಗೂ ಬರಿಪಡ ಎಂಬ ಸೇವಾ ಕ್ಷೇತ್ರಗಳಲ್ಲಿ ಉಜ್ಜೀವನ ಶಿಬಿರವು ಮುಕ್ತಾಯಗೊಂಡವು. ಇದರ ಮೂಲಕ ಸಂಪರ್ಕವನ್ನು ಹೊಂದಿರುವೆವು. 15 ಜನರು ಕ್ರಿಸ್ತನಲ್ಲಿ ನಂಬಿಕೆಯನ್ನು ಅರಿಕೆಮಾಡಿಕೊಂಡಿರುವರು. ದುಮುರಿದಿಯ ಎಂಬಲ್ಲಿ ನೂತನವಾಗಿ ಸೇವೆಗೆ ಬಾಗಿಲು ತೆರೆದಿರುವದು.

**ಪ್ರಾರ್ಥಿಸಿರಿ:** ಗೆಂಡುಖಾಡ ಹಾಗೂ ಅದೆಲ್ ಸಾಹಿ ಎಂಬ ಕ್ಷೇತ್ರಗಳಲ್ಲಿ ವಿಶ್ವಾಸಿಗಳನ್ನು ವಿರೋಧಿಸುತ್ತಿರುವ ಜನರಿಗಾಗಿ ಪ್ರಾರ್ಥಿಸಿರಿ. 4 ಕ್ಷೇತ್ರಗಳಲ್ಲಿ ಕಟ್ಟಲ್ಪಟ್ಟಿರುವ ಆಲಯಗಳು ಪೂರ್ಣಗೊಳ್ಳುವುದಕ್ಕಾಗಿ, ಹೋ ಹಾಗೂ ಸಂತಾಲಿ ಎಂಬ ಕ್ಷೇತ್ರದಲ್ಲಿ ಕಟ್ಟಲ್ಪಡುತ್ತಿರುವ ತರಬೇತಿ ಕೇಂದ್ರಕ್ಕಾಗಿ, ಅದರ ಮೂಲಕ ಸೇವೆ ಅಭಿವೃದ್ಧಿ ಹೊಂದುವುದಕ್ಕಾಗಿ, ಬೊದಪೇರ ಹಾಗೂ ಸಿಖರಫಡಿ ಸೇವಾ ಕ್ಷೇತ್ರದಲ್ಲಿರುವ ವಿಶ್ವಾಸಿಗಳ ಆತ್ಮೀಕ ಬೆಳವಣಿಗೆಗಾಗಿ ಪ್ರಾರ್ಥಿಸಿರಿ.

## 09. ಒಡಿಶಾ – ಕಂದಮಾಲ್ ಜಿಲ್ಲೆ

**ಸ್ತುತಿಸಿರಿ:** 20 ಜನರು ಕ್ರಿಸ್ತನಲ್ಲಿ ವಿಶ್ವಾಸದರಿಕೆಯನ್ನು ಮಾಡಿರುವರು. ರಮಿತ ಪ್ರದಾನ್ ಎಂಬವರು ದುರಾತ್ಮನಿಂದ ಬಿಡುಗಡೆ ಹೊಂದಿರುವರು. ಕೂಹಿ ಎಂಬ ಗುಂಪಿನಲ್ಲಿ 8 ಜನರು ವಿಶ್ವಾಸದರಿಕೆಯ ಮೂಲಕ ಕ್ರಿಸ್ತನಲ್ಲಿ ನಂಬಿಕೆ ಇಟ್ಟಿರುವರು. ಬುದ್ರುಮಹ ಕ್ಷೇತ್ರದ ವಿಶ್ವಾಸಿಗಳು ನೂತನ ಸಭಾಕಟ್ಟಡಕ್ಕೆ ಸ್ಥಳವನ್ನು ಸಿದ್ಧಮಾಡಿರುವರು.

**ಪ್ರಾರ್ಥಿಸಿರಿ:** ತುಮುಡಿಬಂಧ ಎಂಬ ಕ್ಷೇತ್ರದಲ್ಲಿರುವ ವಿಶ್ವಾಸಿಗಳ ಆತ್ಮೀಕ ಬೆಳವಣಿಗೆಗಾಗಿ ಹಾಗೂ ಮುಂದುವರಿಯುತ್ತಿರುವ ಉಜ್ಜೀವನ ಕೂಟಗಳಿಗಾಗಿ, ಬಗದಂಗೇರಿ ಎಂಬ ಕ್ಷೇತ್ರದಲ್ಲಿಯ ಯೌವನಸ್ಥರು ಮದ್ಯವ್ಯಸನದಿಂದ ಬಿಡುಗಡೆ ಹೊಂದುವುದಕ್ಕಾಗಿ ಪ್ರಾರ್ಥಿಸಿರಿ. ತೆರ್ಜಕಿಯ ಮತ್ತು ಕಂದರ ಮೂಡ ಎಂಬ ಸ್ಥಳಗಲ್ಲಿರುವ ಜನರು ಆರ್ಥಿಕವಾಗಿ ಹಿಂದುಳಿದಿರುವ ಇವರಿಗಾಗಿ ಪ್ರಾರ್ಥಿಸಿರಿ. ಕೊತಗರ ಎಂಬ ಕ್ಷೇತ್ರಗಳಿಗೆ ನೂತನವಾಗಿ ಸೇವಕರನ್ನು ಕಳುಹಿಸುವ ಪ್ರಯತ್ನವನ್ನು ಕರ್ತನು ಆಶೀರ್ವದಿಸಲಿ.

## 10. ಒಡಿಷಾ – ಸಂಬಲಪುರಿ

**ಸ್ತುತಿಸಿರಿ:** ಎಜ್ರಾ ಶಿಬಿರದ ಮೂಲಕ 10 ಯೌವನಸ್ಥರು ಪೂರ್ಣಾವಧಿ ಸೇವೆಗೆ ಆಯ್ಕೆಗೊಂಡಿರುವರು. ಖರಘುರ ಜಿಲ್ಲೆಯಲ್ಲಿ ಸೇವೆಗಾಗಿ 5 ಗ್ರಾಮಗಳು ಗುರುತಿಸಲ್ಪಟ್ಟಿರುವವು. ಪ್ರಿಯಾಂಕ ಕುಂಬಾರ ಎಂಬವರು 7 ತಿಂಗಳಿನಿಂದ ಸೈತಾನನ ಬಂಧನದಿಂದ ಬಂಧಿಸಲ್ಪಟ್ಟಿದ್ದರು. ಪ್ರಾರ್ಥನೆಯ ಮೂಲಕ ಅವರೀಗ ಬಿಡುಗಡೆ ಹೊಂದಿರುವರು. 6 ಜನರು ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡಿರುವರು.

**ಪ್ರಾರ್ಥಿಸಿರಿ:** ಸುವಾರ್ತಾ ಸೇವೆಯು ತೆರೆಯಲ್ಪಟ್ಟ ಬೋದ ಜಿಲ್ಲೆಯಲ್ಲಿ ಹೊಸ ಸೇವಕರ ಅವಶ್ಯವಿರುವುದು. ಗೋಡಬಾಗ ಎಂಬ ಸ್ಥಳದಲ್ಲಿ ಸುವಾರ್ತಾ ಸೇವೆಗೆ ವಿರೋಧವಿರುವದು. ಸಾಯೋದಿ ಹಾಗೂ ಲಾದೇರಪಲಿ ಎಂಬ ಆರಾಧನೆ ಸ್ಥಳಗಳಿಗೆ ಕರ್ತನ ಭೋಜನ ಸಂಸ್ಕಾರದ ಪಾತ್ರೆಗಳ ಅವಶ್ಯವಿರುವದು. ಪ್ರಿಯ ಬ್ರತ ಹಾಗೂ ಮಾಕೂನು ಸೇವಕರು ಏರ್ಪಡಿಸುವ ಯೌವನಸ್ಥರ ಕೂಟದ ಮೂಲಕ ದೇವರು ಅನೇಕರ ಜೀವಿತಗಳಲ್ಲಿ ಬಲವಾಗಿ ಕಾರ್ಯಸಾಧಿಸಲಿ ಎಂದು ಪ್ರಾರ್ಥಿಸಿರಿ.

## 11. ಛತ್ತೀಸ್ ಘಡ – ಚಂಪಾ ಸೇವಾ ಕ್ಷೇತ್ರ

**ಸ್ತುತಿಸಿರಿ:** ಜಿಂಗ್ರೇಲ್ ಹಾಗೂ ಕೂಲಿಫೋತ ಎಂಬ ಸ್ಥಳಗಳಲ್ಲಿ ಹೊಸ ಆರಾಧನ ಗುಂಪುಗಳನ್ನು ಕರ್ತನು ದಯಪಾಲಿಸಿರುವನು. 25 ಜನರು ಯೇಸುವನ್ನು ರಕ್ಷಕನನ್ನಾಗಿ ಅಂಗೀಕರಿಸಿಕೊಂಡಿರುವರು. 2357 ಜನರು ಅನ್ವೇಷಕರ ಕೂಟಗಳ ಮೂಲಕ ದೇವರ ಪ್ರೀತಿಯ ಕುರಿತು ಆಲಿಸಿರುವರು. ಪಂತೋರ ಎಂಬ ವಿಶ್ವಾಸಿಗಳ ಗುಂಪಿನಲ್ಲಿ ನೂತನವಾಗಿ ಒಂದು ಕುಟುಂಬವು ಸೇರ್ಪಡೆಗೊಂಡಿರುವದು. ದೇವರಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ದುಂಗುಬಾಡ ಎಂಬ ಕ್ಷೇತ್ರದಲ್ಲಿ ಕುರುಕ್ ವಿಶ್ವಾಸಿಗಳಿಗಾಗಿ ಏರ್ಪಡಿಸಿದ ಮೇಳದ ಪೂರ್ವ ಸಿದ್ಧತೆಗಾಗಿ ಪ್ರಾರ್ಥಿಸಿರಿ. ಬುಧಗಹನ ಹಾಗೂ ಕಮಾರಿಯ ಎಂಬ ಸ್ಥಳಗಳಲ್ಲಿ ನೂತನ ಆರಾಧನಾ ಗುಂಪನ್ನು ಪ್ರಾರಂಭಿಸುವುದಕ್ಕಾಗಿ ಪ್ರಾರ್ಥಿಸಿರಿ. ನರೇಂದ್ರ ಯಾದವ್ ಎಂಬುವರು ಮದ್ಯಪಾನಕ್ಕೆ ಒಳಗಾಗಿರುವರು. ಬಿಡುಗಡೆಗಾಗಿ ಪ್ರಾರ್ಥಿಸಿರಿ. ಕಳೆದ 7 ವರ್ಷಗಳಿಂದ ಸಂತಾನ ಭಾಗ್ಯಕ್ಕಾಗಿ ಎದುರುನೋಡುತ್ತಿರುವ ಕುಂತಿಬಾಯಿ ಅವರಿಗಾಗಿ ಪ್ರಾರ್ಥಿಸಿರಿ.

## 12. ಛತ್ತೀಸ್ ಘಡ – ರಾಯ್ ಪುರ ಪ್ರಾಂತ್ಯ

**ಸ್ತುತಿಸಿರಿ:** ಸುವಾರ್ತೆಯಲ್ಲಿ ಆಸಕ್ತಿ ಹೊಂದಿರುವ ರಾಯ್ ಪುರ ಜಿಲ್ಲೆಯ ಒಳಗಿನ ಹಳ್ಳಿಗಳಲ್ಲಿ ವಾಸಿಸುವ ಯಾದವ್ ಜನರಿಗಾಗಿ ಸ್ತೋತ್ರ. ರೂಬೇನ್ ಎಂಬ 4 ವರ್ಷದ ಮಗು ಮೂರ್ಚೇರೋಗದಿಂದ ಗುಣಹೊಂದಿರುವನು. ಮಂದಿರಹೌಸದ ಸಭೆಯ ನವೀಕರಣ ಕಾರ್ಯವು ಮುಕ್ತಾಯಗೊಂಡಿರುವದು. 13 ಜನರು ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡಿರುವರು. ಕರ್ತನಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** 13 ಜನ ಸೇವಕರು ತರಬೇತಿ ಹೊಂದಿ ಸಭಾ ಸೇವೆ ಮಾಡಲು ಸಿದ್ಧಗೊಂಡಿರುವರು. ಇವರು ದೇವರ ರಾಜ್ಯದ ಅಭಿವೃದ್ಧಿಗಾಗಿ ಪ್ರಯಾಸಪಡಲು ಪ್ರಾರ್ಥಿಸಿರಿ. ಆಶಾ ಅವರ ಕುಟುಂಬದಲ್ಲಿ ದೇವರು ಸಮಾಧಾನ ನೀಡುವುದಕ್ಕಾಗಿ, ದಳ್ಳಿರಾಜಾರದಲ್ಲಿ ನಡೆಯುವ ಸುವಾರ್ತಾ ಕೂಟದಲ್ಲಿ ಹೊಸ ಜನರು ಭಾಗವಹಿಸುವುದಕ್ಕಾಗಿ, ನೆರೆಹೊರೆಯ ಹಳ್ಳಿಯಾದ ಗುಲ್ಲು ಎಂಬ ಗ್ರಾಮದಲ್ಲಿ ಅಲ್ಲಿರುವ ವಿಶ್ವಾಸಿಗಳ ಮೂಲಕ ಸುವಾರ್ತೆ ತಲುಪುವದಕ್ಕಾಗಿ ಪ್ರಾರ್ಥಿಸಿರಿ.

## 13. ಮಧ್ಯಪ್ರದೇಶ

**ಸ್ತುತಿಸಿರಿ:** 4 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ನಿರ್ಮಲ ಎಂಬ ಹೊಸ ವಿಶ್ವಾಸಿಯು ತನ್ನ ಸಾಕ್ಷಿಯ ಮೂಲಕ ಇಡೀ ಕುಟುಂಬವನ್ನು ಕ್ರಿಸ್ತನಿಗಾಗಿ ಗೆದ್ದುಕೊಂಡಿರುವಳು. ಸುರೇಶ ಎಂಬವರು ಪಾರ್ಶ್ವವಾಯುವಿನಿಂದ ಬಾಧೆಪಡುತ್ತಿದ್ದರು. ಈಗ ಯೇಸು ಕ್ರಿಸ್ತನ ಹೆಸರಿನಲ್ಲಿ ಎದ್ದು ನಡೆದಾಡುತ್ತಿರುವರು. ಲಲಿತ ಎಂಬ ಸಹೋದರಿಯ ಕುಟುಂಬವು ಸಂತಾನ ಭಾಗ್ಯವನ್ನು ಪಡೆದಿರುವದು. ರಾಜು ಎಂಬ ಸಹೋದರನು ನೂತನ ಮನೆಯನ್ನು ಹೊಂದಿರುವನು. ಅದರಲ್ಲಿ ಸುವಾರ್ತಾ ಸೇವೆಗಾಗಿ ಒಂದು ಕೋಣೆಯನ್ನು ನೀಡಿರುವನು. ಕರ್ತನಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ಪಿದಾರಿಯ ಎಂಬ ಸ್ಥಳದಲ್ಲಿ ಸಭೆಯ ನಿರ್ಮಾಣಕ್ಕಾಗಿ ಪ್ರಾರ್ಥಿಸಿರಿ. ನಾರಾಯಣ ಹಾಗೂ ರಚನಾ ಎಂಬವರ ರಕ್ಷಣೆಗಾಗಿ ಪ್ರಾರ್ಥಿಸಿರಿ. ನಹರಪುರ ಎಂಬ ಕ್ಷೇತ್ರದಲ್ಲಿ ಸುವಾರ್ತೆಗೆ ವಿರೋಧವಿರುವುದರಿಂದ ಮುಂದಿನ ದಿನಗಳಲ್ಲಿ ಸಂಪೂರ್ಣ ನಿವಾರಣೆಯಾಗುವುದಕ್ಕಾಗಿ ಪ್ರಾರ್ಥಿಸಿರಿ. ರಾಯಪುರ ಸಭೆಯ ವಿಸ್ತರಣೆಗಾಗಿ ಪ್ರಾರ್ಥಿಸಿರಿ. ಯಾಕಂದರೆ ವಿಶ್ವಾಸಿಗಳ ಸಭೆಯು ದಿನದಿಂದ ದಿನಕ್ಕೆ ಅಭಿವೃದ್ಧಿಗೊಳ್ಳುತ್ತಿರುವದು.

## 14. ಗುಜರಾತ – ಭರೂಖ ಜಿಲ್ಲೆ

**ಸ್ತುತಿಸಿರಿ:** ಪನ್ಸಾರ್ ಗ್ರಾಮದಲ್ಲಿ ನೂತನವಾಗಿ ಸೇವೆ ಪ್ರಾರಂಭಗೊಂಡಿರುವದು. ಹೊಲಕೋತರ್ ಎಂಬ ಸೇವಾ ಕ್ಷೇತ್ರದಲ್ಲಿ ನಾನು ಬೆನ್ ಹಾಗೂ ಆಕೆಯ ಕುಟುಂಬದವರು ದೇವರ ಕೈಗಳಲ್ಲಿ ಬಲವಾಗಿ ಉಪಯೋಗಿಸಲ್ಪಡುತ್ತಿರುವರು. ಮೀನ ಬೆನ್ ಮತ್ತು ಮಂಜು ಬೆನ್ ಎಂಬವರು ದೇವರ ಕೈಗಳಲ್ಲಿ ಬಲವಾಗಿ ಉಪಯೋಗಿಸಲ್ಪಡುತ್ತಿರುವರು. 16 ಜನರು ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡು ಅವರೀಗ ಆರಾಧನೆ ಗುಂಪಿಗೆ ಸೇರ್ಪಡೆಗೊಂಡಿರುವರು. ದೇವರಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ಕರವಡ ಎಂಬ ಗ್ರಾದಮಲ್ಲಿ ದೇವರ ವಾಕ್ಯವು ಬಿತ್ತಲ್ಪಟ್ಟಿರುವದು. ಮುಂದಿನ ದಿನಗಳಲ್ಲಿ ಫಲ ನೀಡುವುದಕ್ಕಾಗಿ ಪ್ರಾರ್ಥಿಸಿರಿ. ವಡಿಫಲಿಯ ಮತ್ತು ಹತ್ತಕುಂಡಿ ಕ್ಷೇತ್ರಗಳಲ್ಲಿ ಸಭಾಕಟ್ಟಡ ನಿರ್ಮಾಣಕ್ಕಾಗಿ ಪ್ರಾರ್ಥಿಸಿರಿ. ಪಿಚ್ವಾಡದಲ್ಲಿ ನಡೆಯುತ್ತಿರುವ ಅನ್ವೇಷಕರ ಕೂಟದಲ್ಲಿ ಅನೇಕ ಹೊಸ ಜನರು ಕೂಡಿ ಬರುವುದಕ್ಕಾಗಿ ಪ್ರಾರ್ಥಿಸಿರಿ. ಅಮ್ಲದಬ್ರಾ ಮತ್ತು ಕಾಂಡನಲ್ಲಿ ಸುವಾರ್ತೆಯನ್ನು ವಿರೋಧಿಸುವವರಿಗಾಗಿ ಪ್ರಾರ್ಥಿಸಿರಿ.

## 15. ಮಹಾರಾಷ್ಟ್ರ – ದೇಗಲೂರು ಕ್ಷೇತ್ರ

**ಸ್ತುತಿಸಿರಿ:** ಹೊಸ ವಿಶ್ವಾಸಿಯಾಗಿರುವ ಅಶೋಕ ನಾಗಾರಾವ್ ಹಾಗೂ ಅವರ ಕುಟುಂಬವು ಕರ್ತನ ಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವರು. ಉಂಡ್ರಿ ಆರಾಧನೆ ಗುಂಪಿನಲ್ಲಿ ನೂತನವಾಗಿ ಹಜಿತ್ ವಾಘಮರ್ ಕುಟುಂಬವು ಸೇರ್ಪಡೆಗೊಂಡಿರುವದು. ಹರ್ದೋಲಿ ಸೇವಾಕ್ಷೇತ್ರದಲ್ಲಿ ಪಿಯುಷ್ ಘಯಾಡ ಅವರ ಕುಟುಂಬವು ಸಮಾಧಾನದ ಪಾತ್ರೆಯಾಗಿ ಉಪಯೋಗಿಸಲ್ಪಡುತ್ತಿರುವದು. 14 ಜನರು ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಅರಿಕಮಾಡಿಕೊಂಡಿರುವರು.

**ಪ್ರಾರ್ಥಿಸಿರಿ:** ಪಂಧಾರಿ ಸೂರ್ಯವಂಶಿಯವರು ಪಾರ್ಶ್ವವಾಯು ಕಾಯಿಲೆಯಿಂದ ಬಾಧೆಪಡುತ್ತಿರುವರು. ಬೀಕರಮೌಳಿ ಹಾಗೂ ಅಮಿರ್ಜಾ ಕ್ಷೇತ್ರಗಳಲ್ಲಿ ಸಭಾ ಕಟ್ಟಡದ ಅನುಮತಿಗಾಗಿ ಪ್ರಾರ್ಥಿಸಿರಿ. ಖದಗಾವ್ ಹಾಗೂ ಮೇವಾಪುರ ಎಂಬ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಅನ್ವೇಷಕರ ಕೂಟದಲ್ಲಿ ಅನೇಕರು ಸುವಾರ್ತೆಯ ಮೂಲಕ ಸ್ಪರ್ಷಿಸಲ್ಪಡುವಂತೆ ಪ್ರಾರ್ಥಿಸಿರಿ. ಅಲ್ಲಾಪುರ ಹಾಗೂ ಗಣೇಶವಾಡಿಯಲ್ಲಿ ವಾಸಿಸುತ್ತಿರುವ ಜನರ ಜೀವನವು ಸುಧಾರಿಸುವಂತೆ ಪ್ರಾರ್ಥಿಸಿರಿ.

## 16. ತೆಲಂಗಾಣ – ಹಣಮಗೊಂಡ ಕ್ಷೇತ್ರ

**ಸ್ತುತಿಸಿರಿ:** 4 ಯೌವನಸ್ಥರು ಪೂರ್ಣಾವಧಿ ಸೇವೆ ಸಲ್ಲಿಸಲು ತಮ್ಮನ್ನು ಸಮರ್ಪಿಸಿಕೊಂಡಿರುವರು. ರುರುವಿ ತಾಲೂಕಿನಲ್ಲಿ ನೂತನವಾಗಿ ಸೇವೆ ಸಲ್ಲಿಸಲು 5 ಗ್ರಾಮಗಳು ಗುರುತಿಸಲ್ಪಟ್ಟಿರುವವು. ನರಸಿಂಹಪುರಂ ಹಾಗೂ ಚಿಂತಕಾನಿ ಎಂಬ ಗ್ರಾಮಗಳಲ್ಲಿ ನೂತನವಾಗಿ ಸತ್ಯವೇದ ಅಧ್ಯಯನ ಗುಂಪುಗಳು ಪ್ರಾರಂಭಗೊಂಡಿರುವವು. ಮಾಧಾಪುರಂ ಎಂಬ ಗ್ರಾಮದಲ್ಲಿ ಸುವಾರ್ತಾ ಸೇವೆಯನ್ನು ವಿರೋಧಿಸುತ್ತಿದ್ದ ಸಮಸ್ಯೆಯು ನಿವಾರಣೆಯಾಗಿರುವದು. ಕರ್ತನಿಗೆ ಸ್ತೋತ್ರ

**ಪ್ರಾರ್ಥಿಸಿರಿ:** ಮುಂಚೇರಿಯಲ್ ಹಾಗೂ ನಿಜಮಾಬಾದ್ ಜಿಲ್ಲೆಗಳಲ್ಲಿ ಒಳ ಗ್ರಾಮಗಳಲ್ಲಿ ಸುವಾರ್ತಾ ಸೇವೆಗಾಗಿ ಹೆಚ್ಚು ಮಿಷಿನರಿಗಳು ದೊರಕುವಂತೆ, ಮುಳಕಲಪಲ್ಲಿ ಎಂಬ ಗ್ರಾಮದಲ್ಲಿ ವಾಸಿಸುವ ಲಂಬಾಣಿ ಜನರ ಗುಂಪು ವಾಸಿಸುತ್ತಿರುವುದು. ಇವರಿಗೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಕುಡಿಯುವ ನೀರಿನ ಸೌಲಭ್ಯ ದೊರಕುವಂತೆ, ಖಮ್ಮಮ್ ಜಿಲ್ಲೆಯಲಲಿರುವ 5 ಸಭೆಗಲಿಗೆ ಧ್ವನಿವರ್ಧಕಗಳು ದೊರೆಯುವಂತೆ ಪ್ರಾರ್ಥಿಸಿರಿ. ಭಟ್ಟಪಲ್ಲಿ ಎಂಬ ಗ್ರಾಮದಲ್ಲಿ ದಿನದಿಂದ ದಿನಕ್ಕೆ ವಿಶ್ವಾಸಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಸಭಾ ಕಟ್ಟಡದ ವಿಸ್ತರಣೆಗಾಗಿ ಪ್ರಾರ್ಥಿಸಿರಿ.

## 17. ತೆಲಂಗಾಣ – ಹೈದರಾಬಾದ್

**ಸ್ತುತಿಸಿರಿ:** ಚೆನ್ನಂಪಲ್ಲಿ ಎಂಬ ಗ್ರಾಮದಲ್ಲಿ ದೇವರ ವಾಕ್ಯದಲ್ಲಿ ಆಸಕ್ತಿ ಹೊಂದಿರುವ ವಿಶ್ವಾಸಿಗಳ ಮಧ್ಯೆ ಹೊಸದಾಗಿ ಸತ್ಯವೇದ ಅಧ್ಯಯನ ಗುಂಪನ್ನು ಆರಂಭಿಸುವಂತೆ ಕರ್ತನು ಸಹಾಯ ಮಾಡಿರುವನು. ದತ್ತಪ್ಪಗುಡಂ ಗ್ರಾಮದಲ್ಲಿರುವ ವಿಶ್ವಾಸಿಗಳಿಗೆ ಕರ್ತನು ನೂತನ ಸಭಾಕಟ್ಟಡವನ್ನು ನೀಡಿರುವನು. ಪೆದಮಪಲ್ಲಿ ಎಂಬ ಗ್ರಾಮದಲ್ಲಿ ಸುವಾರ್ತಾ ಸೇವೆಗೆ ಇದ್ದ ವಿರೋಧವು ನಿವಾರಣೆಯಾಗಿರುವುದು. ಪದಾರಾ ಮಂಡಲ ಎಂಬ ಗ್ರಾಮದಲ್ಲಿ ಸುವಾರ್ತೆಗೆ ಬಾಗಿಲುಗಳು ತೆರೆದಿರುವವು. ಕರ್ತನಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ಕ್ರಿಸ್ಟೋಫರ್ ಎಂಬ ಸೇವಕರು ಅರ್ಥರೈಟೀಸ್ ಎಂಬ ಕಾಯಿಲೆಯಿಂದ ಬಾಧೆಪಡುತ್ತಿರುವರು. ಸ್ವಸ್ಥತೆಗಾಗಿ ಪ್ರಾರ್ಥಿಸಿರಿ. ಚಿಲ್ಲಪುರಂ ಎಂಬ ಗ್ರಾಮದಲ್ಲಿ 40ಕ್ಕಿಂತ ಹೆಚ್ಚು ಕುಟುಂಬಗಳು ಕ್ರಿಸ್ತನನ್ನು ನಂಬಿರುವವು. ಇವರಿಗೆ ಸಭಾಕಟ್ಟಡದ ಸ್ಥಳಕ್ಕಾಗಿ ಪ್ರಾರ್ಥಿಸಿರಿ. ಉದಿಮಿಲ್ಲಾ ಸೇವಾ ಕ್ಷೇತ್ರದಲ್ಲಿರುವ ಜನರಿಗೆ ನೀರಿನ ತೊಂದರೆ ಇರುವ ಕಾರಣ ನೂತನ ಬೋರ್ ವೆಲ್ ನಿರ್ಮಾಣಕ್ಕಾಗಿ ಪ್ರಾರ್ಥಿಸಿರಿ. ನಾಲಗೊಂಡ ಹಾಗೂ ರಂಗಾರೆಡ್ಡಿ ಜಿಲ್ಲೆಯಲ್ಲಿರುವ ಸೇವಾ ಕ್ಷೇತ್ರಗಳಿಗೆ 24 ಮೆಗಾಫೋನ್, 23 ಡೋಲಾಕ್ ಅವಶ್ಯವಿರುವವು. ಪ್ರಾರ್ಥಿಸಿರಿ.

## 18. ಆಂಧ್ರ ಪ್ರದೇಶ – ವಿಜಯವಾಡ ಪ್ರಾಂತ್ಯ

**ಸ್ತುತಿಸಿರಿ:** ಕೊರ್ರಪೊರ್ಲುಗುಡೆಂ ಕ್ಷೇತ್ರದಲ್ಲಿ ಮಲ್ಲಯ್ಯ ಎಂಬವರು ದೇವರ ವಾಕ್ಯವನ್ನು ಕೇಳಿದ ನಂತರ ಕುಡಿಕತನದಿಂದ ಬಿಡುಗಡೆ ಹೊಂದಿರುವ ಮೂಲಕ ದೇವರ ನಾಮವು ಮಹಿಮೆ ಹೊಂದಿರುವದು. 13 ಚೆಂಚು ಜನರು ಕ್ರಿಸ್ತನಲ್ಲಿ ಬಲಹೊಂದುತ್ತಿರುವರು. ಪೋತುರಾಜ ಪೆಂಟ ಎಂಬ ಗ್ರಾಮದಲ್ಲಿ ಅಂಕಲಮ್ಮ ಎಂಬ ವಿಶ್ವಾಸಿಯು ತಮ್ಮ ಜೀವಿತದಲ್ಲಿ ದೇವರು ಮಾಡಿದ ಅದ್ಭುತಗಳನ್ನು ಸಾಕ್ಷಿಗಾಗಿ ಸಾರುತ್ತಿರುವರು. 13 ಜನ ನೂತನವಾಗಿ ವಿಶ್ವಾಸಿಗಳ ಗುಂಪಿನಲ್ಲಿ ಸೇರ್ಪಡೆಗೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಬಿಲ್ಲಾಗೊಂಡಿ ಸೇವಾಕ್ಷೇತ್ರದಲ್ಲಿರುವ ವಿಶ್ವಾಸಿಗಳ ಆತ್ಮೀಕ ಬೆಳವಣಿಗೆಗಾಗಿ ಪ್ರಾರ್ಥಿಸಿರಿ. ಚೆಂದು ಜನರ ಮಧ್ಯೆ ಸೇವೆ ಸಲ್ಲಿಸಲು 10 ಸೇವಕರನ್ನು ಕಳುಹಿಸಲು ಪ್ರಯಾಸಪಟ್ಟಿರುವವರಿಗಾಗಿ ಪ್ರಾರ್ಥಿಸಿರಿ. ನಂದಿಗುಡೆಮ್ ಹಾಗೂ ಯಾರ್ರೆಗುಂಟೆ ಗುಡೆಂ ಎಂಬ ಗ್ರಾಮಗಳಲ್ಲಿ ನಂಬಿಕೆಯ ಅರಿಕೆಯ ಕೂಟಕ್ಕೆ ಪೂರ್ವ ಸಿದ್ಧತೆ ಮಾಡಿಕೊಳ್ಳುತ್ತಿರುವವರಿಗಾಗಿ ಪ್ರಾರ್ಥಿಸಿರಿ. ದೊಡ್ಡನಾಲಾ ಹಾಗೂ ಬೊದಿಗುಂಡೆಮ ಗ್ರಾಮಗಳಲ್ಲಿರುವ ಜನರ ಆರ್ಥಿಕ ಸ್ಥಿತಿ ಸುಧಾರಿಸುವಂತೆ ಪ್ರಾರ್ಥಿಸಿರಿ.

## 19. ಆಂಧ್ರ ಪ್ರದೇಶ – ಜಾತಾಪು ಪ್ರಾಂತ್ಯ

**ಸ್ತುತಿಸಿರಿ:** ಜಾತಾಪು ಜನರ ಗುಂಪಿನಲ್ಲಿ ಸೇವೆ ಸಲ್ಲಿಸಲು 8 ಜನ ಸೇವಕರನ್ನು ದಯಪಾಲಿಸಿರುವನು. ಗದಾಬ ವಲಸ ಎಂಬ ಆರಾಧನಾ ಗುಂಪಿನಲ್ಲಿ 8 ಕುಟುಂಬಗಳು ಸೇರ್ಪಡೆಗೊಂಡಿರುವವು. ದುಂಡುಸುರ ಮತ್ತು ರಸ್ತೆಕುಂಡುಬೈ ಸೇವಾ ಕ್ಷೇತ್ರದಲ್ಲಿ ಈ ಸಮ್ಮೇಳನವನ್ನು ಆಯೋಜಿಸಲು ಕರ್ತನು ಸಹಾಯ ಮಾಡಿರುವನು.

**ಪ್ರಾರ್ಥಿಸಿರಿ:** ಜಯಂತಿ ಬುಜ್ಜಿ ಎಂಬ ಸೇವಕರು ಮಲೇರಿಯದಿಂದ ಬಾಧೆಪಡುತ್ತಿರುವರು. ಅವರಿಗಾಗಿ ಪ್ರಾರ್ಥಿಸಿರಿ. ಗೋಡಿವಾಡ ಎಂಬ ಗ್ರಾಮದಲ್ಲಿ ನೂತನ ಸಭಾಕಟ್ಟಡವನ್ನು ಹೊಂದಿದ ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿರಿ. ಈ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸುವಾರ್ತೆಯು ತಲುಪುವದಕ್ಕಾಗಿ ಪ್ರಾರ್ಥಿಸಿರಿ. ತಟ್ಟೋಡಿ ಗ್ರಾಮದಲ್ಲಿರುವ ವಿಶ್ವಾಸಿಗಳ ಆತ್ಮೀಕ ಬೆಳವಣಿಗೆಗಾಗಿ ಪ್ರಾರ್ಥಿಸಿರಿ. 9 ಸೇವಾ ಕ್ಷೇತ್ರಗಳಲ್ಲಿ ಸಭಾ ಕಟ್ಟಡಗಳು ಪೂರ್ಣಗೊಳ್ಳುವುದಕ್ಕಾಗಿ ಪ್ರಾರ್ಥಿಸಿರಿ.

## 20. ಕರ್ನಾಟಕ

**ಸ್ತುತಿಸಿರಿ:** ಹನುಮಕ್ಕ ಮತ್ತು ದುರ್ಗಮ್ಮ ಎಂಬವರು ಉಪವಾಸ ಪ್ರಾರ್ಥನೆಯ ಮೂಲಕ ಬಿಡುಗಡೆ ಹೊಂದಿರುವದು. 4 ಜನ ವಿಶ್ವಾಸಿಗಳು ಪಾಪದರಿಕೆಯ ಮೂಲಕ ಯೇಸುವನ್ನು ಕಂಡುಕೊಂಡಿರುವರು. ಆಕಾಶ ಅವರ ಕುಟುಂಬದವರು ಪ್ರತಿನಿಧಿಗಳಾಗಿ ಯಾರಬಾಗ್ ಸೇವಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವರು. ಸೇವಕರಾದ ಮಾರುತಿ ಎಂಬವರ ಕುಟುಂಬಕ್ಕೆ ಕರ್ತನು ಗಂಡುಮಗುವನ್ನು ದಯಪಾಲಿಸಿರುವನು.

**ಪ್ರಾರ್ಥಿಸಿರಿ:** ಅಜ್ಜೀನಹಳ್ಳಿ ಎಂಬ ಗ್ರಾಮದಲ್ಲಿ ಸುವಾರ್ತೆಗಾಗಿ ಬಾಗಿಲು ತೆರೆಯುವಂತೆ ಪ್ರಾರ್ಥಿಸಿರಿ. ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ರಾಜು ಅವರ ಕುಟುಂಬದಲ್ಲಿರುವ ಸದಸ್ಯರುಗಳ ಸಾಂತ್ವನಕ್ಕಾಗಿ ಪ್ರಾರ್ಥಿಸಿರಿ. ಮಿಳ್ಳಾಪುರ ಎಂಬ ಗ್ರಾಮದಲ್ಲಿ ಸಭಾಕಟ್ಟಡ ಸ್ಥಳಕ್ಕಾಗಿ ಪ್ರಾರ್ಥಿಸಿರಿ. ಚಿಕ್ಕ ಚೆಲ್ಲೂರು ಹಾಗೂ ಕೊಟ್ರಹಳ್ಳಿ ಎಂಬ ಗ್ರಾಮದಲ್ಲಿ ದೇವರ ವಾಕ್ಯವನ್ನು ಆಲಿಸಿದ ಜನರ ಮಾನಸಾಂತರಕ್ಕಾಗಿ ಪ್ರಾರ್ಥಿಸಿರಿ.

## 21. ಹಿಮಾಚಲ ಪ್ರದೇಶ

**ಸ್ತುತಿಸಿರಿ:** 160 ಜನ ಯೇಸು ಕ್ರಿಸ್ತನ ಸುವಾರ್ತೆಯನ್ನು ಕೇಳಿದವರು ದೇವರ ವಾಕ್ಯದಲ್ಲಿ ಆಸಕ್ತಿ ಹೊಂದಿರುವರು. ನೇಹ ಎಂಬ ಕುಟುಂಬದವರು 6 ವರ್ಷಗಳ ನಂತರ ಮಗುವನ್ನು ಹೊಂದಿರುವರು. 14 ಜನರು ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಳ್ಳುವ ಮೂಲಕ ದೇವರಿಗಾಗಿ ಜೀವಿಸಲು ತಮ್ಮನ್ನು ಸಮರ್ಪಿಸಿಕೊಂಡಿರುವರು. ಸಮೀಕ್ಷೆಯ ಮೂಲಕ 15 ಗ್ರಾಮಗಳು ಸುವಾರ್ತಾ ಸೇವೆಗಾಗಿ ಸಿದ್ಧಗೊಂಡಿರುವವು.

**ಪ್ರಾರ್ಥಿಸಿರಿ:** ಗುದ್ದಾಲ ಎಂಬ ಗ್ರಾಮದಲ್ಲಿ ಸಭೆಗೆ ಸೇರ್ಪಡೆಗೊಂಡ 3 ಜನರು ರಕ್ಷಿಸಲ್ಪಡುವ ಮೂಲಕ ಅವರು ತಮ್ಮ ಸಾಕ್ಷಿಯ ಮೂಲಕ ತಮ್ಮ ಕುಟುಂಬದ ಸದಸ್ಯರನ್ನು ರಕ್ಷಿಸಲು ಪ್ರಾರ್ಥಿಸಿರಿ. ಬೆಂಕಿ ಅವಘಡಕ್ಕೆ ಈಡಾದ ಸೇವಕರಾದ ಪ್ರೋಮ ಚುನಾರ ಎಂಬುವರ ಮನೆಯ ಪುನರ್ ನಿರ್ಮಾಣಕ್ಕಾಗಿ ಪ್ರಾರ್ಥಿಸಿರಿ. ದೌಲಕಾನ್ ಸೇವಾಕ್ಷೇತ್ರದಲ್ಲಿ ಸಭಾ ಕಟ್ಟಡಕ್ಕೆ ಸೂಕ್ತ ಸ್ಥಳಕ್ಕಾಗಿ ಪ್ರಾರ್ಥಿಸಿರಿ. 10 ಜನ ಯೌವನಸ್ಥರು ಸೇವೆಗಾಗಿ ಸಮರ್ಪಿಸಿಕೊಂಡು ತರಬೇತಿಯಲ್ಲಿರುವರು. ಪ್ರಾರ್ಥಿಸಿರಿ.

## 22. ಉತ್ತರಖಂಡ

**ಸ್ತುತಿಸಿರಿ:** ಹರೀಶ್ ಮತ್ತು ದಿಲೀಪ್ ಎಂಬ ಕುಟುಂಬಗಳು ದೇವರ ಸೇವೆ ಮಾಡಲು ಮುಂದೆ ಬಂದಿರುವರು. ಮನೀಷ್ ಎಂಬ ಸೇವಕರು ಕಾಮಾಲೆ ಕಾಯಿಲೆಯಿಂದ ಸಂಪೂರ್ಣವಾಗಿ ಗುಣಹೊಂದಿರುವರು. ರಂಜಾಬಾಗ ಎಂಬ ಸೇವಾಕ್ಷೇತ್ರದಲ್ಲಿ ಸೇವೆಸಲ್ಲಿಸುವ ಅಸ್ರಮ್ ಎಂಬವರು ದುರಾತ್ಮಪೀಡಿತ ವ್ಯಕ್ತಿಯಿಂದ ರಕ್ಷಿಸಲ್ಪಟ್ಟಿರುವರು. 56 ಜನರು ಅನ್ವೇಷಕರ ಕೂಟದ ಮೂಲಕ ಜೀವವುಳ್ಳ ದೇವರನ್ನು ತಿಳಿದುಕೊಳ್ಳುವ ಮೂಲಕ ಅವರು ನಂಬಿಕೆಯ ಅರಿಕೆಗಾಗಿ ಸಿದ್ಧಗೊಂಡಿರುವರು. ಕರ್ತನಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ಉತ್ತರಕಾಶಿ ಜಿಲ್ಲೆಯಲ್ಲಿ ಸುವಾರ್ತೆಗಾಗಿ ಬಾಗಿಲುಗಳು ತೆರೆಯಲು ಪ್ರಾರ್ಥಿಸಿರಿ. 170 ಸೇವೆಸಲ್ಲಿಸಿದ ಗ್ರಾಮಗಳಲ್ಲಿ ಪುನಃ ಅವರನ್ನು ಸಂಧಿಸಲು ಪ್ರಾರ್ಥಿಸಿರಿ. ದೊಲಾವಾಲಾ ಎಂಬ ಗ್ರಾಮದಲ್ಲಿ ವಿಶ್ವಾಸಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಸಭಾಕಟ್ಟಡಕ್ಕೆ ಸೂಕ್ತ ಸ್ಥಳಕ್ಕಾಗಿ ಪ್ರಾರ್ಥಿಸಿರಿ. ಕಾತಿಮಾ ಮತ್ತು ಉದಮಸಿಂಗ್ ನಗರ ಎಂಬ ಸೇವಾಕ್ಷೇತ್ರಗಳಲ್ಲಿ ವಿರೋಧಗಳ ಮಧ್ಯೆಯೂ ಸೇವೆಯು ಆಶೀರ್ವದಿಸಲ್ಪಡುವುದಕ್ಕಾಗಿ ಪ್ರಾರ್ಥಿಸಿರಿ.

## 23. ರಾಜಸ್ತಾನ – ಉದಯಪುರ ಸೇವಾಕ್ಷೇತ್ರ

**ಸ್ತುತಿಸಿರಿ:** ಈಶ್ವರಲಾಲ್ ಎಂಬುವರು ಪಾರ್ಶ್ವವಾಯು ರೋಗದಿಂದ ಗುಣಹೊಂದಿ ದೇವರನ್ನು ಮಹಿಮೆಪಡಿಸುತ್ತಿರುವರು. 17 ಜನರು ಪಾಪದರಿಕೆಯ ಮೂಲಕ ಯೇಸುವನ್ನು ರಕ್ಷಕನನ್ನಾಗಿ ಸ್ವೀಕರಿಸಿರುವರು. 16 ಕುಟುಂಬದ ಸದಸ್ಯರುಗಳು ಪಾಪಕ್ಷಮಾಪಣೆಯನ್ನು ಹೊಂದಿದ ಇವರು, ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಭಾಗವಹಿಸುತ್ತಿರುವರು. ಜಂಜಾರ್ ಎಂಬ ಗ್ರಾಮದ ರಾಜೇಶ್ ಎಂಬವರು ಮಾನಸಿಕ ಕಾಯಿಲೆಯಿಂದ ಗುಣಹೊಂದಿರುವರು. ಈತನ ಮೂಲಕ ದೇವರ ನಾಮವು ಮಹಿಮೆ ಹೊಂದುತ್ತಿರುವದು.

**ಪ್ರಾರ್ಥಿಸಿರಿ:** 15 ವರ್ಷದ ಶಿವಾಜಿ ಎಂಬ ಯುವಕನು ಪಾರ್ಶ್ವವಾಯು ಕಾಯಿಲೆಯಿಂದ ಬಾಧೆಪಡುತ್ತಿರುವನು. ಯೌವನಸ್ಥನಾದ ನಾರಾಯಣ ಬುಂಟಾರಿಯ ಎಂಬವನು ಮಾದಕ ವಸ್ತುಗಳಿಗೆ ಒಳಗಾಗಿರುವನು. ಪನಿಯಪಾಲಿ ಎಂಬ ಗ್ರಾಮದಲ್ಲಿ ನಡೆಯುವ ಅನ್ವೇಷಕರ ಕೂಟದಲ್ಲಿ ಹೊಸ ಜನರು ಸೇರಿ ಬರುವಂತೆ ಪ್ರಾರ್ಥಿಸಿರಿ. ಬದ್ಲಾ ಹಾಗೂ ಬೆಹೊತ ಎಂಬ ಗ್ರಾಮಗಳಲ್ಲಿ ಸುವಾರ್ತೆಗಾಗಿ ಬಾಗಿಲುಗಳು ತೆರೆಯುವಂತೆ ಪ್ರಾರ್ಥಿಸಿರಿ.

## 24. ಅಸ್ಸಾಂ

**ಸ್ತುತಿಸಿರಿ:** 12 ಜನರು ವಿಶ್ವಾಸದ ಅರಿಕೆಯ ಮೂಲಕ ಯೇಸುವನ್ನು ಅಂಗೀಕರಿಸಿರುವನು. ಕಾಲೀಯಾಚುಕ್ ಎಂಬ ಸೇವಾಕ್ಷೇತ್ರದಲ್ಲಿ ನಡೆದ ಸಭಾ ಪ್ರತಿಷ್ಠೆಯಲ್ಲಿ ಸೇರಿ ಬಂದ 180 ಜನರಿಗೆ ದೇವರ ಪ್ರೀತಿಯ ಕುರಿತಾಗಿ ಸಾರಲ್ಪಟ್ಟಿರುವದು. ಕುರಿಚಾಪೋರಿ ಎಂಬ ಗ್ರಾಮದ ದೀಪಿಕ ವೇಗು ಎಂಬವರ ಸಾಕ್ಷಿಯ ಮೂಲಕ ಹೊಸ ಕುಟುಂಬವನ್ನು ಹೊಂದಿರುವೆವು. ಸುಬಕಾತಾ ಎಂಬ ಗ್ರಾಮದಲ್ಲಿ ಮೊಟ್ಟಮೊದಲ ಬಾರಿಗೆ 13 ಜನರು ಸುವಾರ್ತೆಯನ್ನು ಆಲಿಸಿರುವರು. ದೇವರಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ಬೊರದಾರ ಎಂಬ ಗ್ರಾಮದಲ್ಲಿ ಸತತವಾಗಿ ರಾತ್ರಿ ಕೂಟದಲ್ಲಿ ಕೂಡಿಬರುವ ಜನರಿಗಾಗಿ ಪ್ರಾರ್ಥಿಸಿರಿ. 24 ಜನರು ಪಾಪದರಿಕೆಯ ಪೂರ್ವಸಿದ್ಧತೆ ತರಬೇತಿಯಲ್ಲಿ ಭಾಗವಹಿಸುತ್ತಿರುವ ಜನರ ಆತ್ಮೀಕ ಬೆಳವಣಿಗೆಗಾಗಿ ಪ್ರಾರ್ಥಿಸಿರಿ. ಬಸವಂತ ಮತ್ತು ಮಲೋತಿ ಇವರ ಕುಟುಂಬಗಳಲ್ಲಿ ದೇವರು ಸಮಾಧಾನಕ್ಕಾಗಿ ಪ್ರಾರ್ಥಿಸಿರಿ. ಲಾಲ್ ಕುರ ಕ್ಷೇತ್ರದಲ್ಲಿ ನಂಬಿಕೆಯಲ್ಲಿ ಹಿಂಜಾರಿದ 4 ಜನರಿಗಾಗಿ ಪ್ರಾರ್ಥಿಸಿರಿ.

## 25. ಹರಿಯಾಣ

**ಸ್ತುತಿಸಿರಿ:** ಸೇವಾ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುತ್ತಿರುವ 20 ಮಿಷಿನರಿಗಳ ಸಂಖ್ಯೆಗೆ ಇನ್ನು ಇಬ್ಬರು ಸೇರ್ಪಡೆಗೊಂಡಿರುವರು. ಮಾಟೀ ವಿಶ್ವಾಸಿಗಳ ಅನ್ಯೋನ್ಯತೆ ಕೂಟದಲ್ಲಿ ರಾಕೇಷ್ ಎಂಬುವರ ಕುಟುಂಬವು ಸೇರ್ಪಡೆಗೊಂಡಿರುವದು. 45 ಜನರ ನಂಬಿಕೆಯು ಕ್ರಿಸ್ತನಲ್ಲಿ ಬಲಹೊಂದುತ್ತಿರುವದು. 111 ಸ್ಥಳಗಳಲ್ಲಿ ನಡೆದ ಅನ್ವೇಷಕರ ಕೂಟದ ಮೂಲಕ 541 ಜನರು ದೇವರ ಪ್ರೀತಿಯನ್ನು ಆಲಿಸಲು ಕರ್ತನು ಸಹಾಯ ಮಾಡಿದನು.

**ಪ್ರಾರ್ಥಿಸಿರಿ:** ದಾಂದ, ಶೆರಘಾರ ಮತ್ತು ಬೋರಾಕೇರ್ ಎಂಬ ಗ್ರಾಮಗಳಲ್ಲಿ ಸತತವಾಗಿ ನಡೆಯುವ ಯೌವನಸ್ಥರ ಕೂಟಗಳ ಮೂಲಕ ಯೌವನಸ್ಥರು ಪೂರ್ಣಾವಧಿ ಸೇವಕರು ಸಿದ್ಧರಾಗುವುದಕ್ಕಾಗಿ ಪ್ರಾರ್ಥಿಸಿರಿ. ಜನಚೋಳಿ ಎಂಬ ಸೇವಾಕ್ಷೇತ್ರದ ರಾಕೇಶ್ ಎಂಬವರು ಮೆದುಳು ಕ್ಯಾನ್ಸರಿನಿಂದ ಬಾಧೆಪಡುತ್ತಿರುವರು. ಸಿರಸಾ ಎಂಬ ಗ್ರಾಮದಲ್ಲಿ ವಿಶ್ವಾಸದರಿಕೆಯ ಪೂರ್ವಸಿದ್ಧತೆ ತರಬೇತಿಗಾಗಿ ಪ್ರಾರ್ಥಿಸಿರಿ. ಕೈತಾಳ ಮತ್ತು ದುರುಕ್ಷೇ ಗ್ರಾಮಗಳಿಗೆ ಸೇವಕರನ್ನು ಕಳುಹಿಸಲು ಪ್ರಾರ್ಥಿಸಿರಿ.

## 26. ಸಿಕ್ಕಿಂ

**ಸ್ತುತಿಸಿರಿ:** ಬುದ್ಧ ಛೆತ್ರಿ ಎಂಬ ಕುಟುಂಬವು 3 ವರ್ಷಗಳ ನಂತರ ಸುವಾರ್ತೆಯ ಮೂಲಕ ಕೂಡಿ ಜೀವಿಸಲು ಕರ್ತನು ಸಹಾಯ ಮಾಡಿರುವನು. ರಕ್ಷೈ ಸೇವಾಕ್ಷೇತ್ರದಲ್ಲಿ ಸೇವಕರಿಗಾಗಿ ವಸತಿಯನ್ನು ನಿರ್ಮಿಸಲಾಯಿತು. ತಮಂಗ್ ಎಂಬವರು ಕಳೆದ ಒಂದು ವರ್ಷದಿಂದ ಪಾರ್ಶ್ವವಾಯುವಿನಿಂದ ಬಾಧೆಗೊಳಗಾಗಿ ಹಾಸಿಗೆಯಲ್ಲಿದ್ದರು. ಈಗ ಅವರು ಯೇಸುವಿನ ನಾಮದಲ್ಲಿ ನಡೆದಾಡುತ್ತಿರುವರು. ಸುವಾರ್ತೆಯನ್ನು ಆಲಿಸಿದ 206 ಜನರಲ್ಲಿ 33 ಜನರು ಯೇಸುವಿನ ಮೇಲೆ ನಂಬಿಕೆಯನ್ನಿಟ್ಟು ಪಾಪದ ಅರಿಕೆ ಮಾಡಿಕೊಳ್ಳಲು ಸಿದ್ಧರಾಗಿರುವರು. ಕರ್ತನಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** ಕ್ಯಾನ್ಸರ್ ಕಾಯಿಲೆಯಿಂದ ಬಾಧೆಪಡುತ್ತಿರುವ ತುಮಿನ್ ಮತ್ತು ಲೋವೆರ್ ರಿಂಬಿ ಸೇವಾಕ್ಷೇತ್ರದಲ್ಲಿರುವ ವಿಶ್ವಾಸಿಗಳ ಆತ್ಮೀಕ ಬೆಳವಣಿಗೆಗಾಗಿ ಪ್ರಾರ್ಥಿಸಿರಿ. ತೆಸ್ಸೆಂಗತಾಂಗ ಮತ್ತು ಹತ್ತಿದುಂಗ ಎಂಬ ಗ್ರಾಮಗಳಲ್ಲಿ ಹೆಚ್ಚುತ್ತಿರುವ ವಿಶ್ವಾಸಿಗಳಿಗಾಗಿ ಸಭಾಕಟ್ಟಡ ಕಟ್ಟಲು ಸೂಕ್ತ ದಾಖಲೆಗಳು ದೊರಕುವಂತೆ ಪ್ರಾರ್ಥಿಸಿರಿ. ಬಿಕ್ಕಿರೈ ಮತ್ತು ಯುಸೂದ್ ರೈ ಸೇವಕರ ಮೂಲಕ ನಡೆಯುವ ಅನ್ವೇಷಕರ ಕೂಟದಲ್ಲಿ ಹೊಸ ಜನರು ಕೂಡಿಬರುವಂತೆ ಪ್ರಾರ್ಥಿಸಿರಿ.

## ಸುವಾರ್ತೆ – ಜೀವ ನೀಡುವ ಬೆಳಕು



ನಾನು ಬಿಹಾರದ ರೂಪಸ್ಪುರದ ಬಳ್ಳಿಯವನು. ನಾನು ಖಿನ್ನತೆಗೆ ಒಳಗಾಗಿದ್ದೆ ಮತ್ತು ಅದು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲಿತ್ತು. ನಾನು ಜೀವನದಲ್ಲಿ ಹೇಗೆ ಕ್ರಿಯಾಶೀಲನಾಗಿರಬೇಕೆಂದು ನನಗೆ ತಿಳಿದಿರಲಿಲ್ಲ. ಅನೇಕ ತಿಂಗಳುಗಳವರೆಗೆ ನಾನು ನನ್ನ ಶಾಂತಿ ಮತ್ತು ಸಂತೋಷವನ್ನು ಕಳೆದುಕೊಂಡಿದ್ದೆನು. ಆಗ ಒಬ್ಬ ಸೇವಕರು ಭಾರ ಹೊತ್ತಿರುವವರೆಲ್ಲರನ್ನು ಆಮಂತ್ರಿಸುವ ಯೇಸುವನ್ನು ನನಗೆ ಪರಿಚಯಿಸಿದರು. ನನ್ನ ಹೃದಯವನ್ನು ಕಾಡುತ್ತಿರುವ ಅಲೆಗಳನ್ನು ಶಾಂತಗೊಳಿಸುವ ಶಕ್ತಿ ಯೇಸುವಿಗೆ ಇದೆ ಎಂಬುದನ್ನು ನಾನು ಜೀವವಿರುವ ವಾಕ್ಯಗಳ ಮೂಲಕ ತಿಳಿದುಕೊಂಡೆ. ನಾನು ನನ್ನ ಪಾಪವನ್ನು ಮತ್ತು ಯೇಸುವಿನಲ್ಲಿರುವ ನನ್ನ ನಂಬಿಕೆಯನ್ನು ಅರಿಕೆ ಮಾಡಿದೆ. ಈ ಹೊಸ ಅನುಭವದ ಮೂಲಕ ನಾನು ಶಾಂತಿಯನ್ನು ಪಡೆದುಕೊಂಡೆ ಮತ್ತು ಕ್ರಿಸ್ತನಲ್ಲಿ ಹೊಸ ಸೃಷ್ಟಿಯಾದೆ. ನನ್ನ ಸಂಬಂಧಿಕರ ಮತ್ತು ಹಳ್ಳಿಯ ಜನರ ಮೂಲಕ ಬಂದ ವಿರೋಧಗಳನ್ನು ನಾನು ಎದುರಿಸುತ್ತಿದ್ದೇನೆ. ಆದರೆ ಅವುಗಳನ್ನು ನಾನು ಕ್ರಿಸ್ತನ ಪ್ರೀತಿಯ ಮೂಲಕ ಎದುರಿಸುತ್ತಿದ್ದೇನೆ. ನನ್ನ ಇಡೀ ಕುಟುಂಬವನ್ನು ಕ್ರಿಸ್ತನಿಗಾಗಿ ಬಿಡುಗಡೆಗೊಳಿಸಲು ನಾನು ದೇವರ ಕೃಪೆಯನ್ನು ಪಡೆದುಕೊಂಡಿದ್ದೇನೆ. ಕತ್ತಲೆಯಿಂದ ನನ್ನನ್ನು ಬೆಳಕಿನೆಡೆಗೆ ತಂದ ಬೆಳಕನ್ನು ನನ್ನ ಸಂಬಂಧಿಕರೊಂದಿಗೆ ಹಂಚಿಕೊಳ್ಳಬೇಕೆಂಬ ನನ್ನ ಆಸೆಯು ಕ್ರಿಸ್ತನ ಮೂಲಕ ಈಡೇರಲಿ. **ಪುಷ್ಪಾ ಕುಮಾರಿ, ಹೊಸ ವಿಶ್ವಾಸಿ**

# ಸುಗ್ಗಿಯ ಯಜಮಾನನ ಹೆಜ್ಜೆಗಳನ್ನು ಅನುಸರಿಸುವುದು

ನಿಗದಿತ ಸಮಯದಲ್ಲಿ ಭಾರತದಾದ್ಯಂತ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತದೆ, ಇದರಿಂದಾಗಿ ಮಿಷನರಿಗಳು ಮತ್ತು ವಿಶ್ವಾಸಿಗಳು ಆತ್ಮಗಳ ಸುಗ್ಗಿ, ದೇವರ ವಾಕ್ಯ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಬೇರೂರುತ್ತಾರೆ. ಏಪ್ರಿಲ್ 17 ರಿಂದ 19 ರವರೆಗೆ ಹೈದರಾಬಾದ್‌ನಲ್ಲಿ ನಡೆದ ತರಬೇತಿಯಲ್ಲಿ ಭಾರತದಾದ್ಯಂತದ 56 ಸಂಯೋಜಕರು ಭಾಗವಹಿಸಿದ್ದರು. ಅವರು 'ರಾಜ ಮತ್ತು ರಾಜ್ಯ' ಎಂಬ ಶೀರ್ಷಿಕೆಯಡಿಯಲ್ಲಿ ವಾಕ್ಯದಲ್ಲಿ ಬಲಗೊಳಿಸಲ್ಪಟ್ಟರು, ಇದರಿಂದಾಗಿ ಅವರು ದೇವರ ವಾಕ್ಯವನ್ನು ಬಳಸುತ್ತಾರೆ. ಕ್ಷೇತ್ರದಲ್ಲಿ ಗರಿಷ್ಠ.

ತರಬೇತಿಯನ್ನು ನಡೆಸಿದ್ದಕ್ಕಾಗಿ ನಾವು 'ಇಂಟರ್ ನ್ಯಾಷನಲ್ ಕ್ರಿಶ್ಚಿಯನ್ ಮಿಷನ್'ಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಒಮ್ಮೆಯೂ ಸುವಾರ್ತೆಯನ್ನು ಕೇಳದ ಹಳ್ಳಿಗಳಿಗೆ ಸುವಾರ್ತೆಯನ್ನು ಹಂಚುವ ದೂರದೃಷ್ಟಿಯೊಂದಿಗೆ ಇದು ಕಾರ್ಯನಿರ್ವಹಿಸುತ್ತದೆ. ತರಬೇತಿಯ ಪ್ರಮುಖ ಗುರಿಯು ಏನೆಂದರೆ, ಯೇಸುಕ್ರಿಸ್ತನ ಸುವಾರ್ತೆಯನ್ನು ಭಾರತದಾದ್ಯಂತ ಸಾರಬೇಕು ಮತ್ತು ಹಳ್ಳಿಗಳು ಮತ್ತು ಜನರನ್ನು ನಿಜವಾದ ಬೆಳಕಿಗೆ ಕರೆತರುವ ದಾರಿದೀಪಗಳಾಗಿ ಬೆಳಗಬೇಕು.

ವಿಶ್ವಾಸಿಗಳು ಮತ್ತು ಮಿಷನರಿಗಳು ದೇವರ ವಾಕ್ಯ ದಲ್ಲಿ ಬೇರೂರಬೇಕೆಂದು ಪ್ರಾರ್ಥಿಸುವುದನ್ನು ಮುಂದುವರಿಸಿರಿ.

**ತರಬೇತಿ ಸೇವೆಗಳ ಸಂಯೋಜಕರು**



# ಫಲಪ್ರದ ಜೀವನ – ದೇವರಿಂದ ಬಂದ ಆಶೀರ್ವಾದ

ನಾನು ಛತ್ತೀಸ್‌ಗಢದ ಸುಖರಪಾರಾ ಗ್ರಾಮದವಳು ಮತ್ತು ನಾನು ಲೌಕಿಕವಾಗಿ ಜೀವನವನ್ನು ನಡೆಸುತ್ತಿದ್ದೆ. ಯೌವನದಲ್ಲಿ ನಾನು ಸುಖರಪಾರ ಗ್ರಾಮದಲ್ಲಿ ಯೇಸುವನ್ನು ಹಿಂಬಾಲಿಸುವ ಕೆಲವು ಜನರನ್ನು ನೋಡಿದೆ. ನಾನು ನನ್ನ ಸ್ನೇಹಿತರ ಜೊತೆ ಸೇರಿ ಅವರನ್ನು ಪರಿಹಾಸ್ಯ ಮಾಡುತ್ತಿದ್ದೆ. ಆದರೆ ಯೇಸುವಿನ ಪ್ರೀತಿಯ ಕೈಗಳು ನನ್ನನ್ನು ಬಿಡಲಿಲ್ಲ. ಅನಿರೀಕ್ಷಿತವಾಗಿ ದೇವರು ಒಬ್ಬ ವಿಶ್ವಾಸಿ ಕುಟುಂಬದೊಂದಿಗೆ ಒಂದುಗೂಡಿಸಿದನು. ಯೇಸು ಯಾರೆಂದು ಅರ್ಥಮಾಡಿಕೊಳ್ಳಲು ಮತ್ತು ಆತನಿಂದ ನಾವು ಪಡೆಯುವ ಶಾಶ್ವತ ಜೀವನವನ್ನು ತಿಳಿದುಕೊಳ್ಳಲು ಅವನು ನನ್ನನ್ನು ಸಿದ್ಧಪಡಿಸಿದನು.

ಇಂದು ನಾನು ಫಲಪ್ರದವಾದ ಜೀವನ ನಡೆಸುತ್ತಿದ್ದೇನೆ. ನಾನು ಈಗ ನಮ್ಮ ಮನೆಯ ಹತ್ತಿರ ವಾಸಿಸುವ ಮಹಿಳೆಯರೊಂದಿಗೆ ನನ್ನ ಜೀವನದ ಮೂಲಕ ದೇವರ ಪ್ರೀತಿ ಮತ್ತು ಆತನ ವಾಕ್ಯವನ್ನು ಹಂಚಿಕೊಳ್ಳಲು ಸಮರ್ಥನಾಗಿದ್ದೇನೆ. ಸಮಸ್ಯೆಗಳು ಮತ್ತು ಕಣ್ಣೀರಿನಲ್ಲಿ ಮುಳುಗಿರುವವರು ಸುವಾರ್ತೆಯ ಮೂಲಕ ದಡವನ್ನು ತಲುಪಲಿ.



**– ದಿವ್ಯಾ ಬೆಕ್**

# ಪ್ರಸ್ತುತ ಸುದ್ದಿ

- 050ರ ವೇಳೆಗೆ ಆರು ಖಂಡಗಳಾದ್ಯಂತ 216 ಮಿಲಿಯನ್ ಜನರು ತಮ್ಮ ದೇಶಗಳಲ್ಲಿ ಸ್ಥಳ ಬದಲಾವಣೆಯನ್ನು ಮಾಡುವಂತೆ ಒತ್ತಾಯಿಸಲ್ಪಡುತ್ತಾರೆ ಎಂಬ ನಿರೀಕ್ಷೆಯನ್ನು ಹವಾಮಾನ ಬದಲಾವಣೆಯು ವರದಿ ಎತ್ತಿ ತೋರಿಸುತ್ತದೆ. ಹವಾಮಾನ ಬದಲಾವಣೆಯು ವಲಸೆ ಹೋಗುವ ಒಂದೇ ಒಂದು ಮಾರ್ಗವಲ್ಲ, ಇದು ಸಮುದಾಯಗಳು ಮತ್ತು ವ್ಯವಸ್ಥೆಗಳ ಮೇಲೆ ಅಸ್ತಿತ್ವದಲ್ಲಿರುವ ಒತ್ತಡವನ್ನು ಉಲ್ಬಣಗೊಳಿಸುತ್ತದೆ, ಮತ್ತು ಸ್ಥಳಾಂತರವನ್ನು ಹೆಚ್ಚಿಸುತ್ತದೆ.
- ವರದಿಯು ಮುಖ್ಯವಾದ ವಲಸೆಯ ಅಂಕಿ ಅಂಶಗಳ ಅವಲೋಕನವನ್ನು ಒದಗಿಸುತ್ತದೆ:
- 2020ರಲ್ಲಿ ಜಾಗತಿಕವಾಗಿ 281 ಮಿಲಿಯನ್ನ ಅಂತರಾಷ್ಟ್ರೀಯವಾಗಿ ವಲಸೆ ಹೋದವರು (ವಿಶ್ವದ ಜನಸಂಖ್ಯೆಯ 3.6).
- 2019ರಲ್ಲಿ ಜಾಗತಿಕವಾಗಿ 169 ಮಿಲಿಯನ್ ಕಾರ್ಮಿಕರು ವಲಸೆ ಹೋದರು.
- 2023ರಲ್ಲಿ ಜಾಗತಿಕವಾಗಿ ಸುಮಾರು 8,500 ಮಿಲಿಯನ್ ವಲಸಿಗರು ಸತ್ತು ಹೋಗಿದ್ದಾರೆ ಅಥವಾ ಕಾಣೆಯಾಗಿದ್ದಾರೆ ಎಂದು ವರದಿ ಮಾಡಿದೆ.
- ಆದಾಗ್ಯೂ, ಸ್ಥಳಾಂತರದ ಕಾಣದಿಂದಾಗಿ ಮಾನವೀಯ ಬಿಕ್ಕಟ್ಟುಗಳು ಒಂದು ಮುಖ್ಯವಾದ ಸವಾಲಾಗಿ ಉಳಿದುಕೊಂಡಿವೆ. ಆಧುನಿಕ ಯುಗದ ದಾಖಲೆಯಲ್ಲಿ ಬಲವಂತದ ಸ್ಥಳಾಂತರವು ಅತ್ಯಧಿಕವಾಗಿದೆ, ಪರಿಸರದ ಪರಿಣಾಮಗಳು ಮತ್ತು ಹವಾಮಾನ ಬದಲಾವಣೆಯಿಂದ ಮತ್ತಷ್ಟು ಉಲ್ಬಣಗೊಂಡಿದೆ ಎಂಬುದನ್ನು ತೋರಿಸುತ್ತದೆ.

**ಪರಲೋಕದ ತಂದೆಯೇ, ದೇಶದಿಂದ ಬೇರೆ ದೇಶಕ್ಕೆ ವಲಸೆ ಹೋಗುವವರನ್ನು ರಕ್ಷಿಸು.**

## State Promotional Workers, Place & Contact Numbers

| | | |
|---|---|---|
| **Rev. M. Bhadrinath** | State Coordinator | Cell : 9901958884 |
| **Rev. Dr. Nohan Raj** | Bangaluru | Cell : 9880329789 |
| **Pastor A.N. Elisha** | Bangaluru | Cell : 9740849557 |
| **Mr. Vijaya Kumar M.** | Bangaluru | Cell : 9341073508 |
| **Mr. Gabriel** | Bangaluru | Cell : 9448559300 |
| **Rev. Anandappa** | Bangaluru | Cell : 9972425477 |
| **Mr. Raju. N** | Bangaluru | Cell : 9632288011 |
| **Mr. Harshath Kumar** | B'luru Rural & Tumkur | Cell : 6362708520 |
| **Mr. Stephen (Muruga)** | Bangaluru | Cell : 9731182148 |
| **Rev. Joseph Ravikumar** | Mysuru | Cell : 9980353736 |
| **Rev. Emmanuel Sampath** | Mandya | Cell : 9591867967 |
| **Mr. Raju S.** | Rayachuru | Cell : 8123522508 |
| **Mr. Suresh** | Hubballi | Cell : 9686523038 |
| **Mr. Raju Mark** | Belagavi | Cell : 6363318629 |
| **Mr. Bharath Kumar** | Davanagere | Cell : 9916413901 |
| **Rev. Daniel Joseph** | Bidar | Cell : 9980391205 |
| **Mr. Y.C. Peter** | Kalaburgi | Cell : 7899957900 |
| **Mr. Naveen Kumar D.S** | Bellary | Cell : 730634697 |



# ಘನ. ಡಾ. ಇ.ಪಿ. ಎಡ್ವಿನ್ ರ
## ಸೇವೆಗಳ ಒಂದು ಸ್ಮರಣೆ

ಘನ. ಡಾ.ಇ.ಪಿ. ಎಡ್ವಿನ್ ರನ್ನು ದೇವರು ಆರೋನನಂತೆ ಗೌರವಾನ್ವಿತ ಸೇವೆಗಾಗಿ ಕರೆಯಲ್ಪಟ್ಟರು ಮತ್ತು ಅವರು ಮಧುರೈ – ರಾಮನಾಥಪುರಂ ಡಯೋಸೀಸ್ ನಲ್ಲಿ ಪ್ರೆಸ್ಬಿಟರ್ ಆಗಿ ದೇವರಿಂದ ಪ್ರಬಲವಾಗಿ ಬಳಸಲ್ಪಟ್ಟರು. ಅವರು 92 ನೇ ವಯಸ್ಸಿನಲ್ಲಿ 10 ನೇ ಮೇ 2024 ರಂದು ಮಹಿಮೆಯೊಳಗೆ ಪ್ರವೇಶಿಸಿದರು.

ಘನ. ಡಾ. ಇ.ಪಿ. ಎಡ್ವಿನ್ ಅವರು ಸಾಕ್ಷಿಯುಳ್ಳ ಪರಿಶುದ್ಧವಾದ ಜೀವನವನ್ನು ನಡೆಸಿದರು. ಅವರು ದೇವರ ರಾಜ್ಯವನ್ನು ನಿರ್ಮಿಸುವ ಮೂಲಕ ಮತ್ತು ಸ್ವಾರ್ಥಯುತ ಆಸೆಗಳನ್ನು ನಿರಾಕರಿಸುವ ಮೂಲಕ ಸುವಾರ್ತೆಯನ್ನು ಹರಡುವಲ್ಲಿ ತಮ್ಮನ್ನು ಸಮರ್ಪಿಸಿಕೊಂಡರು. ಈಗ ಶಾಂತಿಯಿಂದ ಕ್ರಿಸ್ತನಲ್ಲಿ ವಿಶ್ರಾಂತಿ ಪಡೆಯುತ್ತಿರುವ ಈ ದೇವರ ಮನುಷ್ಯನ ಜೀವನವನ್ನು ಸ್ಮರಿಸುತ್ತಾ ನಾವು ದೇವರಿಗೆ ಕೃತಜ್ಞತೆ ಸಲ್ಲಿಸುತ್ತೇವೆ ಮತ್ತು ಸ್ತುತಿಸುತ್ತೇವೆ.

ಸೇವಕರು ಮಾತ್ರವಲ್ಲದೆ ಎಲ್ಲಾ ವಿಶ್ವಾಸಿಗಳು ಸುವಾರ್ತೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ದೇವರಿಂದ ಆಶೀರ್ವಾದ ಪಡೆಯಬೇಕು ಎಂಬದು ದೇವರ ವಿಶ್ರಾಂತಿ ಪಡೆಯುತ್ತಿರುವ ಈ ದೇವರ ಮನುಷ್ಯನ ಜೀವಿತವನ್ನು ನೆನಪಿಸಿಕೊಳ್ಳುತ್ತಾ ನಾವು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ ಮತ್ತು ಕೊಂಡಾಡುತ್ತೇವೆ.

ಅವರು ಮತ್ತು ಅವರ ಕುಟುಂಬವು ಮಧುರೈನ ಪಸುಮಲೈನಲ್ಲಿದ್ದ ತಮ್ಮ ಸ್ವಂತ ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೆ. ಅಲ್ಲಿ ನಾವು ವಿಶ್ವವಾಣಿ ಪ್ರಾರ್ಥನಾ ಕೇಂದ್ರವನ್ನು ಹೊಂದಿದ್ದೇವೆ. ಭಾರತದ ಪೂರ್ವದಲ್ಲಿರುವ ಹಳ್ಳಿಗಳಲ್ಲಿ ಸುವಾರ್ತೆಯನ್ನು ಹಂಚಿಕೊಳ್ಳಲು ದಾರಿಯನ್ನು ಮಾಡಿಕೊಟ್ಟಿದ್ದಾರೆ. ಅಲ್ಲದೇ, ಅವರು ಭಾರತದ ಉತ್ತರ ಈಶಾನ್ಯದಲ್ಲಿರುವ ಹಳ್ಳಿಗಳಲ್ಲಿಯೂ ಸಹ ಸುವಾರ್ತೆಯನ್ನು ಹಂಚಿಕೊಳ್ಳಲು ದಾರಿಯನ್ನು ಮಾಡಿಕೊಟ್ಟಿದ್ದಾರೆ. ಘನ. ಡಾ. ಎ.ಪಿ. ಎಡ್ವಿನ್ ರವರ ಮೂಲಕ ಬೆಂಬಲಿಸಲ್ಪಟ್ಟ ಸೇವಕರು ಭಾರತದಾದ್ಯಂತ ಸುವಾರ್ತೆಯನ್ನು ಹಂಚಿಕೊಳ್ಳುತ್ತಿದ್ದಾರೆ.

ದೇವರು ತಿರುಗಿ ಹಿಂತಿರುಗಿ ಬರಲಿರುವ ದಿನದಂದು ಎಡ್ವಿನ್ ಅಯ್ಯನವರು ಆತನೊಂದಿಗೆ ಹಿಂತಿರುಗಿ ಬಂದಾಗ ಅವರನ್ನು ಭೇಟಿಯಾಗುವೆವು ಎಂಬ ನಂಬಿಕೆಯನ್ನು ಕರ್ತನು ನಮಗೆ ಕೊಡಲಿ. ನಾವು ಅವರ ಮಾದರಿಯನ್ನು ಅನುಸರಿಸುತ್ತಾ ಕರ್ತನಿಗೆ ಸಾಕ್ಷಿಯಾಗಿರೋಣ. ಸುವಾರ್ತೆಯನ್ನು ಹಂಚಿಕೊಳ್ಳುವ ಉತ್ಸಾಹವನ್ನು ಹೃದಯಗಳಲ್ಲಿ ತುಂಬಿಕೊಂಡಿರುವ ಸರಳ, ದೀನ ಜನರನ್ನು ಕರ್ತನು ದೇವಾಲಯಗಳಲ್ಲಿ ಅಭಿವೃದ್ಧಿಪಡಿಸಿ ಹೆಚ್ಚಿಸಲಿ.

ಘನ. ಡಾ. ಇ.ಪಿ. ಎಡ್ವಿನ್ ರವರ ಪತ್ನಿಯಾದ ಶ್ರೀಮತಿ ಗ್ರೇಸ್ ಮತ್ತು ಅವರ ಮಕ್ಕಳಾದ ಕ್ಲೆಮೆಂಟ್ – ವಿನಿಫ್ರೆಡ್ ದೇವದಾಸ್ ಮತ್ತು ಜಾನ್ಸನ್ ಮತ್ತು ಅವರ ಕುಟುಂಬಗಳಿಗಾಗಿ ದಯಮಾಡಿ ಪ್ರಾರ್ಥಿಸಿರಿ. ಅಲ್ಲದೆ, ಮುಂದೆ ಬರಲಿಕ್ಕಿರುವ ಪೀಳಿಗೆಗೆ ಸಹ ದೇವರು ತನ್ನ ಕೃಪೆಯನ್ನು ತೋರಿಸಲಿ ಎಂದು ದಯವಿಟ್ಟು ಪ್ರಾರ್ಥಿಸಿರಿ.

RNI REGD. No. RN. AP KAN/2000/1565 | POSTAL REGD. No. HQ/SD/314/2024-2026 - KANNADA | DATE OF PUBLICATION 20.05.2024
LICENSED TO POST WITHOUT PREPAYMENT - PMG/TS/HQR/SC-02/WPP/2024-2026

**Return Requested: VISHWAVANI SAMARPAN,**
**1-10-28/247, Anandapuram,**
**ECIL Post, Hyderabad - 500 062.**

**ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಯನ್ನು ಹಂಚಿಕೊಳ್ಳುವ ಸೇವಕರು ಮತ್ತು ಸೀಮೆಗಳ ಆಚೆ ಪ್ರದೇಶಗಳಲ್ಲಿ ಸುವಾರ್ತೆಯನ್ನು ಸ್ವೀಕರಿಸುತ್ತಿರುವ ಜನರು ಹೆಚ್ಚಾಗುತ್ತಲಿದ್ದಾರೆ. ಪರಲೋಕದಲ್ಲಿ ದೂತರು ಉಲ್ಲಾಸದಿಂದ ಸಂತೋಷಪಡುತ್ತಿದ್ದಾರೆ. ಕರ್ತನಿಗೆ ಸ್ತೋತ್ರಗಳು.**

**ಸೋನೇಗಾಂವ್, ಮಹಾರಾಷ್ಟ್ರ – 11.04.24**



**ದತ್ತಪ್ಪಗುಡೆಮ್, ತೆಲಂಗಾಣ – 16.04.2024**



**ದುಮುರ್ದಿಹ, ಒಡಿಷಾ – 26.04.2024**



**ಕಲಿಯಾಚುಕ್, ಅಸ್ಸಾಂ – 28.04.2024**



**ಸಿಟಿಎಂ ಗುಡಾ, ಆ.ಪ್ರ. – 05.05.2024**




**ಅಂತಿವಲಸ, ಆ.ಪ್ರ. – 05.05.2024**




**VISHWA VANI SAMARPAN - <KANNADA> LANGUAGE**
Printed and Published by P. Selvaraj on behalf of VISHWA VANI, a registered society ( Regn. No.17871 of 1987) and printed at CAXTON Offset Pvt. Ltd., 11-5-416/3, Red Hills, HYD-04. and published at 1-10-28/247, Anandapuram, ECIL Post, HYD-62. **POSTING DATE: 24.05.2024.** EDITOR: P. SELVARAJ.